**Published On: 26/01/2023**

ವರ್ಗ – ೮೦

**ಪೇಜ್ಯಾಪ್**

**ನಿಯಮ ಮತ್ತು ಷರತ್ತುಗಳ ದಾಖಲೆ**

**ಆವೃತ್ತಿ 2.0 2023 [.]ರಿಂದ ಜಾರಿ**

ಈ ನಿಯಮ ಮತ್ತು ಷರತ್ತುಗಳನ್ನು (ಈ ಮುಂದೆ ವಿವರಿಸಿರುವಂತೆ) ಒಪ್ಪಿಕೊಂಡಲ್ಲಿ, ಗ್ರಾಹಕನು ಬ್ಯಾಂಕಿಗೆ ತಾನು ಬೇರೊಬ್ಬ ವ್ಯಕ್ತಿ ಅಥವಾ ಘಟಕದ ಸೋಗನ್ನು ಹಾಕಿಲ್ಲ ಅಥವಾ ತನ್ನ ವಯಸ್ಸು, ಯಾವುದೇ ವ್ಯಕ್ತಿಯೊಂದಿಗೆ ಅಥವಾ ಘಟಕದೊಂದಿಗಿನ ಸಂಬಂಧದ ಬಗ್ಗೆ ಸುಳ್ಳು ಮಾಹಿತಿ ನೀಡಿಲ್ಲವೆಂದು ಭರವಸೆ ನೀಡಿರುತ್ತಾನೆ/ರೆ. ಯಾವುದೇ ಸಂದರ್ಭದಲ್ಲಿ ಪುರುಷಾಂತರ/ಸೋಗು ಹಾಕಿರುವುದು ಅಥವಾ ಗ್ರಾಹಕನು ಸಲ್ಲಿಸಿರುವ ಮಾಹಿತಿಯು ಸೋಗನ್ನು ಸೂಚಿಸುವಂತಿರುವುದು ಅಥವಾ ಯಾವುದೇ ಮಾಹಿತಿಯು ಪರಿಶೀಲನೆಗೆ ಒಳಪಟ್ಟಿಲ್ಲವೆಂಬುದು ಕಂಡುಬಂದಲ್ಲಿ, ಅಂತಹ ಗ್ರಾಹಕನಿ(ರಿ)ಗೆ ಪೇಜ್ಯಾಪ್ ಸೇವಾಸಕರ್ಯಗಳನ್ನು (ಈ ನಂತರ ಪ್ರಸ್ತುತಪಡಿಸಲ್ಪಡುವ) ಯಾವುದೇ ಪೂರ್ವಾನುಮತಿ ಇಲ್ಲದೆ ಅಥವಾ ಮಾಹಿತಿ ನೀಡದೆ ಸಂಪೂರ್ಣವಾಗಿ ಅಥವಾ ಭಾಗಶಃ ಹಿಂಪಡೆಯುವುದು ಕೇವಲ ಬ್ಯಾಂಕಿನ ಸ್ವಂತ ವಿವೇಚನೆಗೆ ಸೇರಿರತಕ್ಕದ್ದು. ಗ್ರಾಹಕರು ವ್ಹಾಟ್ಸಪ್, ಎಸ್ಎಂಎಸ್, ಅಧಿಸೂಚನೆ ಮತ್ತು ಈ-ಮೇಲ್ ಮೂಲಕ ಸಂವಹನಗಳನ್ನು ಸ್ವೀಕರಿಸಲು ಒಪ್ಪಿರುತ್ತಾರೆ.

1. **ವ್ಯಾಖ್ಯಾನಗಳು**

**"ಅನ್ವಯವಾಗುವ ಕಾನೂನು(ಗಳು)"** ಎಂದರೆ, ನಿಯಮ, ಶಾಸನ, ಅನುಶಾಸನ, ಅಧಿನಿಯಮ, ತೀರ್ಪು, ಸೂಚನೆ, ಅಧಿಸೂಚನೆ, ಗೊತ್ತುವಳಿ, ಸುಗ್ರೀವಾಜ್ಞೆ, ಒಪ್ಪಂದ, ಕರಾರು, ಆಜ್ಞೆ, ಬೈಲಾಗಳು, ಸಾರ್ವಜನಿಕ ಶಾಸನ, ಅನುಶಾಸನ, ತೆರವುಗಳು, ನಿರ್ದೇಶನಗಳು, ಪ್ರಶಸ್ತಿಗಳು, ನೀತಿ-ನಿಯಮಾವಳಿಗಳು, ಪರವಾನಿಗಿ, ಅವಶ್ಯಕತೆ, ಬೇಡಿಕೆ, ಸರ್ಕಾರದ ನಿರ್ಬಂಧಗಳು ಅಥವಾ ಷರತ್ತುಗಳು, ಅದೇ ರೀತಿಯಿರುವ ಇತರ ಯಾವುದೇ ನಿರ್ಧಾರಗಳನ್ನೊಳಗೊಂಡಂತೆ, ಅಥವಾ ನಿರ್ಣಯ, ಅಥವಾ ಕಾನೂನಿನಷ್ಟೇ ಪರಿಣಾಮಕಾರಿಯಾಗಿರುವ ಜಾರಿಗೊಂಡ ಅಥವಾ ಕಾರ್ಯಗತವಾದ, ಅಥವಾ ಈ ಸಂಬಂಧದಲ್ಲಿರುವ ವಿಷಯದ ಮೇಲೆ ವ್ಯಾಪ್ತಿ ಹೊಂದಿರುವ ಯಾವುದೇ ಸರ್ಕಾರೀ ಅಧಿಕಾರ, ಪ್ರಸ್ತುತ ಕಾಲಕ್ಕೆ ಅನ್ವಯವಾಗುವ ಅಥವಾ ಕಾಲಾನುಕ್ರಮದಲ್ಲಿ ಕಾರ್ಯರೂಪಕ್ಕೆ ಬರಲಿರುವ, ಅವುಗಳ ತಿದ್ದುಪಡಿ, ಬದಲಾವಣೆ, ಪುನಃ ನಿಯಮಗೊಳಿಸಲ್ಪಟ್ಟ, ಕಾಲಾನುಕಾಲಕ್ಕೆ ಬದಲಿಸಲ್ಪಟ್ಟ ಅಥವಾ ಪರಿಷ್ಕರಿಸಲ್ಪಟ್ಟ ಎಲ್ಲ ನಿಯಮಾವಳಿಗಳು ಎಂದರ್ಥ.

**"ಬ್ಯಾಂಕ್"** ಎಂದರೆ ಹೆಚ್‌ಡಿಎಫ್ ಬ್ಯಾಂಕ್ ಲಿಮಿಟೆಡ್, ಎಂದೂ, 2013ರಲ್ಲಿ ಜಾರಿಗೊಳಿಸಲ್ಪಟ್ಟಿರುವ ಕಂಪೆನೀಸ್ ಆಕ್ಟ್ ನಲ್ಲಿ ವಿವರಿಸಲಾದ ಅರ್ಥದಲ್ಲಿ ಒಂದು ಸಂಸ್ಥೆ(ಕಂಪೆನಿ) ಎಂದೂ, ಬ್ಯಾಂಕ್ ಹೌಸ್, ಸೇನಾಪತಿ ಬಾಪಟ್ ಮಾರ್ಗ, ಲೋಯೆರ್ ಪ್ಯಾರೆಲ್, ಮುಂಬೈ 400 013 ಎಂಬ ವಿಳಾಸದಲ್ಲಿ ತನ್ನ ನೋಂದಾಯಿತ ಮುಖ್ಯ ಕಛೇರಿಯನ್ನು ಹೊಂದಿರುವ ಕಂಪೆನಿಯೆಂದೂ ಅರ್ಥ. ಅಲ್ಲದೇ, ವ್ಯಾಖ್ಯಾನಿಸಲಾಗುವ ಸಂದರ್ಭಕ್ಕೆ ಅಸಿಂಧು ಅಥವಾ ಅನುಚಿತವೆಂದು ತೋರುವ ಸಂದರ್ಭವನ್ನು ಹೊರತುಪಡಿಸಿ, ಉಳಿದೆಲ್ಲ ಸಂದರ್ಭಗಳಲ್ಲಿ ಕಂಪೆನಿಯ ಉತ್ತರಾಧಿಕಾರಿಗಳು ಮತ್ತು ನಿಯೋಜಿತರಾದವರನ್ನು ಒಳಗೊಂಡಿರುವುದು ಎಂದು ಅರ್ಥ.

**"ವ್ಯಾಪಾರ ದಿನ"** (ಬಿಸಿನೆಸ್ ಡೇ) ಎಂದರೆ, ಭಾನುವಾರ ಅಥವಾ ನೆಗೋಷಿಯಬಲ್ ಇನ್ಸ್ಟ್ರುಮೆಂಟ್ಸ್ ಆಕ್ಟ್, 1881ರ ಸೆಕ್ಷನ್ 25ರಲ್ಲಿ ಯಾವುದೇ ಘೋಷಿತ ಸಾರ್ವತ್ರಿಕ ರಜಾದಿನವಾಗಿರದ, ದಿನ ಮತ್ತು ಭಾರತದ ಮುಂಬೈ ನಗರದಲ್ಲಿ ಸಾಮಾನ್ಯ ಕ್ರಮದಲ್ಲಿ ಎಲ್ಲ ಶಾಖಾ ಕಛೇರಿಗಳೂ ತೆರೆದಿರುವ ದಿನ ಎಂದು.

**"ಕಾರ್ಡ್ ಅಸೋಸಿಯೇಷನ್(ನ್ಸ್)"** ಎಂದರೆ ಬ್ಯಾಂಕು ಕಾಲಕ್ರಮದಲ್ಲಿ ನಿರ್ಧಿಷ್ಟಗೊಳಿಸುವ ವಿಸಾ, ಮಾಸ್ಟರ್‌ಕಾರ್ಡ್, ಡೈನರ್ಸ್, ರುಪೈ, ಡಿಸ್ಕವರ್ ಅಥವಾ ಇತರ ಕಾರ್ಡ್ ಅಸೋಸಿಯೇಷನ್ ಎಂದರ್ಥ.

**"ಕಾರ್ಡ್ಸ್"** ಎಂದರೆ, ಅವಧಿ ಮೀರಿರದ ಕ್ರೆಡಿಟ್ ಕಾರ್ಡ್ ಅಥವಾ ಡೆಬಿಟ್ ಕಾರ್ಡ್, ಅಥವಾ ಯಾವುದೇ ಕಾರ್ಡ್ ಅಸೋಸಿಯೇಷನ್ನಿನಿಂದ ನಿಯೋಜಿಸಲ್ಪಟ್ಟ ಸಂಸ್ಥೆಯಿಂದ ನೀಡಲಾಗಿರುವ ಪ್ರೀಪೈಡ್ (ಮುಂಚಿತವಾಗಿ ಹಣ ಸಂದಾಯಿಸಲ್ಪಟ್ಟ) ಕಾರ್ಡ್ ಎಂದರ್ಥವಾದರೂ ಪ್ರಸ್ತುತ ಮುನ್ನೆಚ್ಚರಿಕೆ ಅಥವಾ ನಿರ್ಬಂಧಗೊಳಿಸುವ ಕಾರ್ಡ್ ಬುಲೆಟಿನ್ ಅಥವಾ ಅನುಸೂಚಿತ ಕಾರ್ಡ್‌ಗಳ ಪಟ್ಟಿಯಲ್ಲಿ ಸೇರಿರದ ಕಾರ್ಡ್ ಎಂದು ಅರ್ಥ.

**"ಕ್ಯಾಶ್‌ಬ್ಯಾಕ್"** ಎಂದರೆ ಈ ಸಂಬಂದದಲ್ಲಿ ಬ್ಯಾಂಕ್ ಕಾಲಾನುಕಾಲಕ್ಕೆ ನಿಗದಿ ಪಡಿಸುವ ಅಥವಾ ಪ್ರಸ್ತುತಗೊಳಿಸುವ ನಿಯಮಗಳು ಮತ್ತು ಷರತ್ತುಗಳನ್ವಯ ಕ್ಯಾಶ್‌ಬ್ಯಾಕ್ (ಹಣ ಹಿಂಪಡೆಯುವುದು) ಅಂದರೆ (ಪಾಯಿಂಟ್‌ಗಳ ರೂಪದಲ್ಲಿ ಅಥವಾ ನಿಷ್ಕರಿಸಲಾದ ಮೊತ್ತಕ್ಕೆ ಸಮಾನ ಮೌಲ್ಯ) ಕ್ಯಾಶ್ ಅಥವಾ ಮೊತ್ತ ಎಂದರ್ಥ.

**"ಗ್ರಾಹಕ (ಕಸ್ಟಮರ್)"** ಎಂದರೆ ಪೇಜ್ಯಾಪ್ ಅಪ್ಲಿಕೇಷನ್ನನ್ನು ಡೌನ್‌ಲೋಡ್ ಮಾಡಿಕೊಂಡಿರುವ ಅಥವಾ ಪೇಜ್ಯಾಪ್ ಸೇವೆಗಳನ್ನು ಬಳಸುತ್ತಿರುವ ವ್ಯಕ್ತಿ ಮತ್ತು ಆತನ/ಆಕೆಯ ಕಾನೂನಿನ ಪ್ರಕಾರ ಉತ್ತರಾಧಿಕಾರಿಗಳು, ಆಡಳಿತ ಮೇಲ್ವಿಚಾರಕರು ಮತ್ತು ಕಾರ್ಯಗತಗೊಳಿಸುವವರನ್ನು ಒಳಗೊಂಡಂತೆ ಎಂದರ್ಥ.

**"ಡ್ಯಾಟಾ"** ಎಂದರೆ ಗ್ರಾಹಕನಿಗೆ ಸಂಬಂಧಿಸಿರುವ ವೈಯುಕ್ತಿಕ ಡ್ಯಾಟಾ, ಸೂಕ್ಷ್ಮತರ ವೈಯುಕ್ತಿಕ ಡ್ಯಾಟಾ ಅಥವಾ ಮಾಹಿತಿ, ವ್ಯಾವಹಾರಿಕ (ಟ್ರ್ಯಾನ್ಸಾಕ್ಷನಲ್) ಡ್ಯಾಟಾ, ಡಿರೈವೇಟಿವ್ (ಅನುಸಾಧಿತ) ಡ್ಯಾಟಾ, ಇತರ ಮಾಹಿತಿಗಳು ಮುಂತಾದವು, ಈ ಕೆಳಗೆ ಕಾಣಿಸಿರುವುದು ಹಾಗೂ ಈ ಹಿಂದೆ ಅಸ್ತಿತ್ವದಲ್ಲಿದ್ದ ಪ್ರಾಡಕ್ಟ್ಸ್ ಅಥವಾ ಪದಾಥಗಳನ್ನೊಳಗೊಂಡ ವಿಷಯಗಳು.

(ಅ) ನಿಮ್ಮ ಗ್ರಾಹಕರನ್ನು ತಿಳಿಯಿರಿ (ನೋ ಯುವರ್ ಕಸ್ಟಮರ್) (ಕೆವೈಸಿ)/ಆಂಟಿ (ವಿರೋಧಿ) ಮನಿ ಲಾಂಡರಿಂಗ್ (ಏಎಂಎಲ್) ಡ್ಯಾಟಾ

(ಬ) ಬ್ಯಾಂಕಿಗೆ ಅರ್ಜಿ ಸಲ್ಲಿಸಿದ ಸಂದರ್ಭದಲ್ಲಿ ಅಥವಾ ಬ್ಯಾಂಕಿನ ಯಾವುದೇ ಪ್ರಾಡಕ್ಟನ್ನು ಕೇಳಿರುವ ಸಂದರ್ಭದಲ್ಲಿ ನೀಡಲಾದ ಮಾಹಿತಿ.

(ಕ) ಸಂಬಂಧವಿರುವ ಅವಧಿಯಲ್ಲಿ ಉತ್ಪನ್ನವಾದ ಯಾವುದೇ ವ್ಯಾವಹಾರಿಕ (ಟ್ರ್ಯಾನ್ಸಾಕ್ಷನಲ್) ಡ್ಯಾಟಾ ಅಥವಾ ಯಾವುದೇ ವಹಿವಾಟುಗಳಿಗೆ ಸಂಬಂಧಿಸಿದಂತೆ ಪಡೆಯಲಾದ ಹೇಳಿಕೆ, ತತ್ಸಂಬಂಧಿ ಅಂಕಿಅಂಶ, ಎಂಟ್ರಿಗಳು, ಲಾಗ್ಸ್

(ಡ) ಬ್ಯಾಂಕ್ ಇತರ ಯಾವುದೇ ಮೂಲದಿಂದ ಪಡೆಯಲಾದ/ಸ್ವೀಕರಿಸಿದ ಮಾಹಿತಿ

(ಇ) ಯಾವುದೇ ಡಿರೈವೇಟಿವ್ ಡ್ಯಾಟಾ

**“ಡಿರೈವೇಟಿವ್ ಡ್ಯಾಟಾ”** ಎಂದರೆ, ಯಾವುದೇ ಸಾಲಯೋಗ್ಯ (ಕ್ರೆಡಿಟ್) ಅಂಕ (ಸ್ಕೋರ್ಸ್), ಸಾಲ ಮಾಹಿತಿ, ವರ್ತನೆ/ನಡವಳಿಕೆ ಪ್ರಕ್ಷೇಪಗಳು, ಪ್ರೊಫೈಲಿಂಗ್, ವಿಶ್ಲೇಷಣಾ ಫಲಿತಾಂಶಗಳು, ವರದಿಗಳು (ಬ್ಯಾಂಕ್ ಆಂತರಿಕವಾಗಿ ಅಥವಾ ಹೊರಗಿನ ವ್ಯಕ್ತಿಗಳಿಂದ ಸಂಗ್ರಹಿಸಲಾದ), ಅಲ್ಗೋರಿತಮ್‌ಗಳ ಮೂಲಕ, ವಿಶ್ಲೇಷಣೆ, ಸಾಫ್ಟ್ವೇರ್, ಅಟೋಮೇಷನ್ಸ್, ಪ್ರೊಫೈಲಿಂಗ್, ಪಡೆದವುಗಳನ್ನು ಒಳಗೊಂಡಂತೆ, ಗ್ರಾಹಕರಿಂದ ಪಡೆಯಲಾದ ಮಾಹಿತಿ ಅಥವಾ ಯಾವುದೇ ವ್ಯಕ್ತಿ ಅಥವಾ ಮೂಲಗಳಿಂದ ಬ್ಯಾಂಕ್ ಅಥವಾ ಇತವ ವ್ಯಕ್ತಿಗಳಿಂದ ಸಂಗ್ರಹಿಸಲಾದ, ಡ್ಯಾಟಾ ಅಥವಾ ಮಾಹಿತಿ. ಮೇಲೆ ನಮೂದಿಸಲಾದ ವಿವಿಧ ಮಾಹಿತಿಗಳು, ಅಂತಹ ಡಿರೈವೇಟಿವ್ ಡ್ಯಾಟಾ ಸಂಗ್ರಹಿಸಲು ಅನುಸರಿಸಿದ ಕಾರ್ಯಚಟುವಟಿಕೆಗಳು ಎಂದು ಅರ್ಥ. ಇಂತಹ ಕಾರ್ಯಕ್ರಮವನ್ನು **“ಡಿರೈವೇಷನ್”** ಎಂದು ಕರೆಯಲಾಗುತ್ತದೆ.

**1 ವರ್ಗ – ಆಂತರಿಕ**

**ವರ್ಗ – ಆಂತರಿಕ**

**"ವಿವಾದ(ಡಿಸ್ಪ್ಯೂಟ್ಸ್)"** ಗಳು ಎಂಬ ಪದದ ಅರ್ಥವನ್ನು ಈ ಕೆಳಗಿನ 24ನೇ ಷರತ್ತಿನಲ್ಲಿ ವಿವರಿಸಲಾಗಿದೆ.

**"ಸರ್ಕಾರೀ ಅಧಿಕಾರ"** ಎಂದರೆ ಯಾವುದೇ ಸರ್ಕಾರ, ಸರ್ಕಾರೀ ಇಲಾಖೆ, ನಿಗಮಗಳು (ಕಾರ್ಪೊರೇಷನ್), ಮುನಿಸಿಪಾಲಿಟಿ, ಪಂಚಾಯತಿ, ಮಂತ್ರಿವರ್ಗ, ಮಂಡಳಿ, ನಿಯಂತ್ರಣಾ ಪ್ರಾಧಿಕಾರ, ಉಪಮಂಡಳಿ, ನ್ಯಾಯಾಲಯ, ನ್ಯಾಯ ಸಮಿತಿ ಅಥವಾ ನ್ಯಾಯಾಂಗ, ಅರೆ-ನ್ಯಾಯಾಂಗ, ಅಥವಾ ವಿಷಯದ ಮೇಲೆ ಅಥವಾ ಪ್ರಶ್ನೆ ಅಥವಾ ವ್ಯಾಜ್ಯಕ್ಕೆ ಸಂಬಂಧಿಸಿದಂತೆ ವ್ಯಾಪ್ತಿ ಹೊಂದಿರುವ ವ್ಯಾಪ್ತಿಯುಕ್ತ ಆಡಳಿತ ಮಂಡಳಿ.

"**ಐಎನ್ಆರ್**" ಎಂದರೆ ಭಾರತದ ಶಾಸನಬದ್ಧ ನಾಣ್ಯ ಅಥವಾ ನೋಟು ಅಂದರೆ ಭಾರತ ರಾಷ್ಟ್ರದ ರುಪಾಯಿ (ಚಲಾವಣೆಯಲ್ಲಿರುವ).

**"ಇಶ್ಯೂಯರ್ಸ್(ವಿತರಕರು)"** ಎಂದರೆ ಈ ಕೆಳಗಿನ 3ನೇ ಷರತ್ತಿನಲ್ಲಿ ವ್ಯಾಖ್ಯಾನಿಸಿರುವಂತೆ ಅರ್ಥೈಸಬೇಕು.

**"ಆಫರ್(ಕೊಡುಗೆ)"** ಎಂದರೆ ಬ್ಯಾಂಕು ತನ್ನ ಗ್ರಾಹಕರಿಗೆ ನೀಡುವ, ಬ್ಯಾಂಕ್ ಕಾಲಾನುಕಾಲಕ್ಕೆ ನಿಗದಿಪಡಿಸಿರುವ ನಿಯಮ ಮತ್ತು ಷರತ್ತುಗಳಿಗೆ ಬದ್ಧವಾದ ಯಾವುದೇ ರೀತಿಯ ಕೊಡುಗೆ, ಬಹುಮಾನ, ವೋಚರ್‌ಗಳು, ವಿಶೇಷ ಪ್ರಯೋಜನಗಳು, ಪ್ರಾಚಾರಾತ್ಮಕ ಕೊಡುಗೆ, ರಿಯಾಯಿತಿ ಮತ್ತು/ಅಥವಾ ಪ್ರೋತ್ಸಾಹಕವಾಗಿದ್ದು ಇದು ಕ್ಯಾಶ್‌ಬ್ಯಾಕ್‌ಅನ್ನೂ ಒಳಗೊಂಡಿರುತ್ತದೆ.

**"ಕೊಡುಗೆ ದುರುಪಯೋಗ"** ಎಂದರೆ ಓರ್ವ ಗ್ರಾಹಕನು ಪೇಜ್ಯಾಪ್-ಪ್ರಾಯೋಜಿತ ಕ್ಯಾಶ್‌ಬ್ಯಾಕ್ ಅಥವಾ ಇತರ ಯಾವುದೇ ಕೊಡುಗೆಗಳನ್ನು ಅವಹೇಳನ ಮಾಡುವ ಅಥವಾ ದುರುಪಯೋಗ ಮಾಡುವ ಅಥವಾ ಆಟದ ವಿಷಯವಾಗಿಸುವ ಘಟನೆ ಅಥವಾ ಸರಣಿ ಘಟನೆ ಅಥವಾ ಘಟನಾವಳಿಗಳು ಎಂದಾಗಿದ್ದು ಅದನ್ನು/ಅವುಗಳ ಮೂಲಕ ಬ್ಯಾಂಕಿಗೆ ವಂಚಿಸುವುದು, ಅದರಿಂದ ಗ್ರಾಹಕನಿಕೆ ಬ್ಯಾಂಕಿನ ವೆಚ್ಚದಲ್ಲಿ, ತನಗೆ ಅಲಭ್ಯವಾಗಿರುವ, ಅನಪೇಕ್ಷಿತ , ಬ್ಯಾಂಕಿಗೆ ಆಘಾತಕಾರಿಯಾಗಿರುವ, ಪ್ರಯೋಜನ ಪಡೆಯಲು ವಾಸ್ತವದಲ್ಲಿ ಬ್ಯಾಂಕಿಗೆ ಸಂಬಂಧಿಸಿರುವ ವ್ಯವಹಾರ ಅಥವಾ ಕೊಳ್ಳುವಿಕೆಯನ್ನು ಅಥವಾ ಅದರ ಭಾಗವನ್ನು ಪೂರ್ಣಗೊಳಿಸದೆ (ನಂತರದ ಹಿಮ್ಮುಖಗಳನ್ನೊಳಗೊಂಡಂತೆ) ವಂಚಿಸಲು ಪ್ರಯತ್ನಿಸುವುದು ಅಥವಾ ಬ್ಯಾಂಕ್ ಕೊಡುಗೆಯಲ್ಲಿರುವ ನ್ಯೂನತೆಯನ್ನು ಬಳಸಿಕೊಂಡು ವಿಪರೀತವಾದ ಕ್ಯಾಶ್‌ಬ್ಯಾಕ್ ಅಥವಾ ಕೊಡುಗೆಗಳನ್ನು ಬಳಸಿಕೊಳ್ಳುವ ಸೋಗಿನಲ್ಲಿ ವ್ಯವಹಾರವನ್ನು ಪೂರ್ಣಗೊಳಿಸುವಂತೆ ನಟಿಸುವುದು. ಉದಾ: (1) ವ್ಯವಹಾರ ಅಥವಾ ಸರಣಿ ವ್ಯವಹಾರಗಳನ್ನು ಕ್ಯಾಶ್‌ಬ್ಯಾಕ್ ಅಥವ ಇತರ ಕೊಡುಗೆಗಾಗಿ ವ್ಯವಹಾರ/ವ್ಯವಹಾರಗಳನ್ನು ಮಾಡುವುದು ಅಥವಾ ಹಿಂಪಡೆಯುವುದು ಅಥವಾ ರದ್ದುಮಾಡುವುದು – ಉದಾ: ಕ್ಯಾಶ್‌ಬ್ಯಾಕ್ ಅಥವಾ ಕೊಡುಗೆಯ ಲಾಭವನ್ನು ಪಡೆದ ಕೂಡಲೆ ಯಾವುದೇ ವಸ್ತು ಅಥವಾ ಸೇವೆಯನ್ನು ಹಿಂದಿರುಗಿಸುವುದು (2) ವೃತ್ತಾಕಾರದ ವ್ಯವಹಾರ/ವಹಿವಾಟುಗಳು.

"**ಬಾಧ್ಯತೆಗಳು**" ಎಂಬುದನ್ನು 4ನೇ ಷರತ್ತಿನಡಿಯಲ್ಲಿ ವಿವರಿಸಿರುವಂತೆ ಅರ್ಥಸಬೇಕು.

**"ಲಿಂಕ್ಡ್ (ಹೊಂದಿಸಲಾದ) ಕಾರ್ಡ್‌ಗಳು"** ಎಂದರೆ ಗ್ರಾಹಕರ, ಡೆಬಿಟ್ ಕಾರ್ಡ್ ಮತ್ತು ಕ್ರೆಡಿಟ್ ಕಾರ್ಡ್ ಒಳಗೊಂಡಂತೆ, ಪೇಜ್ಯಾಪ್ ಅಪ್ಲಿಕೇಷನ್‌ನಲ್ಲಿ ಸಂಬಂಧಿತ ವಿವರಗಳನ್ನುಸೇವ್ ಮಾಡಿರುವ ಕಾರ್ಡ್ ಆಗಿದ್ದು ಬ್ಯಾಂಕ್ ನಿಗದಿಗೊಳಿಸಿರುವ, ಅತ್ಯಾವಶ್ಯಕವಾದ ದೃಢೀಕರಣ ಪ್ರಕಿಯೆಗಳನ್ನು ಪೂರ್ಣಗೊಳಿಸುವುದು ಮುಖ್ಯವಾಗಿರುತ್ತದೆ ಮತ್ತು ಕಾಲಾನುಕಾಲಕ್ಕೆ ಪ್ರಸ್ತುತವಾಗುವ, ಅನ್ವಯವಾಗುವ ಶಾಸನಕ್ಕೆ ಒಳಪಟ್ಟಿರುತ್ತದೆ.

"**ವ್ಯಾಪಾರಿಗಳು**" ಎಂದರೆ ಬ್ಯಾಂಕ್ ಸ್ವಾಧೀನತಾ ಹಕ್ಕನ್ನು ಪಡೆದಿರುವ, ಪೇಜ್ಯಾಪ್ ಅಪ್ಲಿಕೇಷನ್ ಮೂಲಕ ವಸ್ತು/ಸೇವೆಗಳ, ಧನಸೇವೆಗಳನ್ನೊಳಗೊಂಡು, ಮೌಲ್ಯವನ್ನು ಪ್ರತಿನಿಧಿಯಂತೆ ಸ್ವೀಕರಿಸುವ ಹಕ್ಕನ್ನು ಬ್ಯಾಂಕಿಗೆ ಒಪ್ಪಿಸಿರುವ, ವ್ಯಾಪಾರಗಾರರು ಮತ್ತು ವ್ಯಾಪಾರಸಂಸ್ಥೆಗಳು.

**"ಮೊಬೈಲ್ ಡಿವೈಸ್"** ಎಂದರೆ ಮೊಬೈಲ್ ಫೋನ್ ಅಥವಾ ಸ್ಮಾರ್ಟ್ ಫೋನ್, ಹೋಸ್ಟ್ ವಾಯ್ಸ್ ಮತ್ತು ಡ್ಯಾಟಾ ಅಪ್ಲಿಕೇಷನ್‌ಗಳೂ ಸೇರಿದಂತೆ ಎಲ್ಲ ಎಲೆಕ್ಟ್ರಾನಿಕ್ ಸಾಧನಗಳು.

**"ಎನ್‌ಪಿಸಿಐ"** ಎಂದರೆ ನ್ಯಾಷನಲ್ ಪೇಮೆಂಟ್ಸ್ ಕಾರ್ಪೊರೇಷನ್ ಆಫ್ ಇಂಡಿಯಾ ಮತ್ತು ಅದರ ಉತ್ತರಾಧಿಕಾರಿಗಳು ಹಾಗೂ ನಿಯೋಜಿತರು.

**"ವ್ಯಾಪಾರಿಗಳ ಕೊಡುಗೆಗಳು"** ಎಂದರೆ ಈ ಕೆಳಗಿನ 5ನೇ ಷರತ್ತಿನಲ್ಲಿರುವುದನ್ನು ಗ್ರಹಿಸಬೇಕು.

**"ಆಫರ್ ಸ್ಪೆಸಿಫಿಕ್ ಟರ್ಮ್ಸ್"** ಈ ಕೆಳಗಿನ 5ನೇ ಷರತ್ತಿನಲ್ಲಿರುವುದನ್ನು ಗ್ರಹಿಸಬೇಕು.

"**ಪೇಜ್ಯಾಪ್ ಅಪ್ಲಿಕೇಷನ್"** ಅಥವಾ "ಪೇಜ್ಯಾಪ್ ಆಪ್" ಅಥವಾ "ಪೇಜ್ಯಾಪ್"ಎಂದರೆ ಬ್ಯಾಂಕ್ ಸ್ವಾಮ್ಯದ ಅಪ್ಲಿಕೇಷನ್ ಆಗಿದ್ದು ಗ್ರಾಹಕರಿಗೆ ಮೊಬೈಲ್ ಸಾಧನದ/ಗಳ ಮೂಲಕ, ಪೇಜ್ಯಾಪ್ ಸೇವೆಗಳ ಆಧಾರದಲ್ಲಿ ದೊರೆಯುವಂತಹುದು ಮತ್ತು ಗ್ರಾಹಕರು ಬಳಸಬಹುದಾದಂತುಬುದು.

**"ಪೇಜ್ಯಾಪ್ ಪಿಪಿಐ"** ಎಂಬುದನ್ನು ಇದರೊಂದಿಗಿರುವ ಷೆಡ್ಯೂಲ್ 1ರಲ್ಲಿ ವಿವರಿಸಲಾಗಿದೆ.

**"ಪೇಜ್ಯಾಪ್ ಸೇವೆಗಳು"** ಎಂದರೆ ಬ್ಯಾಂಕು ತನ್ನ ಗ್ರಾಹಕರಿಗೆ ನೀಡುವ ಸೇವಾಸೌಲಭ್ಯಗಳು. ತನ್ಮೂಲಕ, ನಿರ್ದಿಷ್ಟ ಇತಿಮಿತಿಗಳ ಚೌಕಟ್ಟಿನಲ್ಲಿ ಗ್ರಾಹಕರು ಈ ಮುಂದೆ ನಮೂದಿಸಿರುವ ಸೇವೆಗಳ ಪ್ರಯೋಜನವನ್ನು ಪಡೆಯಲು ಅವಕಾಶವಿರುತ್ತದೆ. (ಅ) ವ್ಯಾಪಾರಸ್ಥರಿಂದ ವಸ್ತು ಮತ್ತು ಸೇವೆಗಳನ್ನು ಪೇಜ್ಯಾಪ್ ಬಳಸುವುದರ ಮೂಲಕ ಪಡೆದುಕೊಂಡು ಅವುಗಳ ಮೌಲ್ಯವನ್ನು ಸಂಬಂಧಪಟ್ಟ ವ್ಯಾಪಾರಿಗಳಿಗೆ ಸಂದಾಯಿಸಬಹುದು (ಬ) ಯುಪಿಐ ಸೇವೆಗಳು (ಕ) ಪೇಜ್ಯಾಪ್ ಪಿಪಿಐಗೆ ಸಂಬಂಧಿಸಿದ, ಶೇಖರಿಸಲ್ಪಟ್ಟ ಮೌಲ್ಯಗಳನ್ನು ಪೇಜ್ಯಾಪ್ ಪಿಪಿಐಅನ್ನು ಆರ್‌ಬಿಐ ಪಿಪಿಐ ನಿರ್ದೇಶಿರುವಂತೆ ಸೇರಿಸುವುದನ್ನೂ ಒಳಗೊಂಡ ಸೇವೆಗಳು, ಮತ್ತು ಈ ನಿಯಮ ಹಾಗೂ ಷರತ್ತುಗಳು ಮತ್ತು ಆರ್‌ಬಿಐ ಪಿಪಿಐ ನಿರ್ದೇಶನದಂತೆ ಶೇಖರಿಸಲ್ಪಟ್ಟ ಮೌಲ್ಯ/ನಿಧಿಗಳನ್ನು ಪೇಜ್ಯಾಪ್ ಪಿಪಿಐನಿಂದ ಆರ್‌ಬಿಐ ಪಿಪಿಐನಿಂದ ಅಂಗೀಕರಿಸಲಾಗಿರುವ ಮತ್ತು ಅನುಮೋದಿಸಬಹುದಾದ ಇತರ ಬ್ಯಾಂಕ್ ಖಾತೆ ಮತ್ತು/ಅಥವಾ ಅದರಂತಿರುವ ಇತರ ಖಾತೆಗಳಿಗೆ ವರ್ಗಾಯಿಸುವುದು ಮತ್ತು ಈ ನಿಯಮ ಹಾಗೂ ಷರತ್ತುಗಳು ಪರಸ್ಪರ ಕಾರ್ಯಭಾಗಿತ್ವ (ಇಂಟರ್ಆಪರಬಿಲಿಟಿ)ಶ್ರಮತೆ; ಇದು ಬ್ಯಾಂಕ್ ಒಮ್ಮೆ ಈ ಸವಲತ್ತು/ಅವಕಾಶವನ್ನು ಅನುಷ್ಠಾನಗೊಳಿಸಿದಾಗ ಲಭ್ಯವಾಗುತ್ತದೆ; ಪೇಜ್ಯಾಪ್ ಪಿಪಿಐಅನ್ನು ಇತರ ಪಾವತಿ ವ್ಯವಸ್ಥೆಗಳ ಜೊತೆಗೆ, ಬ್ಯಾಂಕ್ ಸಕ್ರಿಯಗೊಳಿಸಿದಾಗ, ಬಳಸುವಂತೆ ಮಾಡುವುದು; (ಡ) ಲಿಂಕ್ಡ್ ಕಾರ್ಡ್‌ಗಳ ಮೂಲಕ ಪಾವತಿಗಳನ್ನು ಸಕ್ರಿಯಗೊಳಿಸುವುದು/ಅನುಕೂಲ ಕಲ್ಪಿಸುವುದು; (ಇ) ಈ ನಿಯಮ ಮತ್ತು ಷರತ್ತುಗಳು ಬದ್ಧಗೊಳಿಸಿರುವ ಇತರ ವೈಶಿಷ್ಟ್ಯಗಳು, ಕಾರ್ಯಸಾಧಕಗಳು ಮತ್ತು ಸೇವೆಗಳು. (ಫ) ಬ್ಯಾಂಕಿನ ವಿವೇಚನೆಗೆ ಬಿಟ್ಟ, ಕಾಲಾನುಕಾಲಕ್ಕೆ ಸಕ್ರಿಯಗೊಳಿಸಲಾಗುವ, ಇತರ ಯಾವುದೇ ಸೇವೆಗಳು/ಸೌಲಭ್ಯಗಳು.

**"ಪ್ರಾಡಕ್ಟ್ಸ್ (ಉತ್ಪನ್ನಗಳು)"** ಎಂದರೆ ಉತ್ಪನ್ನಗಳು, ಸೇವೆಗಳು ಮತ್ತು/ಅಥವಾ ಬ್ಯಾಂಕಿನ ವ್ಯಾಪಾರ-ವಹಿವಾಟುಗಳು/ಅಂಗ ಸಂಸ್ಥೆಗಳ/ಸಂಯೋಜಿತ ಸಂಸ್ಥೆಗಳು, ಅಥವಾ ಬ್ಯಾಂಕು/ಅಂಗ ಸಂಸ್ಥೆಗಳು/ಸಂಯೋಜಿತ ಸಂಸ್ಥೆಗಳು ವಿತರಿಸುವ, ಶಿಫಾರಸು ಮಾಡುವ ಅಥವಾ ಯಾವುದೇ ಉತ್ಪನ್ನ ಅಥವಾ ಸೇವೆಯನ್ನು (ಬ್ಯಾಂಕಿನಿಂದ ನೇರವಾಗಿ ಪ್ರಸ್ತಾಪಿಸಿರದ ವ್ಯವಹಾರಗಳನ್ನು ಒಳಗೊಂಡಂತೆ ಆದರೆ ಟಿಪಿಎಪಿ ಮೂಲಕ, ಬ್ಯಾಂಕಿನಲ್ಲಿ ಖಾತೆಯೇ

Classification - Public



Classification - Public

ಇಲ್ಲದಿರುವ ಸಂದರ್ಭದಲ್ಲೂ ಆದರೂ ಅದು ಪಿಎಸ್ಪಿ ಬ್ಯಾಂಕ್ ಆಗಿರುವುದರಿಂದ ಆ ಬ್ಯಾಂಕಿಗೆ

ಯುಪಿಐ ವರ್ಗಾವಣೆ ಮಾಡಬೇಕಾದಂತಹ, ಪ್ರಾಯೋಜಕ ಬ್ಯಾಂಕಿನಂತೆ ಕಾರ್ಯ ನಿರ್ವಹಿಸುವದು ಮುಂತಾದವುಗಳು. ಅಂತಹ ಸಂದರ್ಭಗಳಲ್ಲಿ ಬ್ಯಾಂಕು ಇತರ ಯಾವುದೇ ಮಧ್ಯಸ್ಥ/ಸಂಸ್ಥೆಯೊಂದಿಗೆ ಪ್ರಾಸಂಗಿಕವಾಗಿ ಗ್ರಾಹಕರು, ಅಲ್ಲದೆ ಗ್ರಾಹಕರು ಸಹಿ ಮಾಡುವ ಅಧಿಕಾರ ಹೊಂದಿರುವವರಾಗಿದ್ದಲ್ಲಿ ಅಥವಾ ಅಧಿಕಾರಯುಕ್ತ ವ್ಯಕ್ತಿಯಾಗಿದ್ದಲ್ಲಿ ಅಥವಾ ವ್ಯಕ್ತಿಯಾಗಿರದ ಸಂಸ್ಥೆಯ ಪ್ರತಿನಿಧಿಯಾಗಿ ಅರ್ಜಿದಾರರಾಗಿದ್ದಾಗ/ಗ್ರಾಹಕರು/ಯಾವುದೇ ಸೇವೆಗಳನ್ನು ಬಳಸುವವರಾಗಿದ್ದಾಗ, ಪರೋಕ್ಷವಾಗಿ/ಅಪರೋಕ್ಷವಾಗಿ, ನೇರ ಸಂಬಂಧವನ್ನು ಹೊಂದಿರುವುದೋ ಇಲ್ಲವೋ ಎಂಬುದನ್ನು ಪರಿಗಣಿಸದೆ, ನೀಡಬಹುದಾದ ಉಪನ್ನ/ಸೇವೆಗಳು ಎಂದು ಅರ್ಥ.

ಗ್ರಾಹಕರಿಂದ ಯಾವ ಉತ್ಪನ್ನ ಅಥವಾ ಸೇವೆ ಬೇಕೆಂಬುದಾಗಿ ಅರ್ಜಿ ಸಲ್ಲಿಸಲ್ಪಟ್ಟಿದೆಯೋ/ವಿನಂತಿಸಿಕೊಳ್ಳಲ್ಪಟ್ಟಿದೆಯೋ ಅಥವಾ ಬಳಸಲ್ಪಟ್ಟಿದೆಯೋ, ಪೇಜ್ಯಾಪ್ ಸೇವೆಗಳನ್ನೂ ಒಳಗೊಂಡಂತೆ, (ಬ್ಯಾಂಕ್‌ನೊಂದಿಗೆ ಆರಂಭಿಸಲ್ಪಟ್ಟ ಯಾವುದೇ ವ್ಯವಹಾರವು ನೇರವಾಗಿ ಬ್ಯಾಂಕ್‌ನಲ್ಲೇ ಲಭ್ಯವಿಲ್ಲದಿದ್ದರೂ ಟಿಪಿಎಪಿ ಮೂಲಕ ಯುಪಿಐ ಮೂಲಕ ವರ್ಗಾವಣೆ ಪ್ರಕ್ರಿಯೆಯಲ್ಲಿರುವಂತೆ, ಅಂದರೆ ಗ್ರಾಹಕನು ಬ್ಯಾಂಕ್‌ನಲ್ಲಿ ಠೇವಣಿ ಅಥವಾ ಯಾವುದೇ ಖಾತೆ ಹೊಂದಿಲ್ಲವಾದರೂ ಬ್ಯಾಂಕ್ ಓರ್ವ ಪಿಎಸ್‌ಪಿ ಬ್ಯಾಂಕ್ ಆಗಿರುವ ಸನ್ನಿವೇಶದಂತೆ, ಬ್ಯಾಂಕ್ ಓರ್ವ ಸಂಸ್ಕರಣಾ ಘಟಕವಾಗಿ ಕಾರ್ಯನಿರ್ವಹಿಸುತ್ತಿರುವ ಸಂದರ್ಭದಲ್ಲಿ ಅವುಗಳನ್ನು "ರಿಕ್ವೆಸ್ಟೆಡ್ ಪ್ರಾಡಕ್ಟ್ಸ್"ವಿನಂತಿಸಲ್ಪಟ್ಟ ಉತ್ಪನ್ನ" ಎಂದು ಕರೆಯಲಾಗುವುದು.

**"ಆರ್‌ಬಿಐ"** ಎಂದರೆ ಭಾರತದ ರಿಸರ್ವ್ ಬ್ಯಾಂಕ್ (ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ) ಎಂದು ತಿಳಿಯತಕ್ಕದ್ದು.

**"ಆರ್‌ಬಿಐ ಕೆವೈಸಿ ನಿರ್ದೇಶನಗಳು"** ಎಂದರೆ ಆರ್‌ಬಿಐನ ಮಾಸ್ಟರ್ ಡೈರೆಕ್ಷನ್ (ಅಮೂಲಾಗ್ರ ನಿರ್ದೇಶನ್) - ನೋ ಯುವರ್ ಕಸ್ಟಮರ್ (ತಿಳಿಯಿರಿ ನಿಮ್ಮ ಗ್ರಾಹಕರನ್ನು) (ಕೆವೈಸಿ) ನಿರ್ದೇಶನ, ಸಂಖ್ಯೆ ಡಿಬಿಆರ್. ಎಎಂಎಲ್. ಬಿಸಿ.ನಂ.81/14.01.001/2015-16, ದಿನಾಂಕ ಫೆಬ್ರುವರಿ 25, 2016 (ಮೇ 10, 2021ರಂದು ನವೀಕರಿಸಿದಂತೆ), ಪ್ರಾಯಶಃ ತಿದ್ದುಪಡಿ ಮಾಡಿಸಿದಂತೆ, ಬದಲಿಸಿದಂತೆ, ಪುನಃ ನಿಯಮಿಸಿದಂತೆ, ಬದಲಾಯಿಸಿದಂತೆ, ಕಾಲಾನುಕಾಲಕ್ಕೆ ಮಾರ್ಪಾಡು ಮಾಡಿದಂತೆ ಎಂದು ತಿಳಿಯಬೇಕು.

**"ಆರ್‌ಬಿಐ ನಿಯಮಾವಳಿಗಳು(ರೆಗ್ಯುಲೇಷನ್ಸ್)"** ಎಂದಾಗ ಆರ್‌ಬಿಐಅವರಿಂದ ಕಾಲಾನುಕ್ರಮದಲ್ಲಿ ಬಿಡುಗಡೆಯಾಗುವ ಮಾರ್ಗಸೂಚಿಗಳು, ಸುತ್ತೋಲೆಗಳು, ಅಧಿಸೂಚನೆಗಳು, ನಿರ್ದೇಶನಗಳು, ಮಾಸ್ಟರ್ ನಿರ್ದೇಶನಗಳು ಮತ್ತು ಅವುಗಳಿಗೆ ಮಾಡಬಹುದಾದ ತಿದ್ದುಪಡಿ, ಬದಲಾವಣೆ, ಪುನರ್ ಪರಿಶೀಲನೆ, ನವೀಕರಣ, ಮಾರ್ಪಾಡುಗಳಿಗನ್ವಯ ಎಂದು ತಿಳಿಯಬೇಕು.

**"ಆರ್‌ಬಿಐ ಪಿಓಎಸ್ ಸುತ್ತೋಲೆ"** ಎಂದರೆ "ಪಾಯಿಂಟ್-ಆಫ್-ಸೇಲ್ (ಮಾರಾಟದ ಕ್ಷಣದಲ್ಲಿ/ಸ್ಥಳದಲ್ಲಿ) ನಗದು ಹಿಂಪಡೆಯುವ ಕ್ರಮ" - 3 ಮತ್ತು 4ನೇ ಶ್ರೇಣಿ ಕೇಂದ್ರಗಳಲ್ಲಿ ಹೆಚ್ಚಿಸಲ್ಪಟ್ಟ ಮಿತಿ ಎಂಬ ಶೀರ್ಷಿಕೆಯ ಸುತ್ತೋಲೆ; ಅಂದರೆ ಆರ್‌ಬಿಐನವರು ದಿನಾಂಕ 27 ಆಗಸ್ಟ್, 2015ರಂದು ಹೊರಡಿಸಿರುವ ಸುತ್ತೋಲೆ ಸಂಖ್ಯೆ ಡಿಪಿಎಸ್‌ಎಸ್.ಕೋ. ಪಿಡಿ. ನಂ.449/02.14.003/2015-16 ಹಾಗೂ ತದನಂತರದ ತಿದ್ದುಪಡಿ, ಪೂರಕ ನಿಯಮ/ಸೂಚನೆ.

**"ರೆಲೆವೆಂಟ್ (ಸಂಬಂಧಪಟ್ಟ) ಕೆವೈಸಿ ದಾಖಲೆಗಳು"** ಎಂದರೆ ಆರ್‌ಬಿಐ ಕೆವೈಸಿ ನಿರ್ದೇಶನದಂತೆ ಕೆವೈಸಿ ಪ್ರಕ್ರಿಯೆಗೆ ಅವಶ್ಯಕವಾದ ದಾಖಲಾತಿಗಳು, ಕಾಲಾನುಕಾಲಕ್ಕೆ ಅದಕ್ಕೆ ಸಂಬಂಧಿಸಿದಂತೆ ಮಾಡಬಹುದಾಗಿರುವ ತಿದ್ದುಪಡಿ, ಬದಲಾವಣೆ, ಪುನರ್-ನವೀಕರಣ, ಅಥವಾ ಸಮಗ್ರ ಬದಲಾವಣೆ.

**"ಸೆಕ್ಯೂರ್ (ಸುರಕ್ಷಿತ) ಪಿನ್"** ಎಂಬುದರ ವಿವರಣೆಯನ್ನು ಈ ಕೆಳಗೆ 2ನೇ ಷರತ್ತಿನಡಿಯಲ್ಲಿ ನೀಡಲಾಗಿದೆ.

**"ನಿಗದಿತ (ಸ್ಪೆಸಿಫೈಡ್) ಉದ್ದೇಶಗಳು"** ಎಂಬುದರ ಒಟ್ಟಾರೆ ಅರ್ಥವೇನೆಂದರೆ, ಕ್ರೆಡಿಟ್ ಅಸೆಸ್‌ಮೆಂಟ್ (ಸಾಲಾಪೇಕ್ಷೆಯ ತುಲನಾತ್ಮಕ ಪರಿಶೀಲನೆ/ಮೌಲ್ಯಮಾಪನ), ಅಪಾಯದ ವಿಶ್ಲೇಷಣೆ, ಸಾಲಗಳ ಮಾಹಿತಿ ವರದಿ ಸಂಗ್ರಹ, ಅಂಕಗಳು, ಅಡೆತಡೆಗಳು, ವಂಚನೆ ಪರೀಕ್ಷೆ, ವಂಚನೆ ಕಂಡುಹಿಡಿಯುವುದು, ವಂಚನೆ ತಡೆಯುವುದು ಮತ್ತು ಅಪರಾಧಗಳನ್ನುಪುನರಾವರ್ತಿಸದಂತೆ ಕ್ರಮವಹಿಸುವುದು, ಅಪರಾಧ/ಭಯೋತ್ಪಾದನೆಗೆ ಹಣ ಒದಗಿಸುವ ಚಟುವಟಿಕೆಯನ್ನೊಳಗೊಂಡಂತೆ, ದುರಾಚಾರ ಪತ್ತೆಮಾಡುವುದು ಅಥವಾ ದಾಖಲಾತಿ ಅಥವಾ ಮಾಹಿತಿಗಳಲ್ಲಿರುವ ದ್ವಂದ್ವ, ನಿಗೂಢತೆ, ವ್ಯತ್ಯಯಗಳನ್ನು ಪತ್ತೆಮಾಡುವುದು, ದುರುಪಯೋಗವನ್ನು ತಡೆಯುವುದು, ಸಾಲಾಪೇಕ್ಷಿಗಳ ಯೋಗ್ಯತಾಮಾಪನ, ಆರ್ಥಿಕ ಸ್ಥಿತಿಗತಿ, ತೀರಿಸುವ ಶ್ರದ್ಧೆ, ಹಿನ್ನೆಲೆ ಪರಿಶೀಲನೆ, ದೈಹಿಕ ಮತ್ತು ಇನ್ನಿತರ ಪರೀಕ್ಷೆ, ಪರಿಶೀಲನೆ, ಮೇಲೆ ಹೇಳಿರುವ ಯಾವುದೇ ಚಟುವಟಿಕೆ/ಅಂಶಗಳ ಬಗ್ಗೆ ಯಾವುದೇ ರೀತಿಯ ವರದಿ ಸಂಗ್ರಹ, ಕೆವೈಸಿ/ಎಎಂಎಲ್ ತಪಾಸಣೆ, ಗ್ರಾಹಕ ಸೇವೆಗಳು, ಉಸ್ತುವಾರಿ, ಸಂಗ್ರಹಣೆಗಳು, ಪೂರ್ವನಿಯೋಜನೆಯನ್ನು ಕಂಡುಹಿಡಿಯುವುದು, ಪೂರ್ವನಿಯೋಜನೆ ನಿಗ್ರಹ, ಪೂರ್ವನಿಯೋಜನೆ ತಪಾಸಣೆ/ತನಿಖೆ, ಹಿಂಪಡೆಯುವುದು, ಯಾವುದೇ ಕಾನೂನು ಪ್ರಕ್ರಿಯೆ, ಕ್ರಮ, ವಿಚಾರಣೆ, ತನಿಖೆಗಳು, ಪರಿಹಾರ ಪರಿಕ್ರಮ, ಹಕ್ಕುಗಳನ್ನು ಜಾರಿಗೊಳಿಸುವುದು, ಸಾಲನಿರ್ವಹಣೆ ಒಳಗೊಂಡಂತೆ ಸಮಗ್ರವಾಗಿ ವರದಿ ಸಲ್ಲಿಸಿವುದು, ಕೆವೈಸಿ ವರದಿ ಸಲ್ಲಿಸುವುದು, ವಂಚನೆ ಕಂಡುಹಿಡಿಯುವುದು/ತನಿಖೆ, ವಂಚನೆ ನಿಗ್ರಹ, ವಂಚನೆ ವಿಚಾರಣೆ, ಹಿಂಪಡೆಯುವಿಕೆ, ಕಾನೂನು ಪರಿಕ್ರಮ ಪರಿಶೀಲನೆ, ವಿಚಾರಣೆಗಳು, ತಪಾಸಣೆಗಳು, ಪರಿಹಾರ ನಿರ್ವಹಣೆ, ಹಕ್ಕುಗಳನ್ನು ಜಾರಿಗೊಳಿಸುವುದು, ಸಾಲಶ್ರಮತೆಯನ್ನೊಳಗೊಂಡಂತೆ ಎಲ್ಲ ಅಂಶಗಳ ವರದಿ, ಹಿಂಪಡೆಯುವ ಪ್ರಕ್ರಿಯೆ, ಯಾವುದೇ ರೀತಿಯ ಕಾನೂನು ಪ್ರಕ್ರಿಯೆಗಳು, ಜಾರಿಗೊಂಡ ಕ್ರಮಗಳು, ವಿಚಾರಣೆಗಳು, ತನಿಖೆಗಳು, ಪರಿಹಾರ ಕ್ರಮಗಳು, ಹಕ್ಕು ಸ್ಥಾಪನೆ, ಸಾಲವನ್ನೊಳಗೊಂಡ ಸಮಗ್ರ ವರದಿ, ಕೆವೈಸಿ ವರದಿ, ಡಿಫಾಲ್ಟನ್ನು (ತಪ್ಪೆಸಗಿರುವುದನ್ನು) ಕಂಡುಹಿಡಿಯುವುದು, ಸಲ್ಲಿಕೆ, ಸರಿದೂಗಿಸಿರುವುದೇ ಮುಂತಾದವು. ಇವುಗಳಲ್ಲಿ ಯಾವುದೇ ಕ್ರಮವನ್ನು ಆಂತರಿಕವಾಗಿ ಅಥವಾ ಯಾವುದೇ ಸಾಲ ಯೋಗ್ಯತಾ ಮಾಹಿತಿ ಸಂಸ್ಥೆ, ಬ್ಯೂರೋ, ಸೇವಾಸಂಸ್ಥೆ, ಸಲಹೆಗಾರರಿಂದ, ಮಾರಾಟಗಾರ (ವೆಂಡರ್), ಏಜೆಂಟ್, ಫಿನ್‌ಟೆಕ್ ಸಂಸ್ಥೆ, ಕೋ-ಬ್ಯಾಂಡ್ ಸಂಸ್ಥೆ/ಪಾಲುದಾರರು, ವಿತರಕರು, ವಿಕ್ರಯ/ಮಾರಾಟ ಪ್ರತಿನಿಧಿ ಸಂಸ್ಥೆ, ಯಾವುದೇ ಪಾಲುದಾರರು, ಸಲಹೆಗಾರರು, ಪೂರೈಕೆದಾರರು, ಬ್ಯಾಂಕ್ ಭಾಗಿಯಾಗಿರುವ ಯಾವುದೇ ಇತರ ಪರಿಸರ/ವ್ಯವಸ್ಥೆಗಳಲ್ಲಿರುವ ಸಹವರ್ತಿ/ ಮಧ್ಯವರ್ತಿಗಳು, ಟಿಪಿಎಪಿ (ಯಾರೊಂದಿಗೆ ಬ್ಯಾಂಕ್ ಪಿಎಸ್‌ಪಿಯಾಗಿ ಕಾರ್ಯನಿರ್ವಹಿಸುತ್ತಿರುವುದೋ ಅವರು), ಸಹಯೋಗಿಗಳು, ಸಹ-ಸಾಲದಾರರು, ಸಹ-ಮೂಲವ್ಯಕ್ತಿ/ಸಂಸ್ಥೆ, ವರ್ತಕರು, ಸಂಗ್ರಾಹಕರು, ಲೀಡ್ ಜನರೇಟರ್, ಸೋರ್ಸಿಂಗ್ ಸಂಸ್ಥೆ, ಗ್ರಾಹಕರು ಅಥವಾ ಬ್ಯಾಂಕ್ ಸಹಯೋಗ ಹೊಂದಿರುವ ಯಾವುದೇ ವ್ಯಕ್ತಿ ಅಥವಾ ಯಾವುದೇ ಉತ್ಪನ್ನ ಅಥವಾ ಸೇವೆಗಳಿಗೆ ಆಂತರಿಕ ಒಪ್ಪಂದ ಹೊಂದಿರುವುದೋ ಅವರು, ಅಥವಾ ಎಲ್ಲ ಆಯ್ಕೆಗಳ ವಿವಿಧ ಸಂಯೋಜನೆಗಳು. ಸಂಸ್ಥೆ, ಬ್ಯೂರೋ, ಸೇವಾದಾರರು, ಸಲಹೆಗಾರರು, ವಿತರಕರು, ಪ್ರತಿನಿಧಿಗಳು, ಫಿನ್‌ಟೆಕ್ ಸಂಸ್ಥೆ, ಕೋ-ಬ್ಯಾಂಡ್ ಸಂಸ್ಥೆ/ಪಾಲುದಾರರು, ವ್ಯಕ್ತಿ, ಮತ್ತು ಅವರೊಡಗೂಡಿ ಸೇವೆಯಲ್ಲಿ ತೊಡಗಿರುವವರು, ಮುಂತಾದ ಪ್ರತಿ ವಿಭಾಗವನ್ನೂ**"ಪ್ರಕ್ರಿಯಾ(ಪ್ರೋಸೆಸಿಂಗ್)ಸಂಸ್ಥೆ"** ಎನ್ನಲಾಗುವುದು.

**"ತೆರಿಗೆಗಳು"** ಎಂದರೆ ಎಲ್ಲ ತೆರಿಗೆಗಳು, ಸೆಸ್‌ಗಳು, ಸರ್‌ಚಾರ್ಜ್‌ಗಳು, ಸುಂಕಗಳು, ಹೇರಿಕೆಗಳು, ದರಗಳು ಹಾಗೂ ತತ್ಸಮಾನವಾದ ತೆರಿಗೆರೂಪದ ಬಾಧ್ಯತೆಗಳು ಎಂದು ಅರ್ಥ. ಅಲ್ಲದೆ, ಈ ಎಲ್ಲವುಗಳನ್ನೂ ಅಥವಾ ಯಾವುದೇ ರೀತಿಯ ತೆರಿಗೆಗಳು ಯಾವ ಯಾವ ಕ್ಷೇತ್ರ/ಪ್ರದೇಶದಲ್ಲಿ ಯಾವುದೇ ಸರ್ಕಾರೀ ಅಧಿಕಾರಿಯಿಂದ/ಇಲಾಖೆಯಿಂದ ಪ್ರಸ್ತುತದಲ್ಲಿ ಅಥವಾ ಭವಿಷ್ಯದಲ್ಲಿ ಹಾಕಲಾಗುವುದೋ/ಸ್ವೀಕರಿಸಲಾಗುವುದೋ, ಅವೆಲ್ಲವೂ ಈ ಪದದ ಅರ್ಥಗಳಾಗಿರುತ್ತವೆ. ಅಲ್ಲದೇ, ಬಡ್ಡಿ, ದಂಡ ಮತ್ತು ಇನ್ನಿತರ ಯಾವುದೇ ರೀತಿಯ, ಮೇಲೆ ನಮೂದಿಸಿರುವ ಎಲ್ಲ ಕಟ್ಟುಪಾಡುಗಳು, ಈ ಹಿಂದೆ ನಿಗದಿ ಪಡಿಸಿದ್ದ ಬಾಧ್ಯತೆಗಳು ಹಾಗೂ ಕಟ್ಟುಪಾಡುಗಳು ಒಳಗೊಂಡಂತೆ, ಮತ್ತು, ಯಾವುದೇ ಮಿತಿ ಇರದ ನೇರ ಹಾಗೂ ಪರೋಕ್ಷ ತೆರಿಗೆಗಳು, ಎಲ್ಲ ವಿಧದ ಪದಾರ್ಥಗಳು ಮತ್ತು ಸೇವೆಗಳ ಮೇಲಿನ ತೆರಿಗೆಗಳು, ಟೋಲ್ ತೆರಿಗೆಗಳು, ಮುನಿಸಿಪಾಲಿಟಿ, ಸ್ಥಳೀಯ, ರಸ್ತೆ ಸಾರಿಗೆ ತೆರಿಗೆಗಳು ಮುಂತಾದುವು ಈ ಪದದ ಅರ್ಥದಲ್ಲಿ ಸೇರಿವೆ.

**"ನಿಯಮಗಳು ಮತ್ತು ಷರತ್ತುಗಳು"** ಅಥವಾ "ನಿಯಮಗಳು ಮತ್ತು ಷರತ್ತುಗಳ ದಾಖಲಾತಿಗಳು" ಎಂದರೆ ನಿಯಮಗಳು ಮತ್ತು ಷರತ್ತುಗಳನ್ನು ತಿಳಿಸಿರುವ ಈ ದಾಖಲಾತಿ, ಕಾಲಕ್ರಮದಲ್ಲಿ ಇವುಗಳಲ್ಲಿ ಮಾಡಬಹುದಾದ ಮಾರ್ಪಾಡುಗಳು, ತಿದ್ದುಪಡಿ ಮತ್ತು ಪೂರಕಗಳೂ ಸೇರಿರುತ್ತವೆ ಮತ್ತು ಇವುಗಳೆಲ್ಲವೂ ಪೇಜ್ಯಾಪ್ ಪಿಪಿಐ, ಪೇಜ್ಯಾಪ್ ಸೇವೆಗಳಿಗೆ ಅನ್ವಯವಾಗುತ್ತವೆ ಮತ್ತು ಗ್ರಾಹಕರು ಹಾಗೂ ಬ್ಯಾಂಕಿನ ಹಕ್ಕು ಬಾಧ್ಯತೆಗಳನ್ನು ನಿಯಮಗೊಳಿಸುತ್ತವೆ.

**"ಮೂರನೇ ವ್ಯಕ್ತಿಯ ಸೇವೆಗಳು"** ಎಂಬುದರ ಬಗ್ಗೆ ಈ ಕೆಳಗಿರುವ **28**ನೇ ಷರತ್ತಿನಲ್ಲಿ ತಿಳಿಸಲಾಗಿದೆ.

**"ವ್ಯವಹಾರ (ಟ್ರಾನ್ಸ್ಯಾಕ್ಷನ್)"** ಎಂದರೆ ಪೇಜ್ಯಾಪ್ ಸೇವೆಗಳನ್ನು ಬಳಸುತ್ತಾ, ಅಂದರೆ ಪೇಜ್ಯಾಪ್ ಪಿಪಿಐ ಅಥವಾ ಲಿಂಕ್ಡ್ ಕಾರ್ಡ್ಗಳು ಅಥವಾ ಯುಪಿಐನ ಇತರ ಮೂಲ ಅಥವಾ ಮೋಡ್‌ಗಳನ್ನು ಬಳಸುತ್ತಾ, ಯಾವುದೇ ಮೊತ್ತವನ್ನು ವರ್ಗಾವಣೆ ಅಥವಾ ಕೊಂಡುಕೊಳ್ಳುವ ಪ್ರಕ್ರಿಯೆ ಎಂದರ್ಥ.

**"ಯುಪಿಐ"** ಎಂದರೆ ಎನ್‌ಪಿಸಿಐನವರು ನಡೆಸುವ ಕಾರ್ಯಾಚರಣೆಯಾದ ಯೂನಿಫೈಡ್ ಪೇಮೆಂಟ್ ಇಂಟರ್ಫೇಸ್ ಎಂದು ಅರ್ಥ.

**ವರ್ಗೀಕರಣ – ಆಂತರಿಕ**

**"ಯುಪಿಐ ಸೇವೆಗಳು"** ಎಂದರೆ **ಇಲ್ಲಿರುವ ಷೆಡ್ಯೂಲ್** 6 ರಲ್ಲಿ ವ್ಯಾಖ್ಯಾನಿಸಿರುವ ಯುಪಿಐ ಸೌಲಭ್ಯದಡಿಯಲ್ಲಿ ನೀಡಲಾಗುತ್ತಿರುವ ಸೇವೆಗಳು.

**2. ಪೇಜ್ಯಾಪ್ ಸೇವೆಗಳು.**

**2.1** ಈ ನಿಯಮ ಹಾಗೂ ಷರತ್ತುಗಳಲ್ಲಿ ನಮೂದಿಸಲಾಗಿರುವ, ಗ್ರಾಹಕರ ವಿನಂತಿಯನ್ನು ಆಧರಿಸಿ ಮತ್ತು ಗ್ರಾಹಕರ ಪ್ರಾತಿನಿಧ್ಯಗಳು, ಖಾತರಿಗಳು, ಒಡಂಬಡಿಕೆಗಳು ಮತ್ತು ಉದ್ಯಮಗಳನ್ನು ಅವಲಂಬಿಸಿ, ಗ್ರಾಹಕರಿಗೆ ಪೇಜ್ಯಾಪ್ ಸೇವೆಗಳನ್ನು, ಪೇಜ್ಯಾಪ್ ಪಿಪಿಐಅನ್ನು ರಚಿಸಿ ಗ್ರಾಹಕರಿಗೇ ನಿಯೋಜಿಸುವುದನ್ನೂ ಒಳಗೊಂಡಂತೆ, ಈ ನಿಯಮ ಮತ್ತು ಷರತ್ತುಗಳಲ್ಲಿ ತಿಳಿಸಿರುವ ಮಾದರಿಯಲ್ಲಿ ನೀಡಲು, ಬ್ಯಾಂಕು ಒಪ್ಪಿರುತ್ತದೆ.

**2.2** ಪೇಜ್ಯಾಪ್ ಸೇವೆಗಳು ಮತ್ತು ಪೇಜ್ಯಾಪ್ ಪಿಪಿಐಅನ್ನು ರಚಿಸಿ ಬಳಸಿಕೊಳ್ಳಲು ಒಂದು ಪೂರ್ವಭಾವಿ ಷರತ್ತಾಗಿರುವಂತೆ, ಗ್ರಾಹಕರು ಈ ಪ್ರಯೋಜನಗಳನ್ನು ಪಡೆದುಕೊಳ್ಳಲು ಬ್ಯಾಂಕ್‌ನೊಂದಿಗೆ ನೊಂದಾಯಿಸಿಕೊಳ್ಳುವುದು ಅತ್ಯಾವಶ್ಯಕ. ಈ ರೀತಿ ನೊಂದಾವಣಿ ಮಾಡಿಕೊಳ್ಳಲು, ಬ್ಯಾಂಕ್ ಕೇಳುವ ಎಲ್ಲ ಮಾಹಿತಿ ಮತ್ತು ವಿವರಗಳನ್ನೂ ಗ್ರಾಹಕರು ಬ್ಯಾಂಕಿಗೆ ಒದಗಿಸಬೇಕು. ಗ್ರಾಹಕರು:

**2.3** ಬ್ಯಾಂಕ್‌ನಿಂದ ನೀಡಲಾಗಿರುವ ಯಾವುದೇ ಕಾರ್ಡ್‌ಗಳನ್ನು ಪೇಜ್ಯಾಪ್ ಅಪ್ಲಿಕೇಷನ್ ಮೂಲಕ ನಡೆಸುವ ಎಲ್ಲ ವ್ಯವಹಾರಗಳಿಗೆ ಸಂಬಂಧಿಸಿದಂತೆ ಗ್ರಾಹಕರು ಯಾವುದೇ ವೆಚ್ಚಗಳ ಮೇಲೆ ಮಿತಿಗಳನ್ನು ಕಾಯ್ದುಕೊಳ್ಳುವಂತೆ ಬ್ಯಾಂಕಿಗೆ ನಿರ್ದೇಶಿಸುವ ಆಯ್ಕೆ ಗ್ರಾಹಕರಿಗೆ ಇರುತ್ತದೆ.

**2.4** ನೊಂದಾವಣಿ ಪ್ರಕ್ರಿಯೆ ಪೂರ್ಣಗೊಳಿಸಿದ ನಂತರ, ಗ್ರಾಹಕರಿಗೆ ಪ್ರತ್ಯೇಕವಾದ, ಅನನ್ಯವಾದ ವೈಯುಕ್ತಿಕ ಗುರುತಿನ ಸಂಖ್ಯೆ (ಪಿಐಎನ್-ಪರ್ಸನಲ್ ಐಡೆಂಟಿಟಿ ನಂಬರ್) ಯನ್ನು ಸೃಷ್ಟಿಸಿ ನೀಡಲಾಗುತ್ತದೆ. ಈ ಮೂಲಕ ಗ್ರಾಹಕನು ಪೇಜ್ಯಾಪ್ ಸೇವೆಗಳನ್ನು ಬಳಸಿಕೊಳ್ಳಬೇಕಾಗುವ ಸಂದರ್ಭಗಳಲ್ಲಿ ಬ್ಯಾಂಕಿನಿಂದ ದೊರೆತಿರುವ ಸೆಕ್ಯೂರ್ ಪಿನ್ **(ಸುರಕ್ಷಿತ ಪಿನ್)** ಅನ್ನು ಬಳಸುವುದು ಅನಿವಾರ್ಯವೆಂದು ಒಪ್ಪಿರುತ್ತಾನೆ ಮತ್ತು ಅಂಗೀಕರಿಸಿರುತ್ತಾನೆ.ಅಲ್ಲದೆ, ಸೆಕ್ಯೂರ್ ಪಿನ್ನಿನ ಗೌಪ್ಯತೆ, ಸುರಕ್ಷತೆಗಳನ್ನು ಕಾಪಾಡಿಕೊಳ್ಳುವ ಸಂಪೂರ್ಣ ಜವಾಬ್ದಾರಿ ತನ್ನದೇ ಎಂಬುದನ್ನು ಒಪ್ಪಿ ಅಂಗೀಕರಿಸಿರುತ್ತಾನೆ. ಗ್ರಾಹಕರು ಪೇಜ್ಯಾಪ್ ಆಪ್‌ಅನ್ನು ಉಪಯೋಗಿಸಲು ಸೆಕ್ಯೂರ್ ಪಿನ್ ಅನಿವಾರ್ಯವೆಂದೂ, ಸೆಕ್ಯೂರ್ ಪಿನ್ನಿನ ಗೌಪ್ಯತೆ, ಸುರಕ್ಷತೆ, ಕಾಪಾಡುವಿಕೆಗಳ ಜವಾಬ್ದಾರಿ ತಮ್ಮದೇ ಎಂಬುದನ್ನು ಒಪ್ಪಿರುತ್ತಾರೆ ಮತ್ತು ಅಂಗೀಕರಿಸಿರುವರಲ್ಲದೇ ಸೆಕ್ಯೂರ್ ಪಿನ್‌ಅನ್ನು ಯಾರೊಂದಿಗೂ ಹಂಚಿಕೊಳ್ಳುವುದಿಲ್ಲ ಅಥವಾ ಯಾವ ವ್ಯಕ್ತಿಗೂ ಹೇಳುವುದಿಲ್ಲ ಎಂದು ಒಪ್ಪಿರುತ್ತಾರೆ. ಗ್ರಾಹಕರು ಪೇಜ್ಯಾಪ್ ಆಪ್ ಬಳಸಲೆಂದು ತಾವೇ ಸೃಷ್ಟಿಸಿಕೊಂಡಿರುವ ಸೆಕ್ಯೂರ್ ಪಿನ್ ಅನನ್ಯವಾದು ಮತ್ತು ಅದರಿಂದ ಇತರ ಯಾವುದೇ ಉಪಕರಣ ಬಳಕೆದಾರರ ಯಾವುದೇ ತೆರನಾದ ಸೇವೆ, ಫೋನ್-ಬ್ಯಾಂಕಿಂಗ್, ನೆಟ್-ಬ್ಯಾಂಕಿಂಗ್ ಸೇರಿದಂತೆ, ಬಳಸಲು/ತೆರೆಯಲು ಸಾಧ್ಯವಿಲ್ಲವೆಂಬುದನ್ನೂ ಒಪ್ಪಿ ಅಂಗೀಕರಿಸಿರುತ್ತಾರೆ. ಪೇಜ್ಯಾಪ್ ಆಪ್‌ನ ಸೆಕ್ಯೂರ್ ಪಿನ್ ಇತರ ಯಾವುದೇ ಪಿನ್‌ಗಳಿಗಿಂತ, ಏಟಿಎಂ ಪಿನ್ ಸೇರಿದಂತೆ, ವಿಭಿನ್ನವಾದುದೆಂದು ಅರಿತು ಅಂಗೀಕರಿಸಿರುತ್ತಾರೆ. ಗ್ರಾಹಕರು (ಬ್ಯಾಂಕು ಕಾಲಾನುಕಾಲದಲ್ಲಿ ಇಂತಹ ಸಂಖ್ಯೆಗಳನ್ನು ಸೃಷ್ಟಿಸಲು ನಿರ್ಧರಿಸಬಹುದಾಗಿರುವುದರಿಂದ) ಪೇಜ್ಯಾಪ್ ಅಪ್ಲಿಕೇಷನ್ ಬಳಸಿಕೊಳ್ಳಬೇಕಾದ ಸಂದರ್ಭಗಳಲ್ಲಿ ತಪ್ಪಾದ/ಸರಿಯಾಗಿರದ ಸೆಕ್ಯೂರ್ ಪಿನ್ನನ್ನು ಪದೇಪದೇ ಬಳಸಿದಲ್ಲಿ ಪೇಜ್ಯಾಪ್ ಅಪ್ಲಿಕೇಷನ್ ಬಳಕೆಯನ್ನು ತಾತ್ಕಾಲಿಕವಾಗಿ ಅಮಾನ್ಯವೆಂದು ತೀರ್ಮಾನಿಸಿ ಸೆಕ್ಯೂರ್ ಪಿನ್ನನ್ನು ಅನೂರ್ಜಿತಗೊಳಿಸಬಹುದು/ರದ್ದುಗೊಳಿಸಬಹುದು ಮತ್ತು/ಅಥವಾ ಪೇಜ್ಯಾಪ್ ಅಪ್ಲಿಕೇಷನ್‌ನಿಂದ ಅಂತಹ ಗ್ರಾಹಕರನ್ನು ಲಾಗ್-ಔಟ್ ಮಾಡುವ ಅವಕಾಶವಿರುತ್ತದೆಂಬ ಅಂಶವನ್ನು ಅರ್ಥೈಸಿಕೊಂಡಿರುತ್ತಾರೆ ಮತ್ತು ಅಂಗೀಕರಿಸಿರುತ್ತಾರೆ. ಎಲ್ಲ ಸನ್ನಿವೇಶಗಳಲ್ಲೂ, ಸೆಕ್ಯೂರ್ಡ್ ಪಿನ್ ಕಳೆದಿರುವ ಅಥವಾ ಅಲಭ್ಯವಾಗಿರುವ ಸಂದರ್ಭ, ಪೇಜ್ಯಾಪ್‌ಆಪ್ ಬಳಸಲು ಉಪಯೋಗಿಸುತ್ತಿರುವ ಮೊಬೈಲ್ ಸಾಧನ ಕಳೆದಿರುವ, ಕಳ್ಳತನವಾಗಿರುವ, ಕೈಗೆಟುಕದಿರುವ ಸನ್ನಿವೇಶ, ಅನಧಿಕೃತ ವ್ಯವಹಾರ ನಡೆಸಿರುವ ಸಂದರ್ಭಗಳೂ ಸೇರಿದಂತೆ, ಗ್ರಾಹಕರು ವಾಸ್ತವಾಂಶವನ್ನು ತಕ್ಷಣವೇ, ಷರತ್ತು **24**ರಲ್ಲಿ ನಮೂದಿಸಿರುವ ಗ್ರಾಹಕರ ಸಮಗ್ರ ಸುರಕ್ಷೆ ಎಂಬ ಬ್ಯಾಂಕಿನ ಮೂಲತತ್ವದ ಪ್ರಕಾರ, ಬ್ಯಾಂಕಿನ ಗಮನಕ್ಕೆ ತರಬೇಕು. ಆರ್‌ಬಿಐ ನಿರ್ದೇಶನಕ್ಕೆ ಒಳಪಟ್ಟಂತೆ, ಗ್ರಾಹಕರು ಸೆಕ್ಯೂರ್ಡ್ ಪಿನ್ ಕಳೆದುಕೊಂಡಿರುವ ಸಂದರ್ಬದಲ್ಲಿ ಬೇರೆ ಯಾರಿಂದಲೋ ತಮ್ಮ ಪೇಜ್ಯಾಪ್ ಆಪ್‌ಅನ್ನು ಅನಧಿಕೃತವಾಗಿ ಉಪಯೋಗಿಸುವುದರಿಂದ/ದುರುಪಯೋಗ ಮಾಡುವುದರಿಂದ ಗ್ರಾಹಕರ ವ್ಯವಹಾರಗಳ ಮೇಲೆ ವ್ಯತಿರಿಕ್ತ, ಊಹಾತೀತ ದುಷ್ಪರಿಣಾಮಗಳೇನಾದರೂ ಸಂಭವಿಸಿದ್ದಲ್ಲಿ, ಯಾವುದೇ ಮಟ್ಟದ ನಷ್ಟಗಳು ಸಂಭವಿಸಿದ್ದಾಗಲಾಗಲೀ, ಅಂತಹ ಎಲ್ಲ ದುಷ್ಪರಿಣಾಮಗಳಿಗೂ, ಅದರಿಂದಾದ ಆರ್ಥಿಕ ಅಥವಾ ವ್ಯಾವಹಾರಿಕ ಕಷ್ಟನಷ್ಟಗಳಿಗೆಲ್ಲಾ ಗ್ರಾಹಕರೇ ಜವಾಬ್ದಾರರೆಂದೂ, ಅಂತಹ ಅಚಾತುರ್ಯಗಳ ವ್ಯವಹಾರಗಳು ಬ್ಯಾಂಕಿನ ಮೂಲಕ, ಪೇಜ್ಯಾಪ್ ಮೂಲಕ ಸಂಭವಿಸಿದ ಕಾರಣ ಬ್ಯಾಂಕು ಅನುಭವಿಸಿದ ನಷ್ಟಗಳಿಗೂ ಸಹ ಗ್ರಾಹಕರೇ ಜವಾಬ್ದಾರರು ಹಾಗೂ ಅವುಗಳಿಗೆ ಸಂಬಂಧಿಸಿದ ಎಲ್ಲ ಖರ್ಚುವೆಚ್ಚಗಳನ್ನು ಗ್ರಾಹಕರೇ ಭರಿಸಬೇಕೆಂದು ಗ್ರಾಹಕರು ಅರಿತಿದ್ದು, ಒಪ್ಪಿ, ಅಂಗೀಕರಿಸಿರುತ್ತಾರೆ. ಈ ಘಟನಾವಳಿಗಳಿಗೆ ಬ್ಯಾಂಕ್ ಯಾವುದೇ ಕಾರಣಕ್ಕೂ ಬಾಧ್ಯವಾಗುವುದಿಲ್ಲ, ಬಾಧ್ಯಸ್ತರಾಗುವುದಿಲ್ಲ ಮತ್ತು ಅವುಗಳ ಪರಿಣಾಮಗಳಿಗೆಲ್ಲ ಗ್ರಾಹಕರೇ ನೇರವಾಗಿ ಬಾಧ್ಯರು, ಜವಾಬ್ದಾರರು, ಮತ್ತು ಬಾಧ್ಯಸ್ತರು.

**2.5** ಈ ಮೂಲಕ ಒಪ್ಪಿಗೆ ನೀಡಿ ಅಂಗೀಕರಿಸುವುದೇನೆಂದರೆ, ಪೇಜ್ಯಾಪ್ ಸೇವೆಗಳನ್ನು ನೀಡುವ ಉದ್ದೇಶಕ್ಕಾಗಿ, ಅಂಕಿ-ಅಂಶಗಳನ್ನು(ಡ್ಯಾಟಾ) ಬ್ಯಾಂಕು ಕುಕೀಗಳು, ಟೋಕನ್‌ಗಳು ಅಥವಾ ಇತರ ರೂಪದಲ್ಲಿ ಗ್ರಾಹಕರ ಮೊಬೈಲ್ ಸಾಧನಕ್ಕೆ, ನೊಂದಾವಣಿ ಸಂದರ್ಭದಲ್ಲಿ, ರವಾನಿಸುತ್ತದೆ ಮತ್ತು ಈ ಮೂಲಕ ಗ್ರಾಹಕರು ಒಪ್ಪಿ ಅಂಗೀಕರಿಸುವುದೇನೆಂದರೆ ಈ ಹಿಂದೆ ತಿಳಿಸಿದ ರೀತಿಯಲ್ಲಿ ಡ್ಯಾಟಾ ರವಾನಿಸಲು ಮತ್ತು ಅವಶ್ಯಕವಾದಲ್ಲಿ, ಎಸ್‌ಎಂಎಸ್ ಮೂಲಕ ಗ್ರಾಹಕರಿಗೆ ಸಂವಹನಗಳನ್ನು ಆ ಬ್ಯಾಂಕಿಗೆ ಸ್ಪಷ್ಟವಾಗಿ ಅಧಿಕಾರ ನೀಡಿರುತ್ತಾರೆ

**2.6 ಸ್ವೈಪ್ ಟು ಪೇ:**

ಬ್ಯಾಂಕಿನಿಂದ ನೀಡಲ್ಪಟ್ಟಿರುವ ಕಾರ್ಡ್ ಮತ್ತು/ಅಥವಾ ಪೇಜ್ಯಾಪ್ ವ್ಯಾಲೆಟ್‌ಅನ್ನು ಹೊಂದಿರುವ ಗ್ರಾಹಕರಿಗೆ ಬ್ಯಾಂಕ್ "ಸ್ವೈಪ್ ಟು ಪೇ" ಸವಲತ್ತನ್ನು ನೀಡಬಹುದಾಗಿದೆ ಮತ್ತು ಈ ಸವಲತ್ತು **ಷೆಡ್ಯೂಲ್ 7** ರಲ್ಲಿ ನಮೂದಿಸಿರುವಂತೆ ಬ್ಯಾಂಕಿನ ನಿಯಮ ಮತ್ತು ಷರತ್ತುಗಳಿಗೆ ಬದ್ಧವಾಗಿರಬೇಕು.

**3. ಪೇಜ್ಯಾಪ್‌ನ ಉಪಯೋಗ**

**3.1** ನೊಂದಾವಣಿ ಪ್ರಕ್ರಿಯೆ ಪೂರ್ಣಗೊಂಡ ನಂತರ, ಮೇಲೆ ಕ್ಲಾಸ್ 2 ರಲ್ಲಿ ತಿಳಿಸಿರುವಂತೆ, ಕಾಲಾನುಕಾಲಕ್ಕೆ ಬ್ಯಾಂಕ್ ಅನುಮೋದಿಸಿರುವ ಯಾವುದೇ ವ್ಯವಹಾರಗಳನ್ನು ಕೈಗೊಳ್ಳಲು, ಗ್ರಾಹಕರು ಅರ್ಹರಾಗಿರುತ್ತಾರೆ.

**3.2** ಪ್ರಸ್ತುತದಲ್ಲಿ ಮೇಲೆ ನಮೂದಾಗಿರುವ **ಷೆಡ್ಯೂಲ್ 1** ರಲ್ಲಿ ನಮೂದಿಸಿರುವಂತೆ, ಪೇಜ್ಯಾಪ್ ಪಿಪಿಐ ಬಳಸುವಿಕೆಗೆ ಸಂಬಂಧಿಸಿದಂತೆ, ಗ್ರಾಹಕರು ನಿಯಮಗಳು ಮತ್ತು ಷರತ್ತುಗಳ ಪಾಲನೆಗೆ, ಹೆಚ್ಚುವರಿಯಾಗಿ ಬಾಧ್ಯರಾಗುತ್ತಾರೆ.

**3.3** **"ಸ್ಮಾರ್ಟ್‌ಬಯ್"** ವ್ಯಾಪಾರಿಗಳ ವಿಷಯದಲ್ಲಿ, ಪೇಜ್ಯಾಪ್ ಅಪ್ಲಿಕೇಷನ್‌ನ 'ಶಾಪ್' ವಿಭಾಗದಲ್ಲಿ, ಪ್ಯೇಜ್ಯಾಪ್‌ಅನ್ನು ಉಪಯೋಗಿಸಿಕೊಂಡು ಯಾವುದೇ ವ್ಯವಹಾರಗಳನ್ನು ಗ್ರಾಹಕರು ಮಾಡಬಹುದು ಮತ್ತು 'ಸ್ಮಾರ್ಟ್‌ಬಯ್' ವ್ಯಾಪಾರಿಗಳಿಗೆ ಗ್ರಾಹಕರು ಖರೀದಿಸಿದ ವಸ್ತು ಅಥವಾ ಸೇವೆಗಳ ಮೌಲ್ಯಗಳಿಗೆ ಹಣ ಸಂದಾಯ ಮಾಡುವುದನ್ನು ಪೇಜ್ಯಾಪ್ ಮೂಲಕವೇ ಮಾಡಬಹುದು. ಈ ಸಂದರ್ಭದಲ್ಲಿ, ಗ್ರಾಹಕರು, ಹೆಚ್ಚುವರಿಯಾಗಿ, ಈ ಕೆಳಗಿನ **ಷೆಡ್ಯೂಲ್ 5** ರಲ್ಲಿ ನಮೂದಿಸಿರುವ ನಿಯಮಗಳು ಮತ್ತು ಷರತ್ತುಗಳಿಗೆ ಬದ್ಧರಾಗಿರುತ್ತಾರೆ.

**ವರ್ಗೀಕರಣ – ಆಂತರಿಕ**

**3.4** ಗ್ರಾಹಕರು ಪೇಜ್ಯಾಪ್ ಅಪ್ಲಿಕೇಷನ್ ಮೂಲಕ ತಮ್ಮ ವಿಧವಿಧವಾದ ಬಿಲ್ಲುಗಳನ್ನು, ರೀಛಾರ್ಜ್ ಮತ್ತು ಬಿಲ್ ಪಾವತಿ ಒಳಗೊಂಡಂತೆ, ಪಾವತಿಸಬಹುದು. ಈ ಸೌಲಭ್ಯಕ್ಕೆ ಸಂಬಂಧಿಸಿದಂತೆ, ಗ್ರಾಹಕರು **ಷೆಡ್ಯೂಲ್ 3** ರಲ್ಲಿ ವಿವರಿಸಿರುವ ನಿಯಮ ಮತ್ತು ಷರತ್ತುಗಳಿಗೆ, ಹೆಚ್ಚುವರಿಯಾಗಿ ಬದ್ಧರಾಗುತ್ತಾರೆ.

**3.5** ಯುಪಿಐ ಸೇವೆಗಳಿಗೆ ಸಂಬಂಧಿಸಿದಂತೆ, ಗ್ರಾಹಕರು **ಷೆಡ್ಯೂಲ್ 6** ರಲ್ಲಿ ವಿವರಿಸಿರುವ ನಿಯಮ ಮತ್ತು ಷರತ್ತುಗಳಿಗೆ, ಹೆಚ್ಚುವರಿಯಾಗಿ ಬದ್ಧರಾಗುತ್ತಾರೆ.

**3.6** ಈ ಮೂಲಕ ಒಪ್ಪಿರುವುದೇನೆಂದರೆ ಅವರು ಸದಾಕಾಲವೂ ತಮ್ಮ ಖಾತೆ, ಕೆವೈಸಿ ವಿವರಗಳು, ಮತ್ತು ಅವರನ್ನು ತಲುಪುವ ಬಗೆಗಿನ ಸಂಪೂರ್ಣ ಮಾಹಿತಿಗಳನ್ನು, ನವೀಕರಿಸಿಟ್ಟುಕೊಂಡಿರುವರೆಂದು.

**3.7** ಗ್ರಾಹಕರಿಗೆ, ಸೂಚಿತರಿಗೆ (ನಾಮಿನೀಗಳಿಗೆ) ಅಥವಾ ಎಸ್ಟೇಟ್‌ಗಳಿಗೆ ಎಚ್ಚರಿಕೆ ಸೂಚನೆ ಅಥವಾ ಸಂವಹನಗಳನ್ನು ಕಳುಹಿಸಲು/ರವಾನಿಸಲು ಬ್ಯಾಂಕು ಮೂರನೇ ಪಕ್ಷಗಳ ಸೇವೆಗಳನ್ನು ಬಳಸಿಕೊಳ್ಳಬಹುದೆಂಬುದನ್ನು ಗ್ರಾಹಕರು ಈ ಮೂಲಕ ಒಪ್ಪಿ, ಸ್ವೀಕರಿಸಿರುತ್ತಾರೆ. ಬ್ಯಾಂಕು ಗ್ರಾಹಕರನ್ನು ಸಂಪರ್ಕಿಸಲು, ಕರೆ ಮಾಡಲು, ಎಸ್‌ಎಂಎಸ್, ಇ-ಮೈಲ್ ಗಳನ್ನು ಕಳುಹಿಸಲು ಮತ್ತು ಇತರ ಯಾವುದೇ ರೀತಿಯ ಸಂವಹನಗಳನ್ನು ಗ್ರಾಹಕರಿಗೆ ತಲುಪಿಸಲು, ಬ್ಯಾಂಕು ಡಿಎನ್‌ಡಿ ಆದ್ಯತೆ/ಸಂಯೋಜನೆಗಳು ಅಥವಾ ತತ್ಸಮವಾದ ನೊಂದಾವಣೆ ಅಗತ್ಯತೆ/ನಿಯಮವನ್ನುಲೆಕ್ಕಿಸದೆ ವ್ಯವಹರಿಸಲು ಗ್ರಾಹಕರು ಬ್ಯಾಂಕಿಗೆ ಅಧಿಕಾರ ನೀಡಿರುವುದಾಗೆ ಒಪ್ಪಿರುತ್ತಾರೆ.

**3.8** ಪೇಜ್ಯಾಪ್ ಯಾವುದೇ ರೀತಿಯ ವ್ಯವಹಾರಗಳನ್ನು ಪೇಜ್ಯಾಪ್ ಮೂಲಕ ಕೈಗೊಳ್ಳಲು/ಪ್ರಾರಂಭಿಸಲು, ವ್ಯಾಪಾರಿಗಳೊಂದಿಗೆ ವ್ಯವಹರಿಸುವುದು, ಬಿಲ್ ಪಾವತಿ/ರೀಛಾರ್ಜ್ ಮುಂತಾದವುಗಳು ಸೇರಿದಂತೆ, ಲಭ್ಯವಿರುವ ಒಂದು ಸಾಧನ ಮಾತ್ರ ಎಂದು ಗ್ರಾಹಕರು ಒಪ್ಪಿರುತ್ತಾರೆ ಮತ್ತು ಅಂಗೀಕರಿಸಿರುತ್ತಾರೆ. ಇಲ್ಲಿ ತೋರಿಸುತ್ತಿರುವ ಯೋಜನೆಗಳು ಕೇವಲ ಗ್ರಾಹಕರ ಅನುಕೂಲಕ್ಕಾಗಿ. ಈ ದಿಸೆಯಲ್ಲಿ ಕಂಡುಬರಬಹುದಾದ ಯಾವುದೇ ವ್ಯಾಜ್ಯ/ಪ್ರಶ್ನೆ/ ಪರಿಹಾರ/ ಕುಂದುಕೊರತೆ ಮುಂತಾದುವುಗಳಿಗೆ ಬ್ಯಾಂಕು ಬಾಧ್ಯವಲ್ಲ ಮತ್ತು ಗ್ರಾಹಕರೇ ಸಂಬಂಧಪಟ್ಟ ವ್ಯಾಪಾರಿಗಳು/ಸೇವೆ ನೀಡುವವರೊಂದಿಗೆ ಪ್ರಸ್ತಾಪಿಸಿ ಪರಿಹಾರ ಪಡೆಯುವುದಾಗೆ ಗ್ರಾಹಕರು ಒಪ್ಪಿರುತ್ತಾರೆ ಮತ್ತು ಅಂಗೀಕರಿಸಿರುತ್ತಾರೆ.

**3.9** ಗ್ರಾಹಕರು ಒಪ್ಪಿಕೊಂಡು ಅಂಗೀಕರಿಸಿರುವುದೇನೆಂದರೆ ಯಾವುದೇ ಕಾರ್ಡ್‌ಅನ್ನು ಬಳಸಿ ನಡೆಸುವ ಎಲ್ಲ ವ್ಯವಹಾರಗಳೂ ಕಾರ್ಡ್ ಸಂಘಟನೆಗಳು ನಿಗದಿಪಡಿಸಿರುವ ನಿಯಮಗಳು ಮತ್ತು ಷರತ್ತುಗಳಿಗೆ ಬದ್ಧವಾಗಿರುತ್ತವೆ ಮತ್ತು ಪ್ರತ್ಯೇಕ ಕಾರ್ಡಿಗೆ ಅದನ್ನು ನೀಡಿರುವ ಬ್ಯಾಂಕಿನ ಅಥವಾ ನೀಡಿರಬಹುದಾದ ಇತರರ **(ಸಾಮೂಹಿಕವಾಗಿ "ನೀಡಿರುವವರು")** ನಿಯಮ ಮತ್ತು ಷರತ್ತುಗಳಿಗೂ ಬದ್ಧವಾಗಿರುತ್ತವೆ. ಈ ನಿಯಮ ಮತ್ತು ಷರತ್ತುಗಳನ್ನು ಅನುಸರಿಸುವ ಮತ್ತು ನೀಡುವವರು ವಿಧಿಸುವ ಯಾವುದೇ ಶುಲ್ಕ ಅಥವಾ ಜುಲ್ಮಾನೆಗಳನ್ನು ನಿಗದಿತ ಸಮಯದಲ್ಲಿ ಪಾವತಿಸು ಜವಾಬ್ದಾರಿ ತಮ್ಮದೆಂದು ಗ್ರಾಹಕರು ಒಪ್ಪಿರುತ್ತಾರೆ ಮತ್ತು ಅಂಗೀಕರಿಸಿರುತ್ತಾರೆ.

**3.10** ಪ್ರತಿ ಗ್ರಾಹಕರು ಒಂದು ದಿನದಲ್ಲಿ ಬ್ಯಾಂಕ್ ನಿಗದಿ ಪಡಿಸಿರುವ ಗರಿಷ್ಠ ಸಂಖ್ಯೆ ಮತ್ತು/ಅಥವಾ ಮೊತ್ತದ ವ್ಯವಹಾರಗಳನ್ನು ನಡೆಸಲು, ಮತ್ತು/ಅಥವಾ ಕಾಲಾನುಕಾಲಕ್ಕೆ ಬ್ಯಾಂಕಿನ ವಿವೇಚನೆಗೆ ತೋರಿದಂತೆ ವ್ಯವಹಾರ ನಡೆಸಲು ಮಾತ್ರ ಬ್ಯಾಂಕ್ ಗ್ರಾಹಕರಿಗೆ ಅವಕಾಶ ನೀಡುತ್ತದೆ. ಆದಾಗ್ಯೂ, ಈ ಪರಿಮಿತಿಯನ್ನು ಒಂದು ಮೊಬೈಲ್ ಸಾಧನಕ್ಕೆ ಎಂಬಂತೆ ಲೆಕ್ಕ ಹಾಕಲಾಗುತ್ತದೆ ಮತ್ತು ಒಂದೇ ಮೊಬೈಲ್ ಸಾಧನದಲ್ಲಿಯೇ ಎಲ್ಲ ವ್ಯವಹಾರಗಳೂ ನಡೆಯುತ್ತಿರುವ ಸಂದರ್ಭಗಳಲ್ಲಿ, ಒಬ್ಬ ಅಥವಾ ಅನೇಕ ಗ್ರಾಹಕರಿಗೆ ಸೇರಿಸಿ, ಆ ಎಲ್ಲ ಗ್ರಾಹಕರನ್ನೂ ಒಬ್ಬರೇ ಎಂದು ಪರಿಗಣಿಸಿ ಏಕೈಕ ಪರಿಮಿತಿಯನ್ನು ನಿಗದಿಪಡಿಸಲಾಗುತ್ತದೆ ಮತ್ತು ಅಂತಹ ಸನ್ನಿವೇಶದಲ್ಲಿ ಪ್ರತಿಯೊಬ್ಬ ಗ್ರಾಹಕನಿಗೂ ಪ್ರತ್ಯೇಕ ಮಿತಿಯನ್ನು ನಿಷ್ಕರ್ಶಿಸಲಾಗುವುದಿಲ್ಲ.

**3.11** ಕಾಲಕಾಲಕ್ಕೆ ಬ್ಯಾಂಕ್ ಯಾವುದೇ ಗ್ರಾಹಕರಿಗೆ ಒಂದು ದಿನದಲ್ಲಿ ಇಷ್ಟೇ ಪ್ರಮಾಣದ ವ್ಯವಹಾರಗಳನ್ನು, ಬ್ಯಾಂಕಿನ ವಿವೇಚನೆಗೆ ತೋರಿದಂತೆ ಪ್ರತಿಯೊಬ್ಬ ಗ್ರಾಹಕರಿಗೂ ನಿಗದಿಪಡಿಸುತ್ತದೆ ಮತ್ತು ಹಾಗೆ ನಿಗದಿಪಡಿಸಿರುವ ಗರಿಷ್ಠ ಮಟ್ಟದ ವ್ಯವಹಾರಗಳನ್ನು ನಡೆಸಲು ಮಾತ್ರ ಬ್ಯಾಂಕ್ ಅವಕಾಶ ನೀಡುತ್ತದೆ. ಗ್ರಾಹಕರು ತಮ್ಮ ಅನುಕೂಲ/ಅವಶ್ಯಕತೆಗಳನ್ನವಲಂಬಿಸಿ ಪೇಜ್ಯಾಪ್ ಆಪ್‌ನಲ್ಲಿ ತಮ್ಮ ವ್ಯವಹಾರದ ಗರಿಷ್ಠ ಪರಿಮಿತಿಯನ್ನು ತಾವೇ ನಿಗದಿಪಡಿಸಿಕೊಳ್ಳುವ ವ್ಯವಸ್ಥೆಯನ್ನು ಬ್ಯಾಂಕ್ ಪರಿಗಣಿಸಬಹುದು. ಆದಾಗ್ಯೂ, ಅಂತಹ ಪರಿಮಿತಿಯನ್ನು ಒಂದು ಮೊಬೈಲ್ ಸಾಧನಕ್ಕೆ ಎಂಬಂತೆ ಮಾತ್ರ ಲೆಕ್ಕ ಹಾಕಲಾಗುತ್ತದೆ ಮತ್ತು ಒಂದೇ ಮೊಬೈಲ್ ಸಾಧನದಲ್ಲಿಯೇ ಎಲ್ಲ ವ್ಯವಹಾರಗಳೂ ನಡೆಯುತ್ತಿರುವ ಸಂದರ್ಭಗಳಲ್ಲಿ, ಒಬ್ಬ ಅಥವಾ ಅನೇಕ ಗ್ರಾಹಕರಿಗೆ ಸೇರಿಸಿ, ಆ ಎಲ್ಲ ಗ್ರಾಹಕರನ್ನೂ ಒಬ್ಬರೇ ಎಂದು ಪರಿಗಣಿಸಿ ಏಕೈಕ ಪರಿಮಿತಿಯನ್ನು ನಿಗದಿಪಡಿಸಲಾಗುತ್ತದೆ ಮತ್ತು ಅಂತಹ ಸನ್ನಿವೇಶದಲ್ಲಿ ಪ್ರತಿಯೊಬ್ಬ ಗ್ರಾಹಕನಿಗೂ ಪ್ರತ್ಯೇಕ ಮಿತಿಯನ್ನು ನಿಷ್ಕರ್ಶಿಸಲಾಗುವುದಿಲ್ಲ. ವ್ಯಾಪಾರಿಯನ್ನುಗುರುತಿಸುವ/ ನಿಷ್ಕರ್ಶಿಸುವ ಉದ್ದೇಶಕ್ಕಾಗಿ, ಬ್ಯಾಂಕು ವ್ಯಾಪಾರಿಯ ಹೆಸರನ್ನು ಆಧರಿಸಿ ಎಂಸಿಸಿ, ಟಿಐಡಿ, ಅಥವಾ ಮರ್ಚೆಂಟ್ ಪ್ಯಾನ್ ಅನುಸರಿಸಿ ಅಥವಾ ಅವೆಲ್ಲವುಗಳನ್ನು ಪರಿಗಣಿಸಿ, ಮುಂದುವರಿಯಬಹುದು.

**3.12** ಕಾಲಕಾಲಕ್ಕೆ ಬ್ಯಾಂಕ್ ಯಾವುದೇ ಗ್ರಾಹಕರಿಗೆ ಒಂದು ದಿನದಲ್ಲಿ ಇಷ್ಟೇ ಪ್ರಮಾಣದ ವ್ಯವಹಾರಗಳನ್ನು, ಬ್ಯಾಂಕಿನ ವಿವೇಚನೆಗೆ ತೋರಿದಂತೆ ಪ್ರತಿಯೊಬ್ಬ ಗ್ರಾಹಕರಿಗೂ ನಿಗದಿಪಡಿಸುತ್ತದೆ ಮತ್ತು ಹಾಗೆ ನಿಗದಿಪಡಿಸಿರುವ ಗರಿಷ್ಠ ಮಟ್ಟದ ವ್ಯವಹಾರಗಳನ್ನು ನಡೆಸಲು ಮಾತ್ರ ಬ್ಯಾಂಕ್ ಅವಕಾಶ ನೀಡುತ್ತದೆ. ಆದಾಗ್ಯೂ, ಈ ಪರಿಮಿತಿಯನ್ನು ಒಂದು ಮೊಬೈಲ್ ಸಾಧನಕ್ಕೆ ಎಂಬಂತೆ ಲೆಕ್ಕ ಹಾಕಲಾಗುತ್ತದೆ ಮತ್ತು ಒಂದೇ ಮೊಬೈಲ್

**3.13** ಸಾಧನದಲ್ಲಿಯೇ ಎಲ್ಲ ವ್ಯವಹಾರಗಳೂ ನಡೆಯುತ್ತಿರುವ ಸಂದರ್ಭಗಳಲ್ಲಿ, ಒಬ್ಬ ಅಥವಾ ಅನೇಕ ಗ್ರಾಹಕರಿಗೆ ಸೇರಿಸಿ, ಆ ಎಲ್ಲ ಗ್ರಾಹಕರನ್ನೂ ಒಬ್ಬರೇ ಎಂದು ಪರಿಗಣಿಸಿ ಏಕೈಕ ಪರಿಮಿತಿಯನ್ನುನಿಗದಿಪಡಿಸಲಾಗುತ್ತದೆ ಮತ್ತು ಅಂತಹ ಸನ್ನಿವೇಶದಲ್ಲಿ ಪ್ರತಿಯೊಬ್ಬ ಗ್ರಾಹಕನಿಗೂ ಪ್ರತ್ಯೇಕ ಮಿತಿಯನ್ನು ನಿಷ್ಕರ್ಶಿಸಲಾಗುವುದಿಲ್ಲ. ವ್ಯಾಪಾರಿಯನ್ನುಗುರುತಿಸುವ/ ನಿಷ್ಕರ್ಶಿಸುವ ಉದ್ದೇಶಕ್ಕಾಗಿ, ಬ್ಯಾಂಕು ವ್ಯಾಪಾರಿಯ ಹೆಸರನ್ನು ಆಧರಿಸಿ ಎಂಸಿಸಿ, ಟಿಐಡಿ, ಅಥವಾ ಮರ್ಚೆಂಟ್ ಪ್ಯಾನ್ ಅನುಸರಿಸಿ ಅಥವಾ ಅವೆಲ್ಲವುಗಳನ್ನು ಪರಿಗಣಿಸಿ, ಮುಂದುವರಿಯಬಹುದು.

**3.14** ಪೇಜ್ಯಾಪ್‌ಅನ್ನು ಕಾನೂನಾತ್ಮಕವಾಗಿ ಭಾರತದ ನಿವಾಸಿಗಳಿಗೆ ಮಾತ್ರ ನೀಡಲಾಗುತ್ತದೆ ಮತ್ತು ಅದನ್ನು ಬಳಸಬಹುದಾಗಿದೆ. ಇಲ್ಲಿ ನಮೂದಿಸಲಾಗಿರುವ ನಿಯಮ ಮತ್ತು ಷರತ್ತುಗಳಿಗೆ ಒಪ್ಪಿಗೆ ಹಾಗೂ ಅಂಗೀಕಾರ ನೀಡುವುದರ ಮೂಲಕ ತಾವು ಕಾನೂನಾತ್ಮಕವಾಗಿ ಭಾರತದ ನಿವಾಸಿಗಳೆಂಬುದನ್ನು ಗ್ರಾಹಕರು ದೃಢಿಕರಿಸಿರುತ್ತಾರೆ ಮತ್ತು ಭಾರತೀಯ ಕಾನೂನು ವ್ಯವಸ್ಥೆಯಲ್ಲಿ ಅಂತಹವರು ಒಪ್ಪಂದಗಳನ್ನು ಮಾಡಿಕೊಳ್ಳಲು ಅರ್ಹರೆಂಬುದನ್ನು ದೃಢೀಕರಿಸಿರುತ್ತಾರೆ. ಪೇಜ್ಯಾಪ್‌ಅನ್ನು ಭಾರತದಲ್ಲಿರುವ ಎಲ್ಲ ರಾಜ್ಯಗಳಲ್ಲಿ ಮತ್ತು ಭಾರತದ ಪ್ರದೇಶಗಳಲ್ಲಿ ಮಾತ್ರ ಬಳಸಲಾಗುತ್ತದೆ ಎಂದು ದೃಢಪಡಿಸಿರುತ್ತಾರೆ. ಅಲ್ಲದೆ ಪೇಜ್ಯಾಪ್‌ಅನ್ನು ಭಾರತದ ಗಡಿಯಾಚೆಗಿನ ಪ್ರದೇಶ ಅಥವಾ ಅದರ ಯಾವುದೇ ಭಾಗದಲ್ಲಿ ಪೇಜ್ಯಾಪ್‌ಅನ್ನು ಬಳಸುವುದಿಲ್ಲ ಎಂದೂ ಸ್ಪಷ್ಟಿಕರಿಸಿರುತ್ತಾರೆ. ಈ ನಿಯಮಾವಳಿಗಳು ಮತ್ತು ಷರತ್ತುಗಳನ್ನು ಅನುಸರಿಸುವುದು ಮತ್ತು ಬ್ಯಾಂಕ್ ಮತ್ತು/ಅಥವಾ ನೀಡುವವರು ನಿಗದಿಪಡಿಸುವ/ನಿಷ್ಕರ್ಶಿಸುವ ಯಾವುದೇ ಶುಲ್ಕ ಮತ್ತು/ಅಥವಾ ಜುಲ್ಮಾನೆಗಳನ್ನು ಪಾವತಿಸುವುದು ತಮ್ಮ ಜವಾಬ್ದಾರಿಯೆಂಬುದನ್ನು ಗ್ರಾಹಕರು ಒಪ್ಪಿರುತ್ತಾರೆ ಮತ್ತು ಅಂಗೀಕರಿಸಿರುತ್ತಾರೆ.

**3.15** ಪೇಜ್ಯಾಪ್ ಬಳಸಲೆಂದು ಬ್ಯಾಂಕ್‌ನಲ್ಲಿ ನೊಂದಾಯಿಸುವ ಮೂಲಕ, ಗ್ರಾಹಕರು (ಅ) ಯಾವುದೇ ಕಾನೂನುಬಾಹಿರವಾದ ಚಟುವಟಿಕೆಗಳಿಗೆ (ಬ) ಜೂಜಾಟ (ಕ) ವಯಸ್ಕ ಸೈಟ್‌ಗಳು (ಡ) ಆನ್‌ಲೈನ್ ಜೂಜಾಟ, **(**ಇ) ನಿಷೇಧಿತ ಸೇವೆಗಳು (ಫ) ಲಾಟರಿ ಟಿಕೇಟ್ ಖರೀದಿಯೂ ಸೇರಿದಂತೆ ಬೆಟ್ಟಿಂಗ್ ಧಂಧೆ (ಗ) ವಿದೇಶೀ ಹಣ/ಕರೆನ್ಸಿ ವ್ಯಾಪಾರ**,** ಮತ್ತು (ಹ) ಭಾರತೀಯ ಕಾನೂನುಗಳ ಪ್ರಕಾರ ಹಣ ಪಾವತಿ ನಿಷೇಧಿಸಲ್ಪಟ್ಟಿರುವಂತಹ ಚಟುವಟಿಕೆ ಮತ್ತು ವೀಸಾ/ ಮಾಸ್ಟರ್ ಕಾರ್ಡ್/ರುಪೇ ನೆಟ್‌ವರ್ಕ್ ಕಾನೂನುಗಳಿಗೆ ಬಾಹಿರವಾದ ವ್ಯವಹಾರಗಳಲ್ಲಿ ಪೇಜ್ಯಾಪ್ ಅಪ್ಲಿಕೇಷನ್ ಬಳಸುವುದಿಲ್ಲವೆಂದು ನೊಂದಾಯಿತ ಗ್ರಾಹಕರು ದೃಢೀಕರಿಸಿರುತ್ತಾರೆ.

**4 ಹೊಣೆಗಾರಿಕೆ (ಲೀನ್) ಮತ್ತು ಸೆಟ್ ಆಫ್**



ವರ್ಗೀಕರಣ – ಆಂತರಿಕ

Classification - Public

**ವರ್ಗೀಕರಣ – ಆಂತರಿಕ**

ಯಾವುದೇ ದಾಖಲಾತಿಗಳಲ್ಲಿ ಯಾವುದೇ ರೀತಿಯ ವೈರುಧ್ಯ(ವಿರೋಧಾಭಾಸ)ಗಳೇನೇ ಇದ್ದರೂ, (i) ಗ್ರಾಹಕರ ಸದ್ಯದಲ್ಲಿ ಬ್ಯಾಂಕಿನಲ್ಲಿ ಚಾಲ್ತಿಯಲ್ಲಿರುವ ಮತ್ತು ಮುಂದೆ ಬರುವ ಬಾಧ್ಯತೆಗಳು, ಅಂಗಸಂಸ್ಥೆಗಳು, ಗುಂಪು ಘಟಕಗಳು, ಸಹವರ್ತಿ ಘಟಕಗಳು, ಪೋಷಕ ಘಟಕಗಳು, ಅಂಗ ಸಂಸ್ಥೆಗಳು, ಯಾವುದೇ ಶಾಖೆಗಳು **(ಒಟ್ಟಾಗಿ "ಸಂಬಂಧಿತ (ರೆಲವೆಂಟ್) ಘಟಕಗಳು)**, ಈ ದಾಖಲಾತಿಯಲ್ಲಿರುವ ಅಥವಾ ಇತರ ಬಾಧ್ಯತೆ/ಸಾಲ/ಸವಲತ್ತುಗಳು/ಸಾಲ ಪಡೆದಿರುವುದು/ದಾಖಲಾತಿಯಾದರೂ, ಅಂತಹ ಬಾಧ್ಯತೆಗಳು ಈಗ/ಭವಿಷ್ಯದಲ್ಲಿ ಸ್ಫಟಿಕ ಹೊಂದುವ, ಪ್ರಸ್ತುತವಾದ ಅಥವಾ ಸಾಧ್ಯತೆಯಿರುವ, ಪ್ರಾಥಮಿಕ ಅಥವಾ ಮೇಲಾಧಾರವಾದ ಅಥವಾ ಅನೇಕ ಅಥವಾ ಇತರರೊಂದಿಗೆ ಒಗ್ಗೂಡಿಕೊಂಡಿರುವುದಾದಾಗ್ಯೂ, ಅದೇ ನಾಣ್ಯ(ಕರೆನ್ಸಿ)ಯಲ್ಲಿ ಅಥವಾ ವಿವಿಧ ಕರೆನ್ಸಿಗಳಲ್ಲಿದ್ದರೂ, ಪ್ರಧಾನ ಸಾಲಗಾರರಾಗಿ ಮತ್ತು/ಅಥವಾ ಖಾತರಿದಾರರಾಗಿ ಮತ್ತು/ಅಥವಾ ಇತರ ಯಾವುದೇ ವಿಧದಲ್ಲಿ **(ಸಾಮೂಹಿಕವಾಗಿ "ಬಾಧ್ಯತೆಗಳು(ಲಯಬಿಲಿಟೀಸ್)")**, ಸಂಬಂಧಿಸಿದ ಪ್ರತಿಯೊಂದು ಬ್ಯಾಂಕ್ ಮತ್ತು ರೆಲವೆಂಟ್ ಘಟಕಗಳಾಗಿ, ಅವರವರ ಸಾಮಾನ್ಯ ಹೊಣೆಗಾರಿಕೆ ಅಥವಾ ಅಂತಹುದೇ ಹಕ್ಕುಗಳಲ್ಲದೇ, ಹೆಚ್ಚುವರಿಯಾಗಿ (ಬ್ಯಾಂಕರ್‌ಗಳಾಗಿ ಅಥವಾ ಕಾನೂನು ಪ್ರಕಾರ ಆರ್ಥಿಕ ಸಂಸ್ಥೆಯೆಂಬುದಾಗಿ ಪರಿಗಣಿಸಲ್ಪಟ್ಟಿರುವ, ಅಭ್ಯಾಸದಿಂದ, ಸಾಂಪ್ರದಾಯಿಕವಾಗಿ ಅಥವಾ ಇನ್ನಿತರ ರೀತಿಯಲ್ಲಿ ಆರ್ಥಿಕ ಸಂಸ್ಥೆಯಾಗಿರುವ), ಗ್ರಾಹಕರ ಈಗಿನ (ಭೂತಕಾಲದ/ಪ್ರಸ್ತುತ) ಹಾಗೂ ಭವಿಷ್ಯತ್ತಿನ ಸ್ಟಾಕ್, ಶೇರ್‌ಗಳು, ಆಸ್ತಿಗಳು, ಬುಕ್ ಡೆಟ್‌ಗಳು (ಪುಸ್ತಕ ಸಾಲಗಳು), ಕರೆಂಟ್ ಖಾತೆ, ಸೇವಿಂಗ್ಸ್ ಖಾತೆ, ಓವರ್‌ಡ್ರಾಫ್ಟ್ , ಸ್ಥಿರ ಠೇವಣಿಗಳು, ಸ್ವಂತದ ಅಥವಾ ಜಾವಾಬ್ದಾರಿಯಾಗಿರುವ ಸಾಲದ ಖಾತೆ, ಕಾನೂನಾತ್ಮಕ ಅಥವಾ ಪ್ರಾಸಂಗಿಕ/ರಚನಾತ್ಮಕವಾದ, ಬ್ಯಾಂಕಿನೊಂದಿಗಿರುವ ಮತ್ತು/ಅಥವಾ ರೆಲವೆಂಟ್ ಘಟಕಗಳೊಂದಿಗೆ, ಯಾವುದೇ ಬ್ಯಾಂಕಿಂಗ್‌ಗೆ ಸಂಬಂಧಿಸಿರುವಂತೆ, ಸೇಫ್ ಕಸ್ಟಡಿ (ಸುರಕ್ಷಿತ ಪಾಲನೆ), ಸ್ವೀಕರಿಸುವಿಕೆ, ಅಥವಾ ಇನ್ನಿತರ, ಒಂದೇ ಕರೆನ್ಸಿ ಅಥವಾ ವಿವಿಧ ಕರೆನ್ಸಿಗಳಲ್ಲಿ ಮುಂತಾದ ಎಲ್ಲ ಖಾತೆಗಳಲ್ಲಿರುವ ಎಲ್ಲ ಹಣಗಳ ವಿಷಯದಲ್ಲಿ ವಿಶೇಷ, ಮತ್ತು ನಿರ್ದಿಷ್ಟ ಹೊಣೆಗಾರಿಕೆಯನ್ನು ಹೊಂದಿರುತ್ತಾರೆ, ಮತ್ತು (i i ) ಪ್ರತ್ಯೇಕವಾಗಿ, ಒಂದೊಂದು ಬ್ಯಾಂಕೂ ಮತ್ತು ರೆಲವೆಂಟ್ ಘಟಕಗಳೂ, ಯಾವುದೇ ಪೂರ್ವ ಸೂಚನೆಯಿಲ್ಲದೆ ಮತ್ತು ಗ್ರಾಹಕರ ಅನುಮತಿ ಇಲ್ಲದೆ, ಹಾಗೆ ಬೇಕಾಗಿರುವಷ್ಟು ಮೊತ್ತದ ಹಣವನ್ನು ಮೇಲೆ ನಮೂದಿಸಿರುವ ಎಲ್ಲ ಖಾತೆಗಳಿಂದ ಮತ್ತು ಠೇವಣಿಗಳಿಂದ ಸೆಟ್ ಆಫ್ (ಹಿಂಪಡೆದುಕೊಳ್ಳಲು)ಮಾಡಲು, ತಮಗೆ ಸೇರಬೇಕಿರುವ ಬಾಕಿ ಹಣವನ್ನು ಹಿಂಪಡೆದುಕೊಳ್ಳಲು ಅಥವಾ ಗ್ರಾಹಕರ ಇತರ ಯಾವುದೇ ಬಾಧ್ಯತೆಗಳನ್ನು ಸರಿಹೊಂದಿಸಲು, ಸಾಲ ಬಾಕಿಯನ್ನು, ಒಂದು ನಿರ್ದಿಷ್ಟ ಬಾಧ್ಯತೆಗೆಂದು ಕಲ್ಪಿಸಿಟ್ಟಿರುವ ಅಥವಾ ಹಾಗಿಲ್ಲದಿರುವ, ಎಲ್ಲ ಖಾತೆಗಳನ್ನು ಒಂದುಗೂಡಿಸಿ ಅಥವಾ ಗ್ರಾಹಕರ ಯಾವುದೇ ಗ್ರಾಹಕರ ಯಾವುದೇ ಖಾತೆಯಲ್ಲಿರುವ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳುವ, ಮತ್ತು ಗ್ರಾಹಕರಲ್ಲಿರುವ ಎಲ್ಲ ಹಣಗಳನ್ನೂ ಸೇರಿಸಿ ಹಿಂಪಡೆಯುವ, ಒಂದೇ ರೀತಿಯ ಅಥವಾ ಬಗೆಯ/ವಿಧದ, ಮೂಲ ಸಾಮರ್ಥ್ಯದಲ್ಲಿ ಅಥವಾ ಸಂಬಂಧಪಟ್ಟಿರುವ ದಾಖಲಾತಿಗಳಲ್ಲಿ ನೀಡಿರುವ ಅಥವಾ ಪೂರ್ವನಿಯೋಜಿತ ಘಟನೆಯ ಕಾರಣ ಘಟಿಸಿರುವ ಸಂಗತಿಯಿಂದ ಉದ್ಭವಿಸಿರುವ ಬಾಧ್ಯತೆಯನ್ನೂ/ಬಾಧ್ಯತೆಗಳನ್ನೂ ಸೇರಿಸಿ, ಬ್ಯಾಂಕಿಗೆ/ಬ್ಯಾಂಕುಗಳಿಗೆ ಗ್ರಾಹಕರು ಸಲ್ಲಿಸಬೇಕಾದ ಹಣವನ್ನು ಮೇಲೆ ಹೇಳಿರುವ ಯಾವುದೇ ರೀತಿಯಲ್ಲಿ ಹಿಂಪಡೆಯುವಲ್ಲಿ, ನಿರ್ದಿಷ್ಟವಾದ ಮತ್ತು ಪರಿವ್ಯಕ್ತವಾದ ಹಕ್ಕನ್ನು ಹೊಂದಿರುತ್ತಾರೆ; (i i i ) ಬ್ಯಾಂಕಿನ ಅನುಕೂಲತೆಗಳನ್ನು (ಫೆಸಿಲಿಟೀಸ್-ಸವಲತ್ತುಗಳನ್ನು) ಪಡೆಯಲು ಬ್ಯಾಂಕಿಗೆ ಮತ್ತು ಸಂಬಂಧಿಸಿರುವ ಘಟಕಗಳಿಗೆ ಆಧಾರವಾಗಿ ಮತ್ತು ಇತರ ಬಾಧ್ಯತೆಗಳಿಗೆಂದು ಆಧಾರವಾಗಿ (ಸೆಕ್ಯುರಿಟಿ) ನಮೂದಿಸಲಾಗಿರುವ ಠೇವಣಿ, ಆಸ್ತಿ, ಮುಂತಾದವುಗಳ ಮೇಲೆ, ಬ್ಯಾಂಕ್ ಅಥವಾ ಸಂಬಂಧಪಟ್ಟ ಘಟಕಗಳಿಗೆ ಹಿಂದಿರುಗಿಸಬೇಕಾಗಿರುವ ಸಾಲ ಅಥವಾ ಯಾವುದೇ ರೀತಿಯ ಬಾಧ್ಯತೆಗಳನ್ನು ಗ್ರಾಹಕರಿಂದ ಹಿಂಪಡೆಯಲು ಬ್ಯಾಂಕಿಗೆ ಮತ್ತು ಸಂಬಂಧಿತ (ರೆಲವೆಂಟ್) ಘಟಕಗಳಿಗೆ ಪ್ರಥಮ ಹಕ್ಕು ಇರುತ್ತದೆ ಅಥವಾ ಮುಂದೆ ಅಂತಹ ಹಕ್ಕನ್ನು ಬ್ಯಾಂಕ್ ಮತ್ತು ರೆಲವೆಂಟ್ ಘಟಕಗಳು ಪಡೆಯುತ್ತವೆ; ಮತ್ತು ಯಾವುದೇ ಸೆಕ್ಯುರಿಟಿ ಅಥವಾ ಅನುಕೂಲತೆಗಳಿಗೆಂದು ರಚಿಸಲಾದ/ಉದ್ಭವಿಸಿದ ಶುಲ್ಕವನ್ನು ಗ್ರಾಹಕರಿಂದ ಪಡೆಯಲು ಬ್ಯಾಂಕ್ ಮತ್ತು ರೆಲವೆಂಟ್ ಘಟಕಗಳಿಗಿರುವ ಹಕ್ಕು ಮತ್ತು ಅಧಿಕಾರಗಳು ಬ್ಯಾಂಕ್ ಮತ್ತು ರೆಲವೆಂಟ್ ಘಟಕಗಳಿಗೆ ಅಂತಹ ಮತ್ತು ಅದೇ ರೀತಿಯ ಇತರ ಬಾಧ್ಯತೆಗಳನ್ನು ಪಡೆದುಕೊಳ್ಳುವ, ಹಿಂಪಡೆಯುವ ಹಕ್ಕು ಮತ್ತು ಅಧಿಕಾರವು, ಬಾಕಿ ಹಣ, ಸಂಪೂರ್ಣವಾಗಿ ಅಥವಾ ತೃಪ್ತಿಕರವಾಗಿ ಗ್ರಾಹಕರಿಂದ ಹಿಂದಿರುಗಿಸಲ್ಪಟ್ಟಿರುವುದೋ, ರೀಪೇ ಮಾಡಲ್ಪಟ್ಟಿರುವುದೋ, ಮುಂಚಿತವಾಗಿಯೇ ಸಂದಾಯವಾಗಿರುವುದೋ, ವ್ಯಾಲೆಟ್ ಮುಚ್ಚಲ್ಪಟ್ಟಿರುವುದೋ ಇಲ್ಲವೋ ಎಂಬುದನ್ನು ಹೊರತುಪಡಿಸಿ, ಯಾವುದೇ ಸಂದರ್ಭದಲ್ಲು, ಬ್ಯಾಂಕ್ ಮತ್ತು ರೆಲವೆಂಟ್ ಘಟಕಗಳಿಗಿರುತ್ತದೆ.

**5 ಕೊಡುಗೆಗಳು.**

5.1 ಅಪ್ರಸ್ತುತವೆಂದು ಸೂಚಿಸಲ್ಪಟ್ಟಿರುವ ಸಂದರ್ಭವನ್ನು ಹೊರತುಪಡಿಸಿ, ಎಲ್ಲಾ ಕೊಡುಗೆಗಳೂ **ಷೆಡ್ಯೂಲ್ 4** ರಲ್ಲಿ ನಮೂದಿಸಿರುವ ಈ ನಿಯಮ ಮತ್ತು ಷರತ್ತುಗಳ ದಾಖಲೆಗೆ (ಕ್ಯಾಶ್‌ಬ್ಯಾಕ್‌ಗೂ ಅನ್ವಯ), ಪ್ರತಿ ಕೊಳ್ಳುವುಕೆ ಅಥವಾ ಕೊಡುಗೆಗೆ ಅನ್ವಯವಾಗುವ, ವ್ಯಾಪಾರಿಯ ವ್ಯಾಪಾರಸ್ಥಳದಲ್ಲಿ ಅಥವಾ ಎಲೆಕ್ಟ್ರಾನಿಕ್ ಪ್ಲಾಟ್‌ಫಾರಂ/ಪೇಜ್ಯಾಪ್ ಅಪ್ಲಿಕೇಷನ್ (ಅಂತಹ ವ್ಯಕ್ತಿಗತ ಅಥವಾ ನಿರ್ದಿಷ್ಟಪಡಿಸಿರುವ ನಿಯಮ ಮತ್ತು ಷರತ್ತುಗಳನ್ನು "ಆಫರ್-ಸ್ಪೆಸಿಫಿಕ್ ಟರ್ಮ್ಸ್ - ನಿಗದಿತ ಕೊಡುಗೆಗೆ ಸೀಮಿತ ಕೊಡುಗೆ ಎಂಬುದಾಗಿ ಉಲ್ಲೇಖಿಸಲಾಗುತ್ತದೆ/ಕರೆಯಲಾಗುತ್ತದೆ)ಬದ್ಧವಾಗಿರುತ್ತವೆ. ಪ್ರತಿ ಕೊಳ್ಳುವುಕೆ ಅಥವಾ ಪ್ರತಿ ಕೊಡುಗೆಗೆ ಅನ್ವಯವಾಗುವ, ವ್ಯಾಪಾರಿಯ ವ್ಯಾಪಾರಸ್ಥಳದಲ್ಲಿ ಅಥವಾ ಎಲೆಕ್ಟ್ರಾನಿಕ್ ಪ್ಲಾಟ್‌ಫಾರಂ/ಪೇಜ್ಯಾಪ್ ಅಪ್ಲಿಕೇಷನ್ (ಅಂತಹ ವ್ಯಕ್ತಿಗತ ಅಥವಾ ನಿರ್ದಿಷ್ಟಪಡಿಸಿರುವ ನಿಯಮ ಮತ್ತು ಷರತ್ತುಗಳನ್ನು **"ಆಫರ್ ಸ್ಪೆಸಿಫಿಕ್ ಟರ್ಮ್ಸ್"** - ನಿಗದಿತ ಕೊಡುಗೆಗೆ ಸೀಮಿತ ಕೊಡುಗೆ ಎಂಬುದಾಗಿ ಉಲ್ಲೇಖಿಸಲಾಗುತ್ತದೆ/ ಕರೆಯಲಾಗುತ್ತದೆ) ವ್ಯಕ್ತಿಗತ ಅಥವಾ ನಿರ್ದಿಷ್ಟ ನಿಯಮ ಮತ್ತು ಷರತ್ತುಗಳ ಜೊತೆಜೊತೆಗೇ ಸೇರಿ, ಹೆಚ್ಚುವರಿಯಾಗಿ, ಅನ್ವಯವಾಗುತ್ತವೆ.

5.2 ಈ ಮೂಲಕ ಗ್ರಾಹಕರು ಒಪ್ಪಿ ಅಂಗೀಕರಿಸಿರುವುದೇನೆಂದರೆ ಬ್ಯಾಂಕು ಯಾವುದೇ ಕೊಡುಗೆ(ಆಫರ್)ಯು ನಿಗದಿತ ಅವಧಿಗೆ ಮುಗಿಯುವಂತೆ/ಮಾನ್ಯತೆ/ಸಿಂಧುತ್ವ ನಿಗದಿ/ದೊರಕುವ ಅವಧಿಯನ್ನು ಸೀಮಿತಗೊಳಿಸುವ, ಯಾವುದೇ ಪೂರ್ವಸೂಚನೆಯಿಲ್ಲದೇ ಅಥವಾ ಗ್ರಾಹಕರ ಒಪ್ಪಿಗೆ ಇಲ್ಲದೇ, (ಮೂಲತಃ ಅಂತಹ ಯಾವುದೇ ಅವಧಿಯನ್ನು ನಿಗದಿಗೊಳಿಸಿಲ್ಲದಿದ್ದರು ಅಥವಾ ನಿಗದಿತ ಅವಧಿ ಪೂರ್ಣಗೊಳ್ಳುವ ಮುನ್ನವೇ ಯಾವುದೇ ಕೊಡುಗೆಯನ್ನು ಹಿಂಪಡೆಯುವ) ಹಕ್ಕನ್ನುಹೊಂದಿರುತ್ತದೆ.

5.3 ಈ ಮೂಲಕ ಗ್ರಾಹಕರು ಒಪ್ಪಿ ಅಂಗೀಕರಿಸಿರುವುದೇನೆಂದರೆ ಪೇಜ್ಯಾಪ್ ಆಪ್ ಮೂಲಕ ನಡುಸುತ್ತಿರುವ/ನಡೆಸುವ/ಮುಂದೆ ನಡೆಸಲಾಗುವ/ ನಡೆಸಬಹುದಾ ದಂತಹ, ಯಾವುದೇ ವ್ಯವಹಾರಕ್ಕೆ ಸಂಬಂಧಿಸಿದಂತೆ ಪ್ರಸ್ತುತ ಜಾರಿಯಲ್ಲಿರುವ/ ಭವಿಷ್ಯದಲ್ಲಿ ಜಾರಿಯಾಗಬಹುದಾದಂತಹ ತೆರಿಗೆ, ಶುಲ್ಕ, ಸುಂಕಗಳು, ಸರ್‌ಚಾರ್ಜ್‌ಗಳು, ಸೆಸ್. ಅಥವಾ ಇದೇ ತರಹದ ಬಾಧ್ಯತೆಗಳನ್ನು ನಿರ್ವಹಿಸುವಲ್ಲಿ ತಾವೇ ಪೂರ್ಣ ಜವಾಬ್ದಾರರೆಂದೂ ಮತ್ತು ಅಂತಹ ಎಲ್ಲ ರೀತಿಯ ಬಾಧ್ಯತೆಗಳನ್ನು ನಿರ್ವಹಿಸುವಲ್ಲಿ ಭರಿಸಬೇಕಾದಂತಹ ಖರ್ಚು-ವೆಚ್ಚಗಳನ್ನು ನಿಭಾಯಿಸುವ ಜವಾಬ್ದಾರಿ ಸಂಪೂರ್ಣವಾಗಿ ತಮ್ಮದೇ ಮತ್ತು ಈ ದಿಸೆಯಲ್ಲಿ ಬ್ಯಾಂಕು ಯಾವುದೇ ಜವಾಬ್ದಾರಿಯನ್ನು ಹೊತ್ತುಕೊಂಡಿಲ್ಲ.

5.4 ಯಾವುದೇ ಗ್ರಹಕರಿಗೆ ನೀಡಿರುವ ಯಾವುದೇ ಕೊಡುಗೆಯನ್ನು ಯಾವುದೇ ಗ್ರಾಹಕರು ನಡೆಸಿದ/ನಡೆಸುತ್ತಿರುವ ವ್ಯವಹಾರಗಳಲ್ಲಿ ಅಪವ್ಯಯಗೊಳಿಸುತ್ತಿರುವರು, ಅಥವಾ ದುರುಪಯೋಗ ಮಾಡುತ್ತಿರುವರು, ಅನಧಿಕೃತ ರೀತಿಯಲ್ಲಿ ಬಳಸಿರುವರು ವಂಚಿಸುವ ರೀತಿಯಲ್ಲಿ ಯಾವುದೇ ನಿಷೇಧಿತ ಸ್ಥಳದಲ್ಲಿ ಬಳಸುತ್ತಿರುವುದಾಗೆ ಅಥವಾ ಈ ನಿಯಮ ಮತ್ತು ಷರತ್ತುಗಳ ದಾಖಲೆಯಲ್ಲಿರುವ ಅಂಶಗಳನ್ನುಉಲ್ಲಂಘಿಸಿರುವರೆಂದು ಬ್ಯಾಂಕ್ ತೀರ್ಮಾನಿಸಿದಲ್ಲಿ, ಬ್ಯಾಂಕು ತನ್ನ ಸ್ವಂತ, ಅನಿರ್ಬಂಧಿತ, ಮತ್ತು ನಿರ್ವಿವಾದ ವಿವೇಚನೆ/ನಿರ್ಧಾರದಂತೆ, ಯಾವುದೇ ಕೊಡುಗೆಯನ್ನು ರದ್ದು ಮಾಡಬಹುದು ಅಥವಾ ಹಿಮ್ಮುಖಗೊಳಿಸುತ್ತದೆ.

5.5 ಯಾವುದೇ ಕೊಡುಗೆಗಳನ್ನು ಯಾವುದೇ ಗ್ರಾಹಕರಿಗೆ ಕೊಡುವುದು ಅಥವಾ ಕೊಡದಿರುವುದು ಬ್ಯಾಂಕಿನ ತೀರ್ಮಾನಕ್ಕೇ ಸೇರಿರುವುದು. ಈ ಮುಂಚೆ ಬ್ಯಾಂಕು ಯಾವುದೇ ಗ್ರಾಹಕರಿಗೆ ಲಭ್ಯವೆಂದು ತಿಳಿಸಿರುವ, ತೋರಿಸಿರುವ ಕೊಡುಗೆ ಅಥವಾ ಮುಂದೆ ಕೊಡಬಹುದಾದ/ಕೊಡಲು ಅವಕಾಶವಿರುವಂತಹ ಕೊಡುಗೆಯನ್ನು/ಕೊಡುಗೆಗಳನ್ನು ನೀಡುವುದು ಬ್ಯಾಂಕಿನ ಸ್ವಾಧೀನ. ಈ ಮೂಲಕ ಗ್ರಾಹಕರು ಮತ್ತೂ ಒಪ್ಪಿ, ಅಂಗೀಕರಿಸಿರುವುದೇನೆಂದರೆ, ಬ್ಯಾಂಕ್/ಪೇಜ್ಯಾಪ್, ಯಾವುದೇ ಗ್ರಾಹಕರ ಖಾತೆಯಿಂದ/ಖಾತೆಯಲ್ಲಿ, ಅನುಮಾನಾಸ್ಪದ ಅಥವಾ ವಂಚನೆಯ ಸಂದೇಹಕ್ಕೆ ಎಡೆಮಾಡಿಕೊಡುವ ವ್ಯವಹಾರಗಳು/ಸಂಚುಗಳು, ಬ್ಯಾಂಕಿಗೆ ಕಂಡುಬಂದಲ್ಲಿ/ಮಾಹಿತಿ ದೊರೆತಲ್ಲಿ (ವಿಮೋಚನೆಯ ಪೂರ್ವದಲ್ಲಿ ಅಥವಾ ನಂತರ) ಯಾವುದೇ ಕೊಡುಗೆಯನ್ನು ಕಾಲಾನುಕ್ರಮದಲ್ಲಿ, ಗ್ರಾಹಕರಿಕೆ ಯಾವುದೇ ಕಾರಣವನ್ನು ನೀಡದೆ/ಸೂಚನೆ ನೀಡದೆ, ಅಥವಾ ತಿಳಿಸದೆ ಅಥವಾ ಗ್ರಾಹಕರ ಅನುಮತಿ ಪಡೆಯದೆ ರದ್ದುಗೊಳಿಸುವ, ಹಿಂಪಡೆಯುವ, ಅಂತ್ಯಗೊಳಿಸುವ, ಕ್ಲಾಬ್ಯಾಕ್ ಮಾಡುವ ಹಕ್ಕು ಮತ್ತು ಅಧಿಕಾರವನ್ನು ಹೊಂದಿರುತ್ತದೆ. ಅಂತಹ ಸನ್ನಿವೇಶಗಳಲ್ಲಿ ಬಾಕಿ ಇರುವ ಯಾವುದೇ ಮಹೋನ್ನತ ಅರ್ಹತೆ, ಯಾವುದೇ ಕೊಡುಗೆಯನ್ನೊಳಗೊಂಡಂತೆ, ಎಲ್ಲ ವ್ಯವಹಾರಗಳನ್ನೂ ರದ್ದುಗೊಳಿಸುವ ಹಕ್ಕನ್ನು ಬ್ಯಾಂಕ್ ಕಾಯ್ದಿರಿಸಿಕೊಂಡಿರುತ್ತದೆ ಮತ್ತು ಅಂತಹ ಸಂದರ್ಭದಲ್ಲಿ ಈ ವಿಷಯಕ್ಕೆ ಸಂಬಂಧಿಸಿದಂತೆ, ಗ್ರಾಹಕರಿಗೆ ಯಾವುದೇ ರೀತಿಯ ಹಕ್ಕು ಅಥವಾ ಅಧಿಕಾರಗಳಿರುವುದಿಲ್ಲ.

5.6 ವ್ಯಾಪಾರಿಗಳು ಗ್ರಾಹಕರಿಕೆ ನಿಷ್ಠೆ ಕಾರ್ಯಕ್ರಮ, ಬಹುಮಾನ ನೀಡುವಿಕೆ, ರಿಯಾಯಿತಿ, ವಿಶೇಷ ಮಾರಾಟ ಕೊಡುಗೆ **(ಮರ್ಚೆಂಟ್ ಆಫರ್ಸ್ – ವ್ಯಾಪಾರೀ ಕೊಡುಗೆ/ಗಳು)** ನೀಡುವಿಕೆಗಳೇ ಮೊದಲಾದ ಕಾರ್ಯಕ್ರಮಗಳನ್ನು ಆಯ್ಕೆ ಮಾಡಿಕೊಳ್ಳಲು ಅವಕಾಶವಿರುತ್ತದೆ. ಅಂತಹ ಎಲ್ಲ ಮರ್ಚೆಂಟ್ ಆಫರ್‌ಗಳನ್ನು ವ್ಯಾಪಾರಿಗಳು ಗ್ರಾಹಕರಿಗೆ ನೇರವಾಗಿ ನೀಡಬಹುದು. ಬ್ಯಾಂಕ್ ಅಥವಾ ನೀಡುವವರು ಅಲ್ಲ. ಅಂತಹ ಮರ್ಚೆಂಟ್ ಕೊಡುಗೆಗಳಿಗೆ ಸಂಬಂಧಿಸಿದಂತೆ ಉದ್ಭವಿಸುವ ಯಾವುದೇ ತೆರನಾದ ಪ್ರಶ್ನೆಗಳು, ಸಂಶಯಗಳು, ವಿವರಣೆಗಳನ್ನು ನೇರವಾಗಿ ವ್ಯಾಪಾರಿಗಳಿಂದಲೇ ಪಡೆಯತಕ್ಕದ್ದು/ಪರಿಹರಿಸಿಕೊಳ್ಳತಕ್ಕದ್ದು. ಅಂತಹ ಮರ್ಚೆಂಟ್ ಕೊಡುಗೆಗಳಿಗೆ ಬ್ಯಾಂಕ್ ಯಾವುದೇ ರೀತಿಯ ಜವಾಬ್ದಾರಿಯನ್ನು ಹೊಂದಿರುವುದಿಲ್ಲ,

ಯಾವುದೇ ಉಲ್ಲೇಖ/ಮಾಹಿತಿಗಳಿರುವುದಿಲ್ಲ, ಮತ್ತು ವ್ಯಾಪಾರಿಗಳ ಮೇಲೆ ಅಥವಾ ವ್ಯಾಪಾರೀ ಕೊಡುಗೆಗಳ ಮೇಲೆ, ಯಾವುದೇ ರೀತಿಯ ನಿಯಂತ್ರಣ ಹೊಂದಿರುವುದಿಲ್ಲ. ಅಂತಹ ಎಲ್ಲ ಕೊಡುಗೆಗಳಿಗೆ ಯಾವುದೇ ನಗದು ಮೌಲ್ಯ ಇರುವುದಿಲ್ಲ ಮತ್ತು ವ್ಯಾಪಾರಿಗಳು ಯಾವುದೇ ಸಮಯದಲ್ಲಿ ತಮ್ಮ ಆಫರ್‌ಗಳನ್ನು ಸ್ಥಗಿತಗೊಳಿಸಬಹುದು ಅಥವಾ ಹಿಂಪಡೆಯಬಹುದು.

**6 ಇಂಟರ್‌ಆಪೆರಬಿಲಿಟಿ (ಪರಸ್ಪರ ಕಾರ್ಯಸಾಧ್ಯತೆ)**

6.1 ಅನ್ವಯವಾಗುವ ನಿಯಮ ಮತ್ತು ಕಾನೂನುಗಳಿಗನುಸಾರವಾಗಿ/ಅವುಗಳನ್ನು ಗಮನದಲ್ಲಿಟ್ಟುಕೊಂಡು/ಕಾಲಾನುಕಾಲಕ್ಕೆ ಅನ್ವಯವಾಗುವ ಆರ್‌ಬಿಐ ಪಿಪಿಐ ನಿರ್ದೇಶನಗಳಿಗೆ ಒಳಪಟ್ಟಂತೆ, ಬ್ಯಾಂಕ್ ಇಂಟರ್‌ಆಪರಬಿಲಿಟಿ (ಪರಸ್ಪರ ಕಾರ್ಯಸಾಧ್ಯತೆ) ವೈಶಿಷ್ಟ್ಯತೆಗಳನ್ನು ಸಕ್ರಿಯಗೊಳಿಸಬಹುದು, ಮತ್ತು ಅದು ಬ್ಯಾಂಕಿನವರು ಕಾಲಾನುಕಾಲಕ್ಕೆ ಸೂಚಿಸುವ ನಿಯಮ ಮತ್ತು ಷರತ್ತುಗಳಿಗೆ ಅನ್ವಯವಾಗಿರುತ್ತವೆ/ಬದ್ಧವಾಗಿರುತ್ತವೆ. ಅವುಗಳಿಗೆಲ್ಲ ಗ್ರಾಹಕರು  ಬದ್ಧರಾಗಿರತಕ್ಕದ್ದು.

**7 ಖರೀದಿಯನ್ನು ಅಧಿಕೃತಗೊಳಿಸುವುದು/ಖರೀದಿಸಲು ಅಧಿಕಾರ ನೀಡುವುದು**

7.1 ಭಾಗವಹಿಸುತ್ತಿರುವ ವ್ಯಾಪಾರಿಗಳ ಸಮಕ್ಷಮ ಪೇಜ್ಯಾಪ್ ಆಯ್ಕೆಯನ್ನು ಆಯ್ದುಕೊಳ್ಳುವುದರಿಂದ ಅಥವಾ ಪೇಜ್ಯಾಪ್ ವ್ಯಾಪ್ತಿಯಲ್ಲಿರುವ ವ್ಯಾಪಾರಿಯನ್ನು ಆಯ್ಕೆ ಮಾಡಿದರಿಂದ, ತಮ್ಮ ಖರೀದಿಯನ್ನು ಪೂರ್ಣಗೊಳಿಸಬೇಕಾದಂತೆ,  ಗ್ರಾಹಕರು ತಾವು ಹೊಂದಿರುವ ಕಾರ್ಡ್‌ಗಳ ಮೇಲೆ ಅಥವಾ ಗ್ರಾಹಕರ ಪೇಜ್ಯಾಪ್ ಪಿಪಿಐ, ಯುಪಿಐ, ಶುಲ್ಕ ವಿಧಿಸುವ ಅಧಿಕಾರವನ್ನು ಬ್ಯಾಂಕಿಗೆ ನೀಡಿರುತ್ತಾರೆ. ಯಾವ ವ್ಯವಹಾರಗಳಲ್ಲಿ ಗ್ರಾಹಕರು ತಮ್ಮ ಗ್ರಾಹಕ ಕಾರ್ಡ್ ಅಥವಾ ಪೇಜ್ಯಾಪ್ ಪಿಪಿಐಗೆ ಕ್ರೆಡಿಟ್ ಪಡೆಯುವ ಅವಕಾಶವಿರುತ್ತದೆಯೋ, ಅಂತಹ ಸಂದರ್ಭದಲ್ಲಿ, ಬ್ಯಾಂಕು ಸಂಬಂಧಪಟ್ಟ ಉಪಕರಣ(ಇನ್‌ಸ್ಟ್ರುಮೆಂಟ್)ಕ್ಕೆ ಕ್ರೆಡಿಟ್ ಮಾಡಲು ಗ್ರಾಹಕರು ಬ್ಯಾಂಕಿಗೆ ಅಧಿಕಾರ ನೀಡಿರುತ್ತಾರೆ.

**8 ಪೇಜ್ಯಾಪ್ ಖರೀದಿಸುವ ಬಗ್ಗೆ ಮಾಹಿತಿ**

8.1 ಪೇಜ್ಯಾಪ್ ನೊಂದಣಿ, ಅದನ್ನು ಉಪಯೋಗಿಸುವುದು, ಮತ್ತು ಅದರ ಮೂಲಕ ಹಣ ಪಾವತಿಸುವುದು, ಅಥವಾ ಪೇಜ್ಯಾಪ್ ಅಪ್ಲಿಕೇಷನ್‌ನೊಂದಿಗೆ ಲಿಂಕ್ ಆಗಿರುವ ಕಾರ್ಡ್ ಮೂಲಕ ಹಣ ಪಾವತಿಸುವುದರಿಂದ, ಬ್ಯಾಂಕು ವ್ಯಾಪಾರಿಗಳೊಂದಿಗೆ, ಪ್ರತಿನಿಧಿಗಳೊಂದಿಗೆ, ಸಬ್-ಕಂಟ್ರ್ಯಾಕ್ಟರ್‌ಗಳೊಂದಿಗೆ ಮತ್ತು ಬ್ಯಾಂಕಿನ ಪ್ರತಿನಿಧಿಗಳೊಂದಿಗೆ, ಗ್ರಾಹಕರ ಮತ್ತು ಅವರ ಖರೀದಿಗಳ ಬಗ್ಗೆ ಮಾಹಿತಿಯನ್ನು ಹಂಚಿಕೊಳ್ಳಲು ಪ್ರತಿಯೊಬ್ಬ ಗ್ರಾಹಕರೂ ಬ್ಯಾಂಕಿಗೆ ಅಧಿಕಾರವನ್ನು ನೀಡಿರುವುದಾಗೆ ವ್ಯಕ್ತಪಡಿಸಿದಂತೆ.

**9 ಪೇಜ್ಯಾಪ್ ಸೇವೆಗಳನ್ನು ಉಪಯೋಗಿಸಲು ಶುಲ್ಕ**

9.1 ಪೇಜ್ಯಾಪ್ ಪಿಪಿಐನಿಂದ ಗ್ರಾಹಕರ ಬ್ಯಾಂಕ್ ಖಾತೆಗೆ ಹಣ ವರ್ಗಾಯಿಸುವುದೂ ಸೇರಿದಂತೆ, ಕೆಲವೆ ವಿಶಿಷ್ಟ ಸೇವೆಗಳನ್ನು ನೀಡುವುದಕ್ಕೆ ನಿಗದಿತ/ ಅನ್ವಯವಾಗುವ ಶುಲ್ಕ/ಛಾರ್ಜ್‌ಗಳನ್ನು ಗಾಹಕರು ಬ್ಯಾಂಕಿಗೆ ಪಾವತಿಸಬೇಕಾಗುತ್ತದೆ. ಗ್ರಾಹಕರು ಇಚ್ಛಿಸುವ ಕೆಲವು ನಿರ್ದಿಷ್ಟ ಪೇಜ್ಯಾಪ್ ಸೇವೆಗಳಿಗೆ ಅನ್ವಯವಾಗುವ ವೆಚ್ಚ ಮತ್ತು ಶುಲ್ಕಗಳ ವಿವರಗಳನ್ನು https://v.hdfcbank.com/htdocs/common/PayZapp/index.html ನಲ್ಲಿ ನೀಡಲಾಗಿದ್ದು ಸದ್ಯಕ್ಕೆ ಜಾರಿಯಲ್ಲಿರುವುವಾದರೂ ಬ್ಯಾಂಕಿನ ಸ್ವೇಚ್ಛೆಗನುಗುಣವಾಗಿ, ಕಾಲಕ್ರಮದಲ್ಲಿ, ಅವುಗಳಲ್ಲಿ ಬದಲಾವಣೆ-ಗಳಾಗಬಹುದು ಮತ್ತು ಬ್ಯಾಂಕು ಆ ಬದಲಾವಣೆಗಳನ್ನು ಗ್ರಾಹಕರಿಗೆ (ಪೇಜ್ಯಾಪ್ ಮೂಲಕ ಅಥವಾ ಇತರ ಮಾಧ್ಯಮಗಳ ಮೂಲಕ), ಗ್ರಾಹಕರು ಅಂತಹ ವ್ಯವಹಾರಗಳನ್ನು ನಡೆಸುವ ಮುನ್ನವೇ, ತಿಳಿಸಲಾಗುವುದು. ಇಲ್ಲಿ ತಿಳಿಸಿರುವ ತೆರಿಗೆ ಮತ್ತು ಶುಲ್ಕಗಳು, ಮತ್ತು ಅವುಗಳಲ್ಲಾಗಬಹುದಾದ ಬದಲಾವಣೆಗಳನ್ನು ತಾವೇ ಗಮನಿಸಿ ತಿಳಿದುಕೊಂಡಿರುವುದು ಗ್ರಾಹಕರ ಕರ್ತವ್ಯವಾಗಿರುತ್ತದೆ.

9.2 ಗ್ರಾಹಕರು ಈ ಮೂಲಕ ಒಪ್ಪಿ, ಅಂಗೀಕರಿಸಿರುವುದೇನೆಂದರೆ, ಪೇಜ್ಯಾಪ್ ಅಪ್ಲಿಕೇಷನ್ನಿನಲ್ಲಿರುವ ಕೆಲವು ಸೇವೆಗಳು, ಪೇಜ್ಯಾಪ್ ಪಿಪಿಐನಿಂದ ಗ್ರಾಹಕರ ಬ್ಯಾಂಕ್ ಖಾತೆಗೆ ಹಣ ವರ್ಗಾಯಿಸುವುದನ್ನೂ ಒಳಗೊಂಡಂತೆ, ತೆರಿಗೆ ಮತ್ತು ಶುಲ್ಕಗಳಿಗೆ ಅನ್ವಯವಾಗುವುವು ಮತ್ತು ಸಂಬಂಧ ಪಟ್ಟ ಸೇವೆಗಳಿಗೆ ತೆರಿಗೆ ಮತ್ತು ಶುಲ್ಕಗಳಿಗೆ ವಿಭಿನ್ನವಾಗಿರುವುವು ಹಾಗೂ ತಾವು ಇಚ್ಛಿಸಿದ ನಿರ್ದಿಷ್ಟ ಸೇವೆಗಳಿಗೆ ನಮೂದಿಸಲಾಗಿರುವ/ತತ್ಕಾಲಕ್ಕೆ ಅನ್ವಯವಾಗುವ ತೆರಿಗೆ ಮತ್ತು ಶುಲ್ಕಗಳನ್ನು ಭರಿಸುವುದು ಒಂದು ಷರತ್ತು.

9.3 ಮೇಲೆ ತಿಳಿಸಿರುವಂತಹ ಎಲ್ಲ ತೆರಿಗೆ ಮತ್ತು ಶುಲ್ಕ ಮುಂತಾದುವು ಆಯಾ ಸೇವೆಗಳಿಗೆ ಅನ್ವಯವಾಗುವ ತೆರಿಗೆಗಳ ಹೊರತಾಗಿರುತ್ತವೆ ಅಥವಾ ಅದಕ್ಕೆ ಸಂಬಂಧ ಪಟ್ಟಿರುವಂತೆ ಅಥವಾ ಪ್ರಸ್ತುತ ನಡೆಸಲಾಗುತ್ತಿರುವ ವ್ಯವಹಾರಕ್ಕೆ ಸಂಬಂಧಿಸಿದಂತೆ, ಪ್ರಚಲಿತ ತೆರಿಗೆಗಳ ಹೊರತಾಗಿರುತ್ತವೆ, ಮತ್ತು ಎಲ್ಲ ವಿಧದ ಹಾಗೂ ಈ ಸಂಬಂಧದಲ್ಲಿ ಉಲ್ಲೇಖಿಸಲಾಗಿರುವ ತೆರಿಗೆಗಳನ್ನು ಗ್ರಾಹಕರೇ ಭರಿಸುವುದು ಮತ್ತು ವೆಚ್ಚ ಮಾಡುವುದು ಗ್ರಾಹಕರ ಅನಿವಾರ ಬಾಧ್ಯತೆ ಮತ್ತು ಜವಾಬ್ದಾರಿಯಾಗಿರುತ್ತದೆ. ಅಂತಹ ತೆರಿಗೆ, ಶುಲ್ಕಗಳೆಲ್ಲವೂ ಗ್ರಾಹಕರ ಖಾತೆಗೇ ಸೇರುತ್ತವೆ.

9.4 ಗ್ರಾಹಕರು ಈ ಮೂಲಕ ಬದಲಾಯಿಸಲಾಗದಂತೆ ಮತ್ತು ಬೇಷರತ್ತಾಗಿ ಬ್ಯಾಂಕಿಗೆ ಅಧಿಕಾರ ನೀಡುತ್ತಿರುವುದೇನೆಂದರೆ ಬ್ಯಾಂಕು ಗ್ರಾಹಕರ ಪೇಜ್ಯಾಪ್ ಪಿಪಿಐ ಅಥವಾ ಇತರ ಯಾವುದೇ ಖಾತೆಯಿಂದ ಮೇಲೆ ತಿಳಿಸಿರುವ ಎಲ್ಲ ವಿಧದ ತೆರಿಗೆ, ಶುಲ್ಕ, ಜುಲ್ಮಾನೆಗಳೇ ಮೊದಲಾದವುಗಳ ಮೊತ್ತವನ್ನು ಕಳೆಯುವ ಮತ್ತು ಡೆಬಿಟ್ ಮಾಡಬಹುದಾಗಿದೆ ಅಥವಾ ಬ್ಯಾಂಕಿನೊಂದಿಗೆ ಗ್ರಾಹಕರು ಹೊಂದಿರುವ ಖಾತೆಗೆ ಜಮಾ ಮಾಡಬಹುದಾಗಿದೆ.

9.5 ಯಾವುದೇ ಪಿಪಿಐಗಳ ಮೂಲಕ ಅಥವಾ ಇಲ್ಲಿ ನಮೂದಿಸಿರುವ ಪಿಪಿಐಗಳಿಗೆ ಅಥವಾ ಅವುಗಳ ಅನುಸಾರ ನಡೆಸುವ ವ್ಯಗಹಾರಕ್ಕೆ/ಗಳಿಗೆ, ಪ್ರಸ್ತುತ ಜಾರಿಯಲ್ಲಿರುವ ಮತ್ತು ಭವಿಷ್ಯದಲ್ಲಿ ಜಾರಿಯಾಗುವ ಎಲ್ಲ ತೆರಿಗಳು (ಯಾವುದೇ ಹಣ ಕೊಡುವ ಅಥವಾ ವರ್ಗಾಯಿಸುವುದನ್ನೂ ಒಳಗೊಂಡಂತೆ) ಬ್ಯಾಂಕಿಗೆ ಕೊಡಬೇಕಾದ ಶುಲ್ಕಗಳು, ಕಮಿಷ ಅಥವಾ ಛಾರ್ಜ್‌ಗಳು ಸೇರಿದಂತೆ, ಮತ್ತು ಕಾನೂನಾತ್ಮಕವಾಗಿ ಗ್ರಾಹಕರು ಅಥವಾ ಬ್ಯಾಂಕ್ ಅಥವಾ ಬೇರೊಬ್ಬರು ಸಂದಾಯಿಸಬೇಕಾದ/ತೆರಬೇಕಾದ (ಛಾರ್ಜಬಲ್), ಪ್ರಸ್ತುತ ಅನ್ವಯವಾಗುವುದು ಅಥವಾ ಭವಿಷದಲ್ಲಿ ಅನ್ವಯಾಗುವುದಿದ್ದರೂ, ಕೇವಲ ಗ್ರಾಹಕರು ಮಾತ್ರ ಸಂಪೂರ್ಣವಾಗಿ, ಬ್ಯಾಂಕಿಗೆ ಪಾವತಿಸಬೇಕಾದ/ಹಿಂತಿರುಗಿಸಬೇಕಾದ ಹಣಕ್ಕೆ ಹೆಚ್ಚುವರಿಯಾಗಿ, ಹಿಂದಿರುಗಿಸಬೇಕಾದ ಹಣದ ಮೇಲಿನ ತೆರಿಗೆಗಳೊಂದಿಗೆ, ಅವುಗಳು ಇದ್ದಲ್ಲಿ, ಭರಿಸಬೇಕು/ಸಂದಾಯಿಸಬೇಕು ಮತ್ತು ಅದರಂತೆ, ಬ್ಯಾಂಕಿಗೆ ಪಾವತಿಸಬೇಕಾಗಿರುವ/ಹಿಂದಿರುಗಿಸಬೇಕಾಗಿರುವ ಹಣದ ಮೊತ್ತವು ಯಾವುದೇ ತೆರಿಗೆಗಳ ಹೊರತಾಗಿರತಕ್ಕದ್ದು. ಮೇಲೆ ಹೇಳಿರುವ ಯಾವುದೇ ಸಾಮಾನ್ಯತೆಯ ಬಗ್ಗೆ ಪೂರ್ವಾಗ್ರಹವಿಲ್ಲದೆ, ಸಂಪೂರ್ಣ ಮುದ್ರಾಂಕ ಶುಲ್ಕ, ಈ ನಿಯಮ ಮತ್ತು ಷರತ್ತುಗಳಿಗೆ ಮತ್ತು ಇತರ ಯಾವುದೇ ಸಂಬಂಧಿತ ದಾಖಲೆಗಳಿಗೆ ಅನ್ವಯವಾಗುವಂತಿದ್ದರೆ, ಅವೆಲ್ಲವುಗಳನ್ನೂ ಗ್ರಾಹಕರೇ ಭರಿಸಬೇಕು ಮತ್ತು ತೆರಬೇಕು.

**10. ಅನಧಿಕೃತವಾಗಿ ಅಥವಾ ಕಾನೂನು ಬಾಹಿರವಾಗಿ ಬಳಸುವುದು ಮತ್ತು ಸಂಬಂಧಿಸಿದ ಅಧಿಕಾರಗಳನ್ನು ನೀಡುವುದು**

10.1 ಪೇಜ್ಯಾಪ್ ಸೇವೆಗಳನ್ನು ಜಾರಿಯಲ್ಲಿರುವ ಮತ್ತು ಅನ್ವಯವಾಗುವ ಕಾನೂನುಗಳಿಗೆ ಬದ್ಧವಾಗಿ, ಯಾವುದೇ ನಿಯಮಗಳಿಗೆ, ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ, ಸೇವೆ ನೀಡುತ್ತಿರುವ ಬ್ಯಾಂಕ್ ಮತ್ತು ಕಾರ್ಡ್ ಸಂಘಗಳು ಜಾರಿಗೊಳಿಸಿದ ಆರ್ಥಿಕ ನಿಯಮಗಳಿಗೆ ಇತಿಮಿತಿಗಳನ್ನು ಅನ್ವಯಿಸದೆ, ಗ್ರಾಹಕರುಸೇವೆಗಳನ್ನು ಬಳಸಿಕೊಳ್ಳುವ ಜವಾಬ್ದಾರಿಯನ್ನು ಹೊಂದಿರುವರು.

**ವರ್ಗ - ಆಂತರಿಕ**

10.2 ಗ್ರಾಹಕರು ಒಪ್ಪಿರುತ್ತಾರೆ ಮತ್ತು ಅಂಗೀಕರಿಸಿರುವುದೇನೆಂದರೆ, ಬ್ಯಾಂಕು, ಯಾವುದೇ ಸಮಯದಲ್ಲಿ, ಗ್ರಾಹಕರಿಗೆ ಪೂರ್ವ ಮಾಹಿತಿ ಅಥವಾ ಕಾರಣಗಳನ್ನು ನೀಡದೆ, ಅಕಸ್ಮಾತ್ತಾಗಿ ಗ್ರಾಹಕರು ಪೇಜ್ಯಾಪ್‌ನ ಯಾವುದಾದರೂ ಸೌಲಭ್ಯವನ್ನು/ಗಳನ್ನು ಬಳಸುತ್ತಿರುವುದು ಅನ್ವಯವಾಗುವ ಕಾನೂನಿಗೆ ವಿರುದ್ಧವಾಗಿರುವುದು ಎಂದು ತೀರ್ಮಾನಿಸಿದರೆ ಅಥವಾ ಗ್ರಾಹಕರನ್ನು/ಗ್ರಾಹಕರ ಗೌಪ್ಯತೆಯನ್ನು, ಬ್ಯಾಂಕನ್ನು, ನೀಡುತ್ತಿರುವವರನ್ನು, ವ್ಯಾಪಾರಿಗಳನ್ನು, ಬಹಿರಂಗಗೊಳಿಸಬಹುದು ಅಥವಾ ಪೇಜ್ಯಾಪ್‌ನ ಇತರ ಬಳಕೆದಾರರಿಗೆ ಹಾನಿ ಉಂಟುಮಾಡಬಹುದೆಂದು ಬ್ಯಾಂಕಿಗೆ ಮನವರಿಕೆಯಾದರೆ, ಗ್ರಾಹಕರ ಯಾವುದೇ ವ್ಯವಹಾರವನ್ನು ಕಾರ್ಯಗತಗೊಳಿಸದಿರಲು ನಿರ್ಧರಿಸಬಹುದು, ಮತ್ತು ಪೇಜ್ಯಾಪ್ ಆಪ್‌ಅನ್ನು ಮತ್ತು ಪೇಜ್ಯಾಪ್ ಸೇವೆಗಳನ್ನು ಬ್ಲಾಕ್ ಮಾಡಬಹುದು ಅಥವಾ ಅಮಾನತುಗೊಳಿಸಬಹುದು. ಹಾನಿ ಎಂಬುದು ಆರ್ಥಿಕ ನಷ್ಟ, ಯಾವುದೇ ವ್ಯಕ್ತಿಯ ವೈಯುಕ್ತಿಕ ವಿಷಯಗಳ ಗೌಪ್ಯತೆಯೊಂದಿಗೆ ರಾಜಿ ಮಾಡುಕೊಳ್ಳುವುದು, ಎಂಬುದನ್ನು ಒಳಗೊಂಡಿರುತ್ತದೆ ಆದರೆ ಅವುಗಳಿಗೆ ಮಾತ್ರ ಸೀಮಿತವಾಗಿರುವುದಿಲ್ಲ. ಈ ರೀತಿ ವ್ಯವಹಾರಗಳ/ಪೇಜ್ಯಾಪ್ ಅಪ್ಲಿಕೇಷನ್ ಮತ್ತು/ಅಥವಾ ಪೇಜ್ಯಾಪ್ ಆಪ್/ಸೇವೆಗಳು ಅಮಾನತುಗೊಳಿಸಲ್ಪಟ್ಟಾಗ ಅಥವಾ ರದ್ದುಗೊಳಿಸಲ್ಪಟ್ಟಾಗ ಗ್ರಾಹಕರಿಗೆ ತಗಲುವ ಅಥವಾ ಗ್ರಾಹಕರು ಭರಿಸಬೇಕಾಗುವ ಯಾವುದೇ ನಷ್ಟ, ವೆಚ್ಚಗಳು, ಖರ್ಚುಗಳು ಮುಂತಾದವುಗಳಿಗೆ ಬ್ಯಾಂಕು ಯಾವುದೇ ರೀತಿಯಲ್ಲಿ ಬಾಧ್ಯವಾಗುವುದಿಲ್ಲ.

10.3 ಪೇಜ್ಯಾಪ್ ಸೇವೆಗಳು ಪ್ರಪ್ರಥಮವಾಗಿ, ಈ ನಿಯಮ ಮತ್ತು ಷರತ್ತುಗಳ ದಾಖಲೆಯ ಅಡಿಯಲ್ಲಿ, ಗ್ರಾಹಕರ ಉಪಯೋಗಕ್ಕಾಗಿ ನೀಡಲ್ಪಟ್ಟಿರುತ್ತವೆ ಮತ್ತು ಗ್ರಾಹಕರ ನೊಂದಣಿಯು ಈಮೇಲ್, ಮೊಬೈಲ್ ಫೋನ್ ಸಂಖ್ಯೆ ಮತ್ತು ಮ್ಯಾಪಿಂಗ್ ಸಾಧನಗಳೊಂದಿಗೆ ರಚಿಸಲ್ಪಟ್ಟಿರುತ್ತದೆ ಎಂದು ಗ್ರಾಹಕರು ಒಪ್ಪಿರುತ್ತಾರೆ. ಗ್ರಾಹಕರು ಯಾವುದೇ ಸಂದರ್ಭದಲ್ಲಾದರೂ ತಮ್ಮ ಗ್ರಾಹಕರ ಪೇಜ್ಯಾಪ್ ಪ್ರವೇಶಕ್ಕೆ ಸಂಬಂಧಿಸಿದ ಮಾರ್ಗೋಪಾಯಗಳನ್ನು ಬೇರೆಯವರೊಂದಿಗೆ ಹಂಚಿಕೊಳ್ಳುವುದಿಲ್ಲ ಅಥವಾ ಪೇಜ್ಯಾಪ್ ಸೇವೆಗಳನ್ನು ಬಳಸಲು ನೀಡಲ್ಪಟ್ಟಿರುವ ಗ್ರಾಹಕರ ಗುರುತುಗಳನ್ನು/ರಹದಾರಿಗಳನ್ನು ಬೇರೊಬ್ಬರು ಬಳಸಲು ಅನುಮತಿಸುವುದಿಲ್ಲ ಎಂದು ಗ್ರಾಹಕರು ಶಪಥಪೂರ್ವಕವಾಗಿ ಒಪ್ಪಿರುತ್ತಾರೆ. ಯಾವುದೇ ಗ್ರಾಹಕರು ನಿಯಮ ಮತ್ತು ಷರತ್ತುಗಳ ದಾಖಲೆಯಲ್ಲಿರುವ ಅಂಶಗಳನ್ನು ಉಲ್ಲಂಘಿಸಿರುವರೆಂದು ಕಂಡುಬಂದರೆ, ಸಂಬಂಧಿತ ಗ್ರಾಹಕರು ಪೇಜ್ಯಾಪ್ ಸೇವೆಗಳನ್ನು ಉಪಯೋಗಿಸದಂತೆ ನಿರ್ಬಂಧ ವಿಧಿಸುವ ಹಕ್ಕನ್ನು ಬ್ಯಾಂಕು ಕಾಯ್ದಿರಿಸಿಕೊಂಡಿದೆ. ಪೇಜ್ಯಾಪ್ ಸೇವೆಗಳ ಅನಧಿಕೃತ ಬಳಕೆಯಿಂದ ಉದ್ಭವಿಸುವ ಯಾವುದೇ ರೀತಿಯ ಅಹಿತಕರ ಪರಿಣಾಮಗಳಿಗೆ ತಾವೇ ಹೊಣೆಗಾರರೆಂದು ಗ್ರಾಹಕರು ಒಪ್ಪಿರುತ್ತಾರೆ.

**11. ಗ್ರಾಹಕರ ಸೇವೆ ಮತ್ತು ಬೆಂಬಲ**

11.1 ಪೇಜ್ಯಾಪ್ ಗ್ರಾಹಕ ಸೇವೆಗಳು ಪೇಜ್ಯಾಪ್ ಸೇವೆಗಳ ಬಳಕೆಗಷ್ಟೇ ಸೀಮಿತವಾಗಿರುವುವೆಂಬುದನ್ನು ಗ್ರಾಹಕರು ಅರ್ಥೈಸಿಕೊಂಡಿದ್ದಾರೆ ಮತ್ತು ಒಪ್ಪಿಕೊಂಡಿರುತ್ತಾರೆ. ಪೇಜ್ಯಾಪ್ ಸೇವೆಗಳನ್ನು ಉಪಯೋಗಿಸಿಕೊಂಡು ಗ್ರಾಹಕರು ಆಯ್ಕೆ ಮಾಡಿ ಕೊಂಡುಕೊಳ್ಳುವ ಯಾವುದೇ ವಸ್ತು ಮತ್ತು ಸೇವೆಗಳಿಗೆ ಬ್ಯಾಂಕ್ ಜವಾಬ್ದಾರರಲ್ಲ. ಗ್ರಾಹಕರು ಯಾವ ವ್ಯಾಪಾರಿಗಳಿಂದ ವಸ್ತು ಮತ್ತು ಸೇವೆಗಳನ್ನು ಕೊಳ್ಳಲು ಆಯ್ಕೆ ಮಾಡಿರುವರೋ ಆ ವ್ಯಾಪಾರಿಗಳ ಸೇವೆಗಳಿಗೆ ಸಂಬಂಧಿಸಿದ ಅಂಶಗಳಾದ ಅವರವರ ವಸ್ತು ಸೇವೆಗಳ/ಆಶ್ವಾಸನೆಗಳ ಈಡೇರಿಕೆ, ಆದೇಶ ರದ್ದುಗೊಳಿಸುವುದು, ಹಿಂದಿರುಗಿಸುವುದು, ಹಣ ಹಿಂದಿರುಗಿಸುವುದು ಮತ್ತು ಹೊಂದಾಣಿಕೆ ಮಾಡುವುದು, ರೆಯಾಯಿತಿಗಳು, ಕಾರ್ಯನಿರ್ವಹಣೆ ಮತ್ತು ಖಾತರಿ, ತಾಂತ್ರಿಕ ಬೆಂಬಲ/ನೆರವು, ಮತ್ತು ವ್ಯಾಪಾರಿಗಳ ಸಿಬ್ಬಂದಿ ವರ್ಗದವರೊಂದಿಗಿನ ಅನುಭವಗಳಿಗೆ ಸಂಬಂಧಿಸಿದ ವಿಷಯಗಳಿಗೆ, ಅವರ ನಿಯಮಾವಳಿಗಳು ಅಥವಾ ಪ್ರಕ್ರಿಯೆಗಳೇ ಮುಂತಾದ ವಿಷಯಗಳಿಗೆ ಆಯಾ ವ್ಯಾಪಾರಿಗಳೇ ಜವಾಬ್ದಾರರು. ಕಾರ್ಡ್ ಸಂಘಟನೆಗಳು ಮತ್ತು/ಅಥವಾ ಕಾರ್ಡ್ ನೀಡುವ ಇತರ ಯಾವುದೇ ಸಂಸ್ಥೆಗಳು ಆಯಾ ಕಾರ್ಡ್ ಗೊತ್ತುಪಡಿಸಿರುವ ಗ್ರಾಹಕ ಸೇವೆಗಳಿಗಷ್ಟೇ ಜವಾಬ್ದಾರರು.

**12 ವಿದ್ಯುನ್ಮಾನ ಅಧಿಸೂಚನೆಗಳು**

12.1 ಈ ನಿಯಮ ಮತ್ತು ಷರತ್ತುಗಳ ದಾಖಲೆಪತ್ರವನ್ನು ಒಪ್ಪಿರುವುದರಿಂದ, ಗ್ರಾಹಕರು ತಾವು ಇದನ್ನು ಓದಿ ಅರ್ಥಮಾಡಿಕೊಂಡಿರುವುದಾಗಿ ದೃಢೀಕರಿಸಿರುತ್ತಾರೆ ಮತ್ತು ಪೇಜ್ಯಾಪ್‌ನ ವಿದ್ಯುನ್ಮಾನ (ಎಲೆಕ್ಟ್ರಾನಿಕ್) ಸೂಚನಾ ತತ್ವಗಳನ್ನು ಒಪ್ಪಿರುವುದಾಗಿ ದೃಢೀಕರಿಸಿರುತ್ತಾರೆ. ಈ ತತ್ವದ ಪ್ರಕಾರ, ಗ್ರಾಹಕರ ಪೇಜ್ಯಾಪ್ ಸೇವೆಗಳ ಬಗ್ಗೆ ಅಥವಾ ಸಂಬಂಧಿಸಿದಂತೆ ಎಲ್ಲ ಅಧಿಸೂಚನೆಗಳು ಮತ್ತು ಕಾನೂನು ಬದ್ಧ ಬಹಿರಂಗಪಡಿಸುವುದನ್ನು ಗ್ರಾಹಕರಿಗೆ ವಿದ್ಯುನ್ಮಾನಕವಾಗಿ ತಲುಪಿಸಲಾಗುವುದು. ಈ ಅಂಶವು ಗ್ರಾಹಕರ ಮೊಬೈಲ್ ಫೋನ್ ಮೂಲಕ, ಪೇಜ್ಯಾಪ್ ಅಪ್ಲಿಕೇಷನ್ ಮೂಲಕ, ಗ್ರಾಹಕರ ಬ್ಯಾಂಕಿನಲ್ಲಿ/ಇತರ ಬ್ಯಾಂಕಿನಲ್ಲಿ ಗ್ರಾಹಕರು ನೊಂದಾಯಿಸಿರುವ ಈಮೇಲ್ ಮೂಲಕವಾಗಿ ಅಥವಾ [ವೆಬ್ ಸೈಟ್‌ಗಳ ಮೇಲೆ ನಮೂದು ಮಾಡುವ] ಮೂಲಕ ಅಧಿಸೂಚನೆಗಳನ್ನು ಸಂಬಂಧಪಟ್ಟ ಗ್ರಾಹಾಕರಿಗೆ ತಲುಪಿಸುವುದನ್ನು ಒಳಗೊಂಡಿರುತ್ತದೆ, ಆದರೆ ಅಷ್ಟಕ್ಕೇ ಸೀಮಿತವಾಗಿರುವುದಿಲ್ಲ.

**13 ನಿರ್ದಿಷ್ಟ ಒಮ್ಮತಗಳು, ಬಹಿರಂಗಗೊಳಿಸುವುದು ಮುಂತಾದವು**

13.1 ಈ ನಿಯಮ ಮತ್ತು ಷರತ್ತುಗಳ ಪತ್ರವನ್ನು ಒಪ್ಪಿರುವುದರ ಮೂಲಕ ಗ್ರಾಹಕರು https://www.hdfcbank.com/personal/useful-links/privacy ಎಂಬಲ್ಲಿ ಲಭ್ಯವಿರುವ ಬ್ಯಾಂಕಿನ ಪ್ರೈವೆಸಿ ಪಾಲಿಸಿ (ಗೌಪ್ಯತೆ ತತ್ವ/ಸಿದ್ಧಾಂತ) ಯನ್ನು ಒಪ್ಪಿರುತ್ತಾರೆ ಮತ್ತು ಅಂಗೀಕರಿಸಿರುತ್ತಾರೆ.

13.2 ಬ್ಯಾಂಕು ಯಾವುದೇ ನಿರ್ದಿಷ್ಟ ಉದ್ದೇಶಗಳಿಗಾಗಿ, ಗ್ರಾಹಕರಿಗೆ ಸಂಬಂಧಿಸಿರುವ/ಸಂಬಂಧಿಸಿರದ ಯಾವುದೇ ಡ್ಯಾಟಾವನ್ನು, ಸಂಪೂರ್ಣವಾಗಿ ಅಥವಾ ಭಾಗಶಃ, ಯಾವುದೇ ಸಂಸ್ಕರಣಾ ಘಟಕಗಳೊಂದಿಗೆ, ಅಥವಾ ಇತರ ಡ್ಯಾಟಾಬೇಸ್‌ಗಳೊಂದಿಗೆ ಸಂಸ್ಕರಿಸಬಹುದು, ಬಳಸಬಹುದು, ಶೇಖರಿಸಬಹುದು, ಹಂಚಿಕೊಳ್ಳಬಹುದು, ಪಡೆದುಕೊಳ್ಳಬಹುದು ಎಂದು ಬ್ಯಾಂಕಿಗೆ ಗ್ರಾಹಕರು ಈ ಮೂಲಕ ಅಧಿಕಾರ ನೀಡಿರುತ್ತಾರೆ.

i. ಅರ್ಜಿಗೆ ಸಂಬಂಧಿಸಿದ ವಿಷಯಗಳನ್ನು/ವಿನಂತಿಗಳನ್ನು, ಯಾವುದೇ ವಿನಂತಿಸಲಾದ ಉತ್ಪನ್ನಕ್ಕೆ ಸಂಬಂಧಿಸಿದಂತೆ, ಮೌಲ್ಯಮಾಪನ ಮಾಡಲು/ಅಥವಾ ಒಪ್ಪಂದ/ವ್ಯವಹಾರವನ್ನು, ಪೂರ್ಣವಾಗಿ ಅಥವಾ ಭಾಗಶಃ, ಬ್ಯಾಂಕಿನ ಅಥವಾ ಗ್ರಾಹ್ಯಕರ ಅಥವಾ ಖಾತರಿ ನೀಡಿರುವವರ (ಗ್ಯಾರಂಟರ್ಸ್), ಸುರಕ್ಷೆ (ಸೆಕ್ಯುರಿಟಿ) ನೀಡಿರುವವರು, ಇತರ ಮಧ್ಯವರ್ತಿಗಳ ಅಥವಾ ಯಾವುದೇ ನಿಯಂತ್ರಣ ಅಥವಾ ಕಾನೂನು ಬಾಧ್ಯತೆಗಳಿಗೆ ಸಂಬಂಧಿಸಿದ ಪ್ರದರ್ಶನವನ್ನು ಕಾರ್ಯಗತಗೊಳಿಸಲು ಅಥವಾ ವೃದ್ಧಿ ಮಾಡುವುದು/ ಮುಂದುವರಿಸುವ ಉದ್ದೇಶಕ್ಕಾಗಿ.

ii. ಯಾವುದೇ ವ್ಯುತ್ಪತ್ತಿಗಾಗಿ (ಡಿರೈವೇಷನ್) ಮತ್ತು ಉತ್ಪನ್ನವಾದ ಡ್ಯಾಟಾ (ಡಿರೈವೇಟಿವ್ ಡ್ಯಾಟಾ) (ಬ್ಯಾಂಕು ಮತ್ತು ಯಾವುದೇ ಸಂಸ್ಕರಣಾ ಘಟಕಗಳ ಮಧ್ಯೆ)ವನ್ನು ಮೇಲೆ ತಿಳಿಸಿರುವ ಉದ್ದೇಶಗಳಿಗಾಗಿ ಹಂಚಿಕೊಳ್ಳುವ ಸಲುವಾಗಿ.

iii. ಸಂಪರ್ಕಿಸಲು, ಸಂಪರ್ಕ ಕಲ್ಪಿಸಲು, ಪತ್ತೆಮಾಡಲು, ಈಮೇಲ್, ಅಂಚೆ ವಿಳಾಸ, ದೂರವಾಣಿ, ಸಾಮಾಜಿಕ ಜಾಲತಾಣ, ಅಪ್ಲಿಲಿಕೇಷನ್‌ಗಳ/ ಎಲೆಕ್ಟ್ರಾನಿಕ್ ಪ್ಲಾಟ್‌ಫಾರಂಗಳ ಮೇಲೆ ಲಭ್ಯವಾಗುವ ಬ್ಯಾನರ್‌ಗಳು, ಅಧಿಸೂಚನೆಗಳು, ವೆಬ್‌ಸೈಟ್, ಮೂರನೆ ಸಂಸ್ಥೆ/ವ್ಯಕ್ತಿಯ ಆವರಣಗಳ ಮೂಲಕ ಪ್ರಯತ್ನಿಸುವ ಉದ್ದೇಶಕ್ಕಾಗಿ

iv. ವಿಶ್ಲೇಷಣೆಗಳನ್ನು ನಿಯೋಜಿಸುವುದು, ಸ್ವಯಂಚಾಲಿತ ಸಂಸ್ಕರಣಾ ಪ್ರಕ್ರಿಯೆ, ಅಲ್ಗೋರಿಥಮ್ಸ್, ರೊಬೋಟಿಕ್ಸ್, ಪ್ರೊಫೈಲ್ ರಚಿಸುವುದು, ಗೂಢಲಿಪೀಕರಣ, ಕೋಡಿಂಗ್, ಅನಾಮಿಕವಾಗಿಸುವುದು ಮುಂತಾದುವನ್ನು ಮೇಲೆ ತಿಳಿಸಿರುವ ಯಾವುದೇ ಉದ್ದೇಶಕ್ಕಾಗಿ ಬಳಸುವುದು.

13.3 ಬ್ಯಾಂಕು ಅಥವಾ ಇತರ ಸಂಸ್ಕರಣಾ ಘಟಕಗಳು ಬ್ಯಾಂಕಿನ ಜೊತೆಗೂಡಿ ಬೇಕಾಗಿರುವ ಡ್ಯಾಟಾವನ್ನು, ಪೂರ್ತಿಯಾಗಿ ಅಥವಾ ಭಾಗಶಃ, ಸಂಸ್ಕರಿಸಲು, ಬಳಸಲು, ಶೇಖರಿಸಲು, ಉಳಿಸಿಕೊಳ್ಳಲು, ಇತರ ಸಂಸ್ಕರಣಾ ಘಟಕಗಳು ಅಥವಾ ಬ್ಯಾಂಕುಗಳಿಂದ, ಸಂಸ್ಕರಣಾ ಘಟಕ ಅಥವಾ ಇತರ ಡ್ಯಾಟಾ ಬೇಸ್‌ಗಳು, ಮೂಲಗಳು, ವ್ಯಕ್ತಿಗಳು/ಸಂಸ್ಥೆಗಳಿಂದ ಮೇಲಿನ ಉದ್ದೇಶಕ್ಕಾಗಿ, ಪಡೆಯಬಹುದು.

Classification - Public



Classification - Public

13.4 ಮೇಲೆ ಹೇಳಿರುವ ಒಪ್ಪಿಗೆ, ಹಾಗೂ ಒಳಗೂಡಿಸಿರುವ ಅಧಿಕಾರ ಮತ್ತು ಉದ್ದೇಶಗಳಿಗೆ ಸಂಬಂಧಿಸಿದಂತೆ, ಗ್ರಾಹಕರು ಅವಶ್ಯವಿರುವ ಎಲ್ಲ ಡ್ಯಾಟಾಗಳನ್ನು ಈ ಒಪ್ಪಿಗೆಯಡಿಯಲ್ಲಿ ಪ್ರತ್ಯೇಕವಾಗಿ ನೀಡಿರುತ್ತಾರೆಂದು ಭಾವಿಸಲಾಗಿದೆ.

13.5 ಪ್ಯಾನ್ (ಶಾಶ್ವತ ಖಾತೆ ಸಂಖ್ಯೆ) ಮತ್ತುಅದಕ್ಕೆ ಸಂಬಂಧಿಸಿದ ಮಾಹಿತಿಗಳಿಗೆ ಸಂಬಂಧಿಸಿದಂತೆ, ಗ್ರಾಹಕರು ಬ್ಯಾಂಕನ್ನು ಬದಲಾಯಿಸಲಾಗದಂತೆ ಬ್ಯಾಂಕಿಗೆ ಅಧಿಕಾರ ನೀಡಿರುತ್ತಾರೆ ಮತ್ತು ದೃಢೀಕರಣವನ್ನು ಒಳಗೊಂಡಂತೆ, ಈ ಮೇಲಿರುವ **ಷೆಡ್ಯೂಲ್ 2** ರಲ್ಲಿರುವಂತೆ, ಬ್ಯಾಂಕಿಗೆ ಒಪ್ಪಿಗೆ ನೀಡುತ್ತಾರೆ.

13.6 ಮೇಲೆ ಹೇಳಿರುವ ಉದ್ದೇಶಗಳಿಗೆ ತಾವು ನೀಡಿರುವ ಒಪ್ಪಿಗೆ/ಅಧಿಕಾರಗಳು ತತ್ಸಂಬಂಧಿತ ಅಪ್ಲಿಕೇಷನ್ನಿನ ಸಿಂಧುತ್ವವು (ವ್ಯಾಲಿಡಿಟಿ) ಉತ್ಪನ್ನದ ಅವಧಿ/ಯಾವುದೇ ವ್ಯವಹಾರ ಪೂರ್ಣಗೊಂಡ ನಂತರವೂ ಮುಂದುವರಿಯುವುದೆಂದು ಗ್ರಾಹಕರು ಒಪ್ಪಿರುತ್ತಾರೆ.

13.7 ನೀಡಿರುವ ಅನುಮತಿ ಅಥವಾ ನಿಯಮ ಮತ್ತು ಷರತ್ತುಗಳ ದಾಖಲೆಯಲ್ಲಿರುವ ಯಾವುದೇ ಅಂಶವನ್ನು ನಿರಾಕರಿಸುವುದು, ನೀಡಲ್ಪಟ್ಟಿರುವ/ಪಡೆಯಲಾಗಿರುವ ಇತರ ಯಾವುದೇ ಒಪ್ಪಿಗೆಗಳನ್ನು ಸೀಮಿತಗೊಳಿಸುವುದಿಲ್ಲ.

**14. ಬಳಕೆದಾರರ ಅನುಮತಿ**

14.1 ಪೇಜ್ಯಾಪ್ ಸೇವೆಗಳನ್ನು ಪ್ರಪ್ರಥವಾಗಿ ಗ್ರಾಹಕರ ಉಪಯೋಗಕ್ಕೆಂದು ನೀಡಲಾಗಿದೆ ಮತ್ತು ಗ್ರಾಹಕರು ಯಾವುದೇ ಸ್ಥಿರಚಿತ್ರ (ಫೋಟೋ), ವಿಡಿಯೋ ಅಥವಾ ಇತರ ಡಿಜಿಟಲ್ ಕಂಟೆಂಟ್‌ಗಳನ್ನು, ಗ್ರಾಹಕರು ತಾವೇ ಸ್ವತಃ ಕಂಟೆಂಟ್‌ಗಳನ್ನು ರಚಿಸಿರುವ/ಸೃಷ್ಟಿಸಿರುವುದನ್ನು ಬಿಟ್ಟು, ಅಥವಾ ಆ ಕಂಟೆಂಟ್‌ಗಳನ್ನು ಬಳಸಲು ಅವಶ್ಯಕವಾದ ಬಳಕೆ ಹಕ್ಕುಗಳನ್ನು ತಮ್ಮಲ್ಲಿ ಇರುವಂತಹ ಸನ್ನಿವೇಶಗಳನ್ನು ಹೊರತುಪಡಿಸಿ, ಅಪ್‌ಲೋಡ್ ಮಾಡುವುದಿಲ್ಲ ಎಂದು ಗ್ರಾಹಕರು ಒಪ್ಪಿರುತ್ತಾರೆ. ಈ ನಿಯಮ ಮತ್ತು ಷರತ್ತುಗಳ ದಾಖಲೆಯನ್ನು ಉಲ್ಲಂಘಿಸಿರುವುದು ಕಂಡುಬಂದಲ್ಲಿ, ಅಂತಹವರು ಪೇಜ್ಯಾಪ್ ಸೇವೆಗಳನ್ನು ಇನ್ನು ಮುಂದೆ ಬಳಸದಂತೆ ಬ್ಯಾಂಕು ನಿರ್ಬಂಧಿಸಬಹುದಾಗಿದೆ. ಅಂತಹ ಕಂಟೆಂಟ್‌ಗಳನ್ನು ಅನಧಿಕೃತವಾಗಿ ಬಳಸಿದ್ದರಿಂದ ಉತ್ಪನ್ನವಾಗುವ ಯಾವುದೇ ಪರಿಣಾಮಗಳಿಗೂ ತಾವೇ ಜವಾಬ್ದಾರರೆಂದೂ ಗ್ರಾಹಕರು ಒಪ್ಪಿರುತ್ತಾರೆ.

**15 ಬೆಂಬಲಿತ ಸಾಧನಗಳು ಮತ್ತು ಡ್ಯಾಟಾ ಸೇವೆಗಳು**

15.1 ಪೇಜ್ಯಾಪ್ ಅಪ್ಲಿಕೇಷನ್ನನ್ನು ಬೆಂಬಲಿಸುತ್ತಿರುವ ಸಾಧನಗಳು, ಸಾಫ್ಟ್‌ವೇರ್ ವೇದಿಕೆಗಳು, ಆವೃತ್ತಿಗಳು (ವರ್ಷನ್ಸ್), ನೆಟ್‌ವರ್ಕ್ಸ್, ವಿಧಾನಗಳು, ಮತ್ತು ಡ್ಯಾಟಾ ಸೇವೆಗಳಲ್ಲಿ ಯಾವುದನ್ನಾದರೂ ಆಯ್ಕೆ ಮಾಡಿಕೊಳ್ಳುವ ಹಕ್ಕನ್ನು ಬ್ಯಾಂಕು ಕಾಯ್ದಿರಿಸಿಕೊಂಡಿದೆ. ವಿವಿಧ ಉಪಕರಣಗಳ ಪೇಜ್ಯಾಪ್ ಅಪ್ಲಿಕೇಷನ್ನನ್ನು, ಅವುಗಳಿಗೆ ಅನ್ವಯವಾಗುವ ನಿಯಮ ಮತ್ತು ಷರತ್ತುಗಳಿಗೆ ಬದ್ಧವಾಗಿ ಬಳಸಬಹುದಾದ, ಬ್ಯಾಂಕಿನಿಂದ ಅಧಿಕೃತವಾಗಿ ಬೆಂಬಲಿಸಲ್ಪಟ್ಟಿರುವ ಸಲಕರಣೆಗಳು (ಟೂಲ್ಸ್), ತಾಂತ್ರಿಕತೆಗಳು, ಮತ್ತು ಆವೃತ್ತಿಗಳನ್ನು, ಕಾಲಾನುಕ್ರಮದಲ್ಲಿ ಬ್ಯಾಂಕು ಪ್ರಕಟಿಸುತ್ತದೆ. ಗ್ರಾಹಕರು ಈ ನಿಯಮ ಮತ್ತು ಷರತ್ತುಗಳನ್ನು ಸರ್ವಕಾಲದಲ್ಲೂ ಪಾಲಿಸಬೇಕು. ಈ ರೀತಿ ಪ್ರಕಟಗೊಂಡ ಅವಶ್ಯಕತೆಗಳ ಸುತ್ತ ಕಾರ್ಯಪ್ರವೃತ್ತರಾಗಲು ಪ್ರಯತ್ನಿಸಿದರೆ ಅಥವಾ ಅಧಿಕೃತವಾಗಿ ಬೆಂಬಲಿಸಲ್ಪಟ್ಟಿರದ ಆವೃತ್ತಿಗಳನ್ನು ಮಾರ್ಪಡಿಸಿ ಪೇಜ್ಯಾಪ್ ಅಪ್ಲಿಕೇಷನ್ನನ್ನು ಬಳಸಲು ಪ್ರಯತ್ನಿಸಿದರೆ ಅದನ್ನು ಅನಧಿಕೃತ ಬಳಕೆ ಮತ್ತು ಈ ನಿಯಮ ಮತ್ತು ಷರತ್ತುಗಳ ಉಲ್ಲಂಘನೆಯೆಂದು ಪರಿಗಣಿಸಲಾಗುತ್ತದೆ.

15.2 ಚಾಲ್ತಿಯಲ್ಲಿರುವ ಮೊಬೈಲ್ ಫೋನ್ ಆಪರೇಟಿಂಗ್ ವ್ಯವಸ್ಥೆಗಳ ಎಲ್ಲ ಆವೃತ್ತಿಗಳನ್ನು ಮತ್ತು ಮೊಬೈಲ್ ಫೋನ್‌ಗಳ ನವೀನ ಆವೃತ್ತಿಗಳೆಲ್ಲವನ್ನು, ಅವುಗಳು ಬಿಡುಗಡೆಯಾಗುತ್ತಿದ್ದಂತೆ, ಬ್ಯಾಂಕು ಬೆಂಬಲಿಸಬೇಕೆಂಬ ಯಾವುದೇ ಬಾಧ್ಯತೆ ಬ್ಯಾಂಕಿನ ಮೇಲಿರುವುದಿಲ್ಲ. ಸದ್ಯ ಚಾಲ್ತಿಯಲ್ಲಿರುವ ಯಾವುದೇ ಆಪರೇಟಿಂಗ್ ವ್ಯವಸ್ಥೆಯನ್ನು, ಗ್ರಾಹಕರಿಗೆ ಪೂರ್ವ ಸೂಚನೆ/ಅಧಿಸೂಚನೆಗಳಿಲ್ಲದೆ ತನ್ನ ಬೆಂಬಲವನ್ನು ತನ್ನ ವಿವೇಚನೆಗೆ ತಕ್ಕಂತೆ ಬ್ಯಾಂಕು ಹಿಂಪಡೆಯಬಹುದು.

**16 ವ್ಯಾಪಾರಿಗಳ ಸೇವೆಗಳಿಗೆ ಪ್ರವೇಶ:**

16.1 ಪೇಜ್ಯಾಪ ಕಾರ್ಯಕ್ರಮದ ಪಟ್ಟಿಯಿಂದ ಯಾವುದೆ ವ್ಯಾಪಾರಿಯನ್ನು/ವ್ಯಾಪಾರ ಸಂಸ್ಥೆಯನ್ನು ಸೇರಿಸಿಕೊಳ್ಳುವ ಅಥವಾ ಹೊರಹಾಕುವ ಹಕ್ಕನ್ನು ಬ್ಯಾಂಕು ಕಾಯ್ದಿರಿಸಿಕೊಂಡಿದೆ ಮತ್ತು ವ್ಯಾಪಾರಿಯನ್ನು ಪೇಜ್ಯಾಪ್ ವೇದಿಕೆಯಲ್ಲಿ ಸೇರಿಸಿಕೊಳ್ಳುವ ಅಥವಾ ತೆಗೆದುಹಾಕುವುದರಿಂದ ಗ್ರಾಹಕರಿಗಾಗಲೀ, ತತ್‌ಪ್ರತಿಯಾಗಿ ಬ್ಯಾಂಕಿಗಾಗಲೀ ಯಾವುದೇ ರೀತಿಯ ಹಕ್ಕುಗಳಿಗೆ ದಾರಿ ಮಾಡಿಕೊಡುವುದಿಲ್ಲ.

**17 ಮಾಹಿತಿ ಸುರಕ್ಷೆ/ರಕ್ಷಣೆ**

17.1 ಪೇಜ್ಯಾಪ್ ಸೇವೆಗಳ ಬಳಸಿದಾಗ/ಬಳಸಬೇಕಾದಾಗ ಗ್ರಾಹಕರು ತಮ್ಮ ವೈಯುಕ್ತಿಕ ಮಾಹಿತಿಗಳನ್ನು ಬ್ಯಾಂಕಿಗೆ ನೀಡಿರುವುದನ್ನು/ರಚಿಸಿರುವುದನ್ನು ಅನಧಿಕೃತವಾಗಿ ಬಳಕೆಯಾಗದಿರುವಂತೆ ಅಥವಾ ಅಕಸ್ಮಾತ್ತಾಗಿ ಬಹಿರಂಗಗೊಳ್ಳದಿರುವಂತೆ ಅವಶ್ಯಕವಾದ ಪ್ರಕ್ರಿಯೆ ಹಾಗೂ ತಾಂತ್ರಿಕ ವ್ಯವಸ್ಥೆಗಳನ್ನು ಬ್ಯಾಂಕು ಅಳವಡಿಸಿಕೊಂಡಿದೆ. ಗ್ರಾಹಕರು ಅಂಗೀಕರಿಸಿರುವುದೇನೆಂದರೆ ತಾವು ತಮ್ಮ ವೈಯುಕ್ತಿಕ ಮಾಹಿತಿಗಳನ್ನು ಸ್ವೇಚ್ಛೆಯಿಂದ ಮತ್ತು ತಮ್ಮ ಸ್ವಂತ ಜವಾಬ್ದಾರಿಯ ಮೇಲೆ ಬ್ಯಾಂಕಿಗೆ ಸಲ್ಲಿಸಿರುತ್ತಾರೆ.

**18 ಅಂತ್ಯಗೊಳಿಸುವುದು ಮತ್ತು ಅಮಾನತು ಮಾಡುವುದು**

18.1 ಯಾವುದೇ ಕಾರಣದಿಂದ ಪೇಜ್ಯಾಪ್‌ಆಪ್‌ಗೆ ಗ್ರಾಹಕರಿಗಿರುವ ಪ್ರವೇಶಾವಕಾಶವನ್ನು ರದ್ದುಮಾಡುವ/ಅಂತ್ಯಗೊಳಿಸುವ ಮತ್ತು ಪೇಜ್ಯಾಪ್ ಸೇವೆಗಳನ್ನು ಪಡೆಯುವ ಸೌಲಭ್ಯವನ್ನು ಹಿಂತೆಗೆದುಕೊಳ್ಳುವ ಹಕ್ಕನ್ನು ಬ್ಯಾಂಕ್ ತನ್ನಲ್ಲಿ ಇರಿಸಿಕೊಂಡಿದೆ. ಹಾಗೆ ಯಾವಾಗಲಾದರೂ ರದ್ದುಪಡಿಸಿದಲ್ಲಿ, ಗ್ರಾಹಕರು ಈ ನಿಯಮ ಮತ್ತು ಷರತ್ತುಗಳ ದಾಖಲೆಗೆ ಬದ್ಧರಾಗಿ ಮುಂದುವರೆಯುವುದಾಗಿ, ಮತ್ತು ತಕ್ಷಣದಿಂದಲೇ ಪೇಜ್ಯಾಪ್ ಸೇವೆಗಳ ಬಳಕೆಯನ್ನು ನಿಲ್ಲಿಸಲು ಗ್ರಾಹಕರು ಒಪ್ಪಿರುತ್ತಾರೆ. ಹಾಗೆ ರದ್ದುಗೊಂಡ ಕ್ಷಣದಿಂದ, ಈ ನಿಯಮ ಮತ್ತು ಷರತ್ತುಗಳ ದಾಖಲೆಯಲ್ಲಿ ನಮೂದಾಗಿರುವ ಗ್ರಾಹಕರಿಗಿರುವ ಹಕ್ಕುಗಳು ಕೊನೆಗೊಳ್ಳುತ್ತವೆ ಎಂಬುದನ್ನು ಗ್ರಾಹಕರು ಒಪ್ಪಿರುತ್ತಾರೆ.

18.2 ಪೇಜ್ಯಾಪ್ ಸೇವೆಗಳನ್ನು ಗ್ರಾಹಕರು ಅನಧಿಕೃತವಾಗಿ ಬಳಸುತ್ತಿರುವರು ಎಂದು, ವಂಚನೆ ಮಾಡುತ್ತಿರುವರು ಎಂದು, ಅಥವಾ ಯಾವುದೇ ನಿಷೇಧಿತ ಪ್ರದೇಶಗಳಲ್ಲಿ ಬಳಸುತ್ತಿರುವರು ಅಥವಾ ಈ ನಿಯಮ ಮತ್ತು ಷರತ್ತುಗಳ ದಾಖಲೆಯಲ್ಲಿರುವ ಷರತ್ತುಗಳ ಉಲ್ಲಂಘನೆಯಾಗುತ್ತಿರುವುದು ಅಥವಾ ಪೇಜ್ಯಾಪ್ ಅಪ್ಲಿಕೇಷನ್ನಿನ ನಿಯಮ ಮತ್ತು ಷರತ್ತುಗಳನ್ನು ಬೇರೊಂದು ಕಡೆ ನೀಡುವುದು ಅಥವಾ ಕೊಡುಗೆಯ ದುರುಪಯೋಗ ಅಥವಾ ಇನ್ನಿತರ ದುರುಪಯೋಗ ಅಥವಾ ಅನುಮಾನಾಸ್ಪದ ಅಥವಾ ವಂಚನೆಯ ಚಟುವಟಿಕೆಗಳಲ್ಲಿ ಬಳಸಲ್ಪಡುತ್ತಿದ್ದರೆ ಅಥವಾ ಬೇರೆ ವ್ಯಕ್ತಿಯು ಇದರ ದುರುಪಯೋಗ ಮಾಡುತ್ತಿದ್ದರೆ (ಉದಾ: ಯಾವುದೇ ನಿಷ್ಕಪಟ ಉದ್ದೇಶವಿಲ್ಲದೆ ಪದಾರ್ಥಗಳು ಮತ್ತು ಸೇವೆಗಳನ್ನು ಪಡೆದು ಅವುಗಳನ್ನು ರದ್ದುಗೊಳಿಸುವ, ಹಿಂದಿರುಗಿಸುವ, ಬದಲಾಯಿಸುವ ಚಟುವಟಿಕೆಗಳಲ್ಲಿ, ಕೇವಲ ಕ್ಯಾಶ್‌ಬ್ಯಾಕ್ ಅಥವಾ ರಿವಾರ್ಡ್‌ಗಳಿಗಾಗಿ,ತೊಡಗಿಕೊಳ್ಳುವುದು), ಬ್ಯಾಂಕು, ತನ್ನ ಸ್ವಂತ ನಿರ್ಧಾರದ ಮೇಲೆ, ಪೇಜ್ಯಾಪ್ ಸೇವೆಗಳನ್ನು ರದ್ದುಮಾಡುವ ಅಥವಾ ಅಂತ್ಯಗೊಳಿಸುವ ಮತ್ತು ಸಂಬಂಧಿತ ಪೇಜ್ಯಾಪ್ ಪಿಪಿಐಅನ್ನು ಮುಚ್ಚುವ ಹಕ್ಕನ್ನು ಕಾಯ್ದಿರಿಸಿಕೊಂಡಿದೆ. ಪೇಜ್ಯಾಪ್ ಸೇವೆಗಳನ್ನು ಅಮಾನತುಗೊಳಿಸಿದ ಅಥವಾ ಅಂತ್ಯಗೊಳಿಸಿದ ಸಂದರ್ಭದಲ್ಲಿ ಗ್ರಾಹಕರಿಗಿದ್ದ

ಪೇಜ್ಯಾಪ್ ಅಪ್ಲಿಕೇಷನ್ ಪ್ರವೇಶಾವಕಾಶವನ್ನು ಬ್ಲಾಕ್ ಮಾಡಲು ಮತ್ತು ಆಗಲೇ ಪೇಜ್ಯಾಪ್ ಅಪ್ಲಿಕೇಷನ್ ಬಳಸಿಕೊಂಡು ನಡೆಸಲಾಗಿದ್ದ ವ್ಯವಹಾರವನ್ನು ಸಂಸ್ಕರಿಸಲು ನಿರಾಕರಿಸಬಹುದು. ಹಾಗೆ ಅಮಾನತುಗೊಳಿಸಿದ ಅಥವಾ ರದ್ದುಗೊಳಿಸಿದ ಕಾರಣದಿಂದ ಗ್ರಾಹಕರು ಅನುಭವಿಸಬೇಕಾಗಬಹುದಾದ ಯಾವುದೇ ನಷ್ಟ, ಖರ್ಚು, ವೆಚ್ಚಗಳು ಮುಂತಾದವುಗಳಿಗೆ ಬ್ಯಾಂಕ್ ಜವಾಬ್ದಾರರಾಗಿರುವುದಿಲ್ಲ ಅಥವಾ ಬಾಧ್ಯರಾಗಿರುವುದಿಲ್ಲ.

18.3 ಗ್ರಾಹಕರು ಕೊಡುಗೆಗಳ ದುರುಪಯೋಗ ಮಾಡುತ್ತಿರುವರು ಅಥವಾ ವಂಚನೆಯ ವ್ಯವಹಾರಗಳಲ್ಲಿ, ಯಾವುದೇ ವ್ಯಾಪಾರಿಗಳು/ಮಾರಾಟಗಾರರು ಗ್ರಾಹಕರೊಂದಿಗೆ ವಾಸ್ತವಿಕ ಮಾರಾಟ ಅಥವಾ ವಸ್ತುಗಳು ಮತ್ತು ಸೇವೆಗಳ ವರ್ಗಾವಣೆ ಒಳಗೊಂಡಿರದ ವ್ಯವಹಾರವನ್ನೊಳಗೊಂಡಂತೆ ಆದರೆ ಅದಕ್ಕೆ ಸೀಮಿತವಾಗಿರದೆ, ತೊಡಗಿಕೊಂಡಿರುವರೆಂದು ತೋರಿಬಂದರೆ, ಬ್ಯಾಂಕು, ತನ್ನದೇ ಅನಿರ್ಬಂಧಿತ, ಸ್ವವಿವೇಚನೆಯಿಂದ.ಪೂರ್ವಮಾಹಿತಿ ನೀಡದೆ ಗ್ರಾಹಕರ ಪೇಜ್ಯಾಪ್ ಖಾತೆಯನ್ನು ಶಾಶ್ವತವಾಗಿ ನಿಷ್ಕ್ರಿಯಗೊಳಿಸಬಹುದೆಂದು ಗ್ರಾಹಕರು ಒಪ್ಪಿ ದೃಢೀಕರಿಸಿರುತಾರೆ. ಈ ಷರತ್ತಿನಡಿ ಪೇಜ್ಯಾಪ್ ಪಿಪಿಐ ಖಾತೆಯು ನಿಷ್ಕ್ರಿಯಗೊಳಿಸಲ್ಪಟ್ಟರೆ, ಗ್ರಾಹಕರು, ವಂಚನೆಗೊಳಗಾಗಿರುವ ಮೊಬೈಲ್ ಸಂಖ್ಯೆ ಅಥವಾ ಪ್ಯಾನ್ ಅಥವಾ ಮೊಬೈಲ್ ಸಾಧನೆಯ ನಕಲು ಮಾಡದೆ, ಹೊಸ ಪೇಜ್ಯಾಪ್ ಪಿಪಿಐ ಖಾತೆಯೊಂದನ್ನು ತೆರೆಯುವಂತೆ ಸೂಚಿಸುತ್ತದೆ.

18.4 ಪೇಜ್ಯಾಪ್ಪನ್ನು ಬಳಸಿದಾಗ, ಬ್ಯಾಂಕಿನ ತಪ್ಪಿಲ್ಲದೆ, ಗ್ರಾಹಕರು ಅನುಭವಿಸಬೇಕಾಗಬಹುದಾದ ಯಾವುದೇ ರೀತಿಯ ಹಾನಿಗಳು, ನೀಡಬೇಕಾದ ಪರಿಹಾರ, ತೆರಬೇಕಾದ ಜುಲ್ಮಾನೆ(ದಂಡ), ಮತ್ತು ಮರುಪಾವತಿಗಳಿಗೆ ಬ್ಯಾಂಕು ಬಾಧ್ಯತೆ ಹೊಂದಿರುವುದಿಲ್ಲವೆಂದು ಗ್ರಾಹಕರು ಒಪ್ಪಿರುತ್ತಾರೆ.

18.5 ಯಾವುದೇ ಶುಲ್ಕ ಅಥವಾ ವೆಚ್ಚಗಳ, ವ್ಯವಹಾರಗಳನ್ನು ಪೂರ್ಣಗೊಳಿಸುವ, ಅಥವಾ ಈ ನಿಯಮ ಮತ್ತು ಷರತ್ತುಗಳ ದಾಖಲೆ ಪ್ರಕಾರ ಗ್ರಾಹಕರು ಪಾವತಿಸಬೇಕಾದ ಹಣ ಮುಂತಾದ ವಿಷಯದಲ್ಲಿ ಗ್ರಾಹಕರಿಗೆ ಯಾವುದೇ ಸಂದರ್ಭದಲ್ಲೂ ವಿನಾಯಿತಿ ಇರುವುದಿಲ್ಲವೆಂದು ಗ್ರಾಹಕರು ಒಪ್ಪಿರುತ್ತಾರೆ.

**19 ಪೇಜ್ಯಾಪ್ಪನ್ನು ಬಳಸಲು ಪರವಾನಗಿ**

19.1 ಪೇಜ್ಯಾಪ್ ಅಪ್ಲಿಕೇಷನ್ನನ್ನು ಬಳಸಲು ಇರುವ ಗ್ರಾಹಕರ ಪರವಾನಿಗಿ ಸೀಮಿತವಾದದ್ದು. ನಿಯಮ ಮತ್ತು ಷರತ್ತುಗಳ ದಾಖಲೆಯಲ್ಲಿರುವಂತೆ, ಗ್ರಾಹಕರಿಗೆ ಒಂದು ವಿಶೇಷವಲ್ಲದ, ರದ್ದುಪಡಿಸಲಾಗದ, ವರ್ಗಾಯಿಸಲಾಗದ ಪರವಾನಿಗೆಯನ್ನು ನೀಡಲಾಗಿದೆ. ಗ್ರಾಹಕರು ಈ ಮುಂದೆ ಹೇಳುವುದನ್ನು ಮಾಡುವುದಿಲ್ಲ ಅಥವಾ ಯಾವುದೇ ಮೂರನೇ ವ್ಯಕ್ತಿಗೆ ಮಾಡಲು ಅನುಮತಿ ನೀಡುವುದಿಲ್ಲ: **(i)** ಉಪಪರವಾನಿಗಿ, **(ii)** ಮರುಮಾರಾಟ **(iii)** ಮಾರ್ಪಾಡು **(iv)** ನಕಲು **(v)** ಪ್ರಕಟಣೆ **(vi)** ಸಾರ್ವಜನಿಕವಾಗಿ ಪ್ರದರ್ಶನ **(vii)** ಅಪ್‌ಲೋಡ್ **(viii)** ರವಾನಿಸುವುದು **(ix)** ಪೋಸ್ಟ್ **(x)** ಹಂಚುವುದು **(xi)** ಈ ನಿಯಮ ಮತ್ತು ಷರತ್ತುಗಳ ದಾಖಲೆಯಲ್ಲಿ ಗ್ರಾಹಕರಿಗೆ ನೀಡಲಾಗಿರುವ ಹಕ್ಕುಗಳನ್ನು ವರ್ಗಾಯಿಸುವುದು **(xii)** ಇವುಗಳ ಸುತ್ತ ಕೆಲಸ ಮಾಡುವುದು ಅಥವಾ ಹಸ್ತಮುಖೇನ/ತಾಂತ್ರಿಕತೆ ಮತ್ತು ಸಲಕರಣೆಗಳನ್ನು ಬಳಸಿಕೊಂಡು ಈ ಅಪ್ಲಿಕೇಷನ್ನಿನ ತಾಂತ್ರಿಕ ಕೊರತೆಗಳನ್ನು ಬೈಪಾಸ್ ಮಾಡುವುದು **(xiii)** ಮರುಮಾರಾಟ, ಬಾಡಿಗೆಗೆ ನೀಡುವುದು, ಲೀಸ್, ಟೈಮ್‌ಶೇರ್ (ಸೀಮಿತ ಅವಧಿಯಲ್ಲಿ ಪರಸ್ಪರ ಹಂಚಿಕೊಳ್ಳುವುದು), ಅಥವಾ ಸೇವಾ ಮೇಜು ಒಪ್ಪಂದ (ಸರ್ವಿಸ್ ಬ್ಯೂರೋ ಅಗ್ರೀಮೆಂಟ್) ಮೂಲಕ ಮೂರನೇ ವ್ಯಕ್ತಿ/ಪಕ್ಷದವರು ಲಾಭ ಪಡೆಯಲು ಅನುಮತಿಸುವುದು **(xv)** ಈ ನಿಯಮ ಮತ್ತು ಷರತ್ತುಗಳ ದಾಖಲೆಯಲ್ಲಿ ಅನುಮತಿಸಿರದ ಯಾವುದೇ ಕಾರ್ಯವನ್ನು, ಮತ್ತು/ಅಥವಾ ಗ್ರಾಹಕರಿಂದ ಅಥವಾ ಬೇರೊಬ್ಬರಿಂದ ಪೇಜ್ಯಾಪ್ ಅಪ್ಲಿಕೇಷನ್ನನ್ನು ಬಳಸಲು ಅನುಮತಿಸಿರುವ ನಿಯಮ ಮತ್ತು ಷರತ್ತುಗಳನ್ನು ಉದ್ದೇಶಪೂರ್ವಕವಾಗಿ ಅಥವಾ ಆಕಸ್ಮಿಕವಾಗಿ ಇಲ್ಲಿರುವ ನಿಯಮ ಷರತ್ತುಗಳ ಮೇಲೆ ದುಷ್ಪರಿಣಾಮ ಬೀರುವಂತಹ ಕಾರ್ಯವನ್ನು ಮಾಡುವುದಿಲ್ಲ. **(xvi)** ಪೇಜ್ಯಾಪ್‌ನಲ್ಲಿರುವ ಯಾವುದೇ ಮಾಹಿತಿ/ತಾಂತ್ರಿಕ ವಿಷಯ, ತಾಂತ್ರಿಕ ವಿಶೇಷತೆ, ನ್ಯೂನತೆ, ವಿನ್ಯಾಸಗಳು, ಸಾಮಗ್ರಿಗಳು, ಪರಿಕಲ್ಪನೆಗಳು, ಪ್ರಕ್ರಿಯೆಗಳು, ಬಣ್ಣ ಅಥವಾ ವಿನ್ಯಾಸದ ಥೀಮ್‌ಗಳು, ಪಠ್ಯಗಳು, ಲಿಪಿಗಳು (ಫಾಂಟ್ಸ್), ಭಾವಚಿತ್ರಗಳು, ಐಕಾನ್‌ಗಳು, ವ್ಯಾವಹಾರಿಕ ಅನುಕ್ರಮಗಳು, ಬಳಕೆದಾರರ ಇಂಟರ್‌ಫೇಸ್‌ಗಳು, ಅಥವಾ ಬಳಕೆದಾರರ ಅನುಭವಗಳಿಗೆ ಸಂಬಂಧಿಸಿದವುಗಳನ್ನು ಡೀಕಂಪೈಲ್ (ಜೋಡಣೆ ವಿರೂಪಗೊಳಿಸುವುದು), ಡಿಸ್‌ಅಸೆಂಬಲ್, ಅಥವಾ ತಾಂತ್ರಿಕತೆಯನ್ನು ಬುಡಮೇಲು ಮಾಡುವುದು, ವಿಸ್ತರಣೆಗಳನ್ನು ಅಭಿವೃದ್ಧಿಪಡಿಸುವುದು ಅಥವಾ ಉತ್ಪನ್ನಮಾಡುವ ಕಾರ್ಯಗಳು (xvii) ಮೂರನೆಯವರ ಯಾವುದೇ ಹಕ್ಕುಗಳನ್ನು, ಅಸೀಮ ಗೌಪ್ಯತೆ ಹಕ್ಕುಗಳನ್ನೊಳಗೊಂಡಂತೆ, ಉಲ್ಲಂಘಿಸುವುದು. ಮುಂದುವರೆದು, ಗ್ರಾಹಕರು ಅಸಮಾನವಾದ ಅಥವಾ ಅಸಾಧ್ಯವಾದ ಲೋಡನ್ನು ವೃದ್ಧಿಸುವ ಮೂಲಕ, ಅನುಮತಿಸಿರುವ ಬಳಕೆ ಸಾಧನದಲ್ಲಿ ದುರ್ಬಲತೆಗಳನ್ನು ಸೃಷ್ಟಿಸುವುದು, ಸೇವಾ ಮೂಲಸೌಕರ್ಯಗಳು, ಪೇಜ್ಯಾಪ್‌ನಲ್ಲಿ ಸೇವಾ ನಿರಾಕರಣೆಯ ಸನ್ನಿವೇಶವನ್ನು ಸೃಷ್ಟಿಸುವಂತಹ ಯಾವುದೇ ಕಾರ್ಯವನ್ನು ಗ್ರಾಹಕರು ಮಾಡುವಂತಿಲ್ಲ. ಬ್ಯಾಂಕು ಶೀರ್ಷಿಕೆ, ಕಾಪಿರೈಟ್, ಮತ್ತು ಪೇಜ್ಯಾಪ್ ಮೇಲಿರುವ ಇತರ ಜಾಗತಿಕ ಬೌದ್ಧಿಕ ಸ್ವತ್ತಿನ ಮೇಲಿರುವ ಹಕ್ಕುಗಳು, ಎಲ್ಲ ಪೇಟೆಂಟ್ ಹಕ್ಕು, ಕಾಪರೈಟ್ಸ್, ಟ್ರೇಡ್ ಮಾರ್ಕ್ಸ್, ಸೇವಾ ಚಿಹ್ನೆಗಳು, ಗೌಪ್ಯ ಹಕ್ಕುಗಳು, ಮತ್ತು ಸೇವಾ ಅಂಕೆಗಳನ್ನೊಳಗೊಂಡಂತೆ, ಬ್ಯಾಂಕಿನದ್ದೇ ಮಾಲೀಕತ್ವ. ಈ ಹಕ್ಕುಗಳ ಯಾವುದೇ ರೀತಿಯ ಉಲ್ಲಂಘನೆಯು ಈ ನಿಯಮ ಮತ್ತು ಷರತ್ತುಗಳ ದಾಖಲೆಯನ್ನು ಉಲ್ಲಂಘಿಸಿದಂತೆ. ಇಲ್ಲಿರುವ ಯಾವುದೇ ಅಂಶಗಳು ಅಥವಾ ಪೇಜ್ಯಾಪ್ ಬಳಸಲಾರಂಭಿಸಿದ ಕಾರಣಕ್ಕಾಗಿ, ಗ್ರಾಹಕರಿಗೆ ಯಾವುದೇ ತೆರನಾದ ಹಕ್ಕುಗಳನ್ನು (ಮೇಲೆ ತಿಳಿಸಿರುವ ಸೀಮಿತ ಪರವಾನಿಗಿಯನ್ನು ಹೊರತುಪಡಿಸಿ), ಶೀರ್ಷಿಕೆ ಅಥವಾ ಆಸಕ್ತಿಯನ್ನು ಗ್ರಾಹಕರ ಪರವಾಗಿ ಉಂಟುಮಾಡಲು ಸಾಧ್ಯವಿರುವುದಿಲ್ಲ ಅಥವಾ ಯಾವುದೇ ಬೌದ್ಧಿಕ ಆಸ್ತಿಯ ಮೇಲಿನ ಹಕ್ಕುಗಳನ್ನು, ಎಲ್ಲ ಪೇಟೆಂಟ್ ಹಕ್ಕುಗಳು, ಈ ಸದ್ಯಕ್ಕೆ ಪೇಜ್ಯಾಪ್‌ನಲ್ಲಿ ಲಭಿಸುತ್ತಿರುವ ಮತ್ತು ಭವಿಷ್ಯದಲ್ಲಿ ಸೃಷ್ಟಿಯಾಗಬಹು-ದಾದವುಗಳನ್ನು ಅಥವಾ ಯಾವುದೆ ಡ್ಯಾಟ ಅಥವಾ ಈಗಿರುವ ಅಥವಾ ಅದರ ಬಳಕೆಯಿಂದ ಮುಂದೆ ಉತ್ಪನ್ನವಾಗುವಂತಹವುಗಳನ್ನು ಒಳಗೊಂಡಂತೆ, ಕಾಪಿರೈಟ್ಸ್, ಟ್ರೇಡ್‌ಮಾರ್ಕ್‌ಗಳು. ಸೇವಾ ಅಂಕಗಳು, ವ್ಯವಹಾರ ಗೌಪ್ಯತೆ ಹಕ್ಕುಗಳು ಗ್ರಾಹಕರಿಗೆ ದೊರೆಯುವುದಿಲ್ಲ.

**20. ನಷ್ಟ ಪರಿಹಾರ**

20.1 ಗ್ರಾಹಕರು ಬ್ಯಾಂಕ್‌ಗಳನ್ನು, ನೀಡುವವರ್(ವಿತರಕರು), ಮತ್ತು ಸೇವೆ ನೀಡುವವರು, ಉದ್ಯೋಗಿಗಳು, ನಿರ್ದೇಶಕರು, ಏಜೆಂಟ್‌ಗಳು, ಸಹಭಾಗಿಗಳು, ಮತ್ತು ಅಧಿಕೃತ ಪ್ರತಿನಿಧಿಗಳನ್ನೊಳಗೊಂಡು, ಎಲ್ಲರಿಂದ ಯಾವುದೇ ಮತ್ತು ಎಲ್ಲ ರೀತಿಯ ಕೇಳಿಕೆಗಳು (ಕ್ಲೈಮ್ಸ್), ವೆಚ್ಚಗಳು, ನ್ಯಾಯ ತೀರ್ಪುಗಳು, ಜುಲ್ಮಾನೆಗಳು, ತೆರಿಗೆ ಮೌಲ್ಯಮಾಪನಗಳು, ಹಾನಿಗಳು, ನಷ್ಟಗಳು, ಬಡ್ಡಿಗಳು ಮತ್ತು ಖರ್ಚುಗಳು, ಸಮಂಜಸವಾದ ವಕೀಲರ ಶುಲ್ಕಗಳನ್ನೊಳಗೊಂಡಂತೆ, ಯಾವುದೇ ಕ್ಲೈಮ್ಸ್, ಲೆಕ್ಕ ಪರಿಶೋಧನೆ, ಕ್ರಮಗಳು, ವಿಚಾರಣೆಗಳು, ತನಿಖೆಗಳು, ಅಥವಾ ವ್ಯಕ್ತಿಗಳಿಂದ ಅಥವಾ ಸಂಸ್ಥೆಗಳಿಂದ, ಗ್ರಾಹಕರು ಪೇಜ್ಯಾಪ್ ಬಳಸಿದ್ದರಿಂದ ಅಥವಾ ಅವರ ಬಳಕೆಗೆ ಸಂಬಂಧಿಸಿದ, ಪೇಜ್ಯಾಪ್ ಅಪ್ಲಿಕೇಷನ್ ಸೇವೆಗಳು, ಅಥವಾ ಇತರ ಈ ನಿಯಮ ಷರತ್ತುಗಳ ದಾಖಲೆಯಲ್ಲಿರುವ ಯಾವುದೇ ಷರತ್ತುಗಳ ಉಲ್ಲಂಘನೆಯಿಂದ ಉದ್ಭವವಾಗುವ, ಯಾವುದೇ ಕೈಗೊಳ್ಳಲಾಗುವ ಕಾನೂನು ಕ್ರಮಗಳಿಗೆ ಸೀಮಿತವಾಗಿರದಂತೆ, ನಷ್ಟ ಪರಿಹಾರ ಮಾಡುವುದಾಗಿ ಒಪ್ಪಿರುತ್ತಾರೆ.

**21 ಪ್ರಾತಿನಿಧ್ಯಗಳು ಮತ್ತು ಖಾತರಿಗಳು**

**21.1** ಗ್ರಾಹಕರು ಪ್ರತಿನಿಧಿಸುವುದೇನೆಂದರೆ: (ಅ) ಗ್ರಾಹಕರು ಕನಿಷ್ಠ 18 ವರ್ಷ ತುಂಬಿರುವವರು ಮತ್ತು ಕಾನೂನಾತ್ಮಕವಾಗಿ ಒಡಂಬಡಿಕೆ ಮಾಡಿಕೊಳ್ಳಲು ಸಮರ್ಥರಾಗಿರುವರು**,** ಮತ್ತು ಈ ನಿಯಮ ಹಾಗೂ ಷರತ್ತುಗಳನ್ನು ಸಂಪೂರ್ಣವಾಗಿ ಅರ್ಥಮಾಡಿಕೊಂಡು ಮತ್ತು ತಮ್ಮ ಸ್ವಂತ ಇಚ್ಚೆಯಿಂದ ಒಪ್ಪಿಕೊಂಡಿರುತ್ತಾರೆ. (ಬ)ಪೇಜ್ಯಾಪ್ ಸೇವೆಗಳಿಗೆ ನೊಂದಾಯಿಸಿಕೊಳ್ಳಲು ಮತ್ತು ಉಪಯೋಗಿಸಲು ಅರ್ಹರಾಗಿರುವರು ಹಾಗೂ ಈ ನಿಯಮ ಮತ್ತು ಷರತ್ತುಗಳಲ್ಲಿರುವ ಎಲ್ಲ ನಿಯಮ ಮತ್ತು ಷರತ್ತುಗಳನ್ನು ಸ್ವೇಚ್ಚೆಯಿಂದ ಅಂಗೀಕರಿಸಲು ಅವಶ್ಯಕವಾದ ಹಕ್ಕು**,** ಸಾಮರ್ಥ್ಯ**,** ಬೌದ್ಧಿಕ ಮಟ್ಟ(ಅಂಡರ್ ಸ್ಟ್ಯಾಂಡಿಂಗ್) ಮತ್ತು ಶಕ್ತಿಗಳನ್ನು ಹೊಂದಿರುವರು (ಕ) ನೊಂದಾವಣೆಯ ಸಮಯದಲ್ಲಿ ಮತ್ತು ಪೇಜ್ಯಾಪ್ ಬಳಸುತ್ತಿರುವ ಎಲ್ಲ ಸಂದರ್ಭಗಳಲ್ಲೂ ಗ್ರಾಹಕರು ನೀಡಿರುವ ಮಾಹಿತಿಗಳು ಅವರ ಸ್ವಂತದ್ದೇ ಆಗಿದ್ದು ಅವುಗಳನ್ನು ಬಳಸಲು ಹಕ್ಕುಳ್ಳವರಾಗಿರುವರು. (ಡ) ಈ ನಿಯಮ ಮತ್ತು ಷರತ್ತುಗಳಲ್ಲಿರುವಂತೆ ಪೇಜ್ಯಾಪ್‌ಅನ್ನು ಬಳಸುವರು. (ಈ) ಈ ನಿಯಮ ಮತ್ತು ಷರತ್ತುಗಳನ್ನು ಉಲ್ಲಂಘಿಸುವಂತಹ ಯಾವುದೇ ಕಾರ್ಯವನ್ನು ಮಾಡುವುದಿಲ್ಲ**,** ಮತ್ತು (ಫ) ಭಾರತದಲ್ಲಿ ಅನ್ವಯವಾಗುವ ಯಾವುದೇ ಬ್ಯಾಂಕಿನಲ್ಲಿ ಖಾತೆಯನ್ನು ಬಳಸಲು ಯಾವುದೇ ರೀತಿಯ ಖಾತೆಯನ್ನು ತೆರೆಯಲು**,** ಕ್ರಿಯೆಗೊಳಿಸಲು ಮತ್ತು ನಿರ್ವಹಿಸಲು ಹಾಗೂ ಬ್ಯಾಂಕಿಂಗ್ ಸೇವೆಗಳನ್ನು ಅನುಭವಿಸಲು ಗ್ರಾಹಕರ ಮೇಲೆ ಯಾವುದೇ ರೀತಿಯ ನಿರ್ಬಂಧಗಳಿರುವುದಿಲ್ಲ.

22 ಖಾತರಿಗಳು

ಪೇಜ್ಯಾಪ್ ಸೇವೆಗಳನ್ನು "ಹೇಗಿವೆಯೋ ಹಾಗೆ" ಮತ್ತು "ಯಾವಾಗ ಲಭ್ಯವೋ" ಎಂಬ ಆಧಾರದ ಮೇಲೆ ನೀಡಲಾಗಿರುತ್ತದೆ. ಪೇಜ್ಯಾಪ್ ಅಪ್ಲಿಕೇಷನ್ ಮತ್ತು ಪೇಜ್ಯಾಪ್ ಪಿಪಿಐಗಳ ಬಳಕೆಯು ಗ್ರಾಹಕರದ್ದೇ ಜವಾಬ್ದಾರಿಯಾಗಿರುತ್ತದೆ ಮತ್ತು ಪೇಜ್ಯಾಪ್ ಪಿಪಿಐಅನ್ನು ಯಾವುದೇ ರೀತಿಯ ಖಾತರಿಗಳೊಂದಿಗೆ ನೀಡಲಾಗಿದೆ, ನೇರಾರ್ಥವಾಗಿ ಅಥವಾ ಒಳಾರ್ಥಗಳನ್ನೂ ಸೇರಿ ಅಥವಾ ಇಲ್ಲದೆಯೇ, ಅನ್ವಯವಾಗುವ ಎಲ್ಲ ಕಾನೂನುಗಳ ಪ್ರಕಾರ ಅನುಮತಿ ಇರುವಂತೆ, ಎಷ್ಟು ಸಾಧ್ಯವೋ ಅಷ್ಟಕ್ಕೆ, ಮುಂಬರುವುದನ್ನೊಳಗೊಂಡಂತೆ, ಆದರೂ ಅವುಗಳಿಗೆ ಸೀಮಿತವಾಗಿರದೆ, (ಅ) ವ್ಯಾಪಾರಸಮರ್ಥವಾದ ಎಲ್ಲ ಸೂಚಿತ ಅರ್ಥಗಳನ್ವಯ. (ಬ) ಒಂದು ನಿಗದಿತ ಏಕೈಕ ಉದ್ದೇಶಕ್ಕಾಗಿ ಅನ್ವಯಿಸುವುದು, ಅಥವಾ ಉಲ್ಲಂಘನೆ ಅಲ್ಲದಿರುವುದು. ಗ್ರಾಹಕರು ಪೇಜ್ಯಾಪ್‌ನಿಂದ, ಅಥವಾ ಅದರ ವಿತರಕರು ಅಥವಾ ತತ್ಸಮಾನ ಸೇವೆಗಳನ್ನು ನೀಡುವವರಿಂದ ಯಾವುದೇ ಮೌಖಿಕ ಅಥವಾ ಲಿಖಿತ ಸಲಹೆ ಅಥವಾ ಮಾಹಿತಿ ಪಡೆದಿರುವುದು ಇಲ್ಲಿ ಸ್ಪಷ್ಟವಾಗಿ ಹೇಳಿರದಿದ್ದರೂ ಯಾವುದೇ ವಾರಂಟಿಯನ್ನು ನೀಡುವುದಿಲ್ಲ. ಬ್ಯಾಂಕ್, ನೀಡುವವರು, ಸಂಸ್ಕರಿಸುವವರು, ಅದನ್ನು ಕೊಡುವವರು ನಮೂದಿತ ಪಠ್ಯವು ಸರಿಯಾಗಿದೆ, ನಂಬಲರ್ಹವಾಗಿದೆ, ತಪ್ಪುಗಳಿಲ್ಲ, ಎಂದು ಖಾತರಿ ನೀಡಲಾರರು; ಹಾಗೂ ಪೇಜ್ಯಾಪ್ ಅಪ್ಲಿಕೇಷನ್ ಮತ್ತು ಪೇಜ್ಯಾಪ್ ಪಿಪಿಐ ಗ್ರಾಹಕರ ಅವಶ್ಯಕತೆಗಳನ್ನು ಪೂರೈಸುತ್ತದೆ ಎಂದು; ಯಾವುದೇ ಲೋಪದೋಷಗಳು ಅಥವಾ ತಪ್ಪುಗಳಿದ್ದರೆ ಅವುಗಳನ್ನು ಸರಿಪಡಿಸಲಾಗುತ್ತದೆ ಎಂದು; ಪೇಜ್ಯಾಪ್ ಸೇವೆಗಳು ಯಾವುದೇ ಸಮಯದಲ್ಲಾಗಲಿ, ಸ್ಥಳದಲ್ಲಾಗಲೀ, ಅನಿರ್ಬಂಧಿತವಾಗಿ ಅಥವಾ ಸುರಕ್ಷಿತವಾಗಿ ದೊರೆಯುತ್ತದೆ ಎಂದು; ಅಥವಾ ಪೇಜ್ಯಾಪ್ ಯಾವುದೇ ವೈರಸ್‌ಗಳಿಂದ ಅಥವಾ ಇತರ ಅಪಾಯಕರ ಘಟಕಗಳಿಂದ ಮುಕ್ತವಾಗಿದೆ ಎಂದು. ಪೇಜ್ಯಾಪ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಲಾದ ಅಥವಾ ಬೇರೆ ವಿಧದಲ್ಲಿ ಪಡೆಯಲಾದ ಯಾವುದೇ ವಿಷಯಗಳಿಗೆ ಗ್ರಾಹಕರೇ ಜವಾಬ್ದಾರರು ಮತ್ತು ಗ್ರಾಹಕರ ಯಾವುದೇ ಆಸ್ತಿ/ಸ್ವತ್ತುಗಳಿಗೆ ಅದರಿಂದಾಗಬಹುದಾದ ತೊಂದರೆ, ಕಷ್ಟ, ನಷ್ಟಗಳಿಗೆಲ್ಲ ಗ್ರಾಹಕರೇ ಜವಾಬ್ದಾರರು. ಯಾವುದೇ ಜಾಹೀರಾತು ನೀಡಿದ ಅಥವಾ ವ್ಯಾಪಾರಿಗಳಿಂದ ಕೊಡಲ್ಪಟ್ಟ ಉತ್ಪನ್ನ ಅಥವಾ ಸೇವೆಗಳಿಗೆ ಬ್ಯಾಂಕು ಯಾವುದೇ ರೀತಿಯ ಖಾತರಿ ನೀಡುವುದಿಲ್ಲ, ಅನುಮೋದಿಸುವುದಿಲ್ಲ, ಗ್ಯಾರಂಟಿ ಕೊಡುವುದಿಲ್ಲ, ಅಥವಾ ತತ್ಸಂಬಂಧವಾದ ಯಾವುದೇ ಜವಾಬ್ದಾರಿಯನ್ನು ವಹಿಸಿಕೊಳ್ಳುವುದಿಲ್ಲ ಮತ್ತು ಗ್ರಾಹಕರು ಹಾಗೂ ಉತ್ಪನ್ನ ಮತ್ತು ಸೇವೆಗಳನ್ನು ನೀಡುವ ಮೂರನೆ ಪಕ್ಷದವರ ನಡುವೆ ನಡೆದ ವ್ಯವಹಾರಗಳಿಗೆ ಅಥವಾ ಹೈಪರ್ ಲಿಂಕ್ ಆಗಿರುವ ವೆಬ್‌ಸೈಟ್ ಅಥವಾ ಸೇವೆಗಳಿಗೆ, ಅಥವಾ ಯಾವುದೇ ಬ್ಯಾನರ್ ಅಥವಾ ಜಾಹೀರಾತುಗಳಿಂದ ಪ್ರಭಾವಿತರಾಗಿ ಪಡೆಯಲಾದ ಉತ್ಪನ್ನ ಹಾಗೂ ಸೇವೆಗಳಿಗೆ ಬ್ಯಾಂಕು ಸಹಭಾಗಿಯಾಗುವುದಿಲ್ಲ ಅಥವಾ ಅವುಗಳ ಬಗ್ಗೆ ಕಾಳಜಿ ವಹಿಸುವುದಿಲ್ಲ. ಎಷ್ಟು ಸಾಧ್ಯವೋ ಅಷ್ಟುರಮಟ್ಟಿಗೆಕಾನೂನಾತ್ಮಕವಾಗಿ ಅನುಮತಿಯಿರುವ, ಯಾವುದೇ ಕಾರಣದಿಂದ ಬ್ಯಾಂಕು, ಅದರ ಸಂಸ್ಕಾರ ಮಾಡುವವರು, ಪೂರೈಕೆದಾರರು, ಅಥವಾ ಅದರ ಪರವಾನಿಗೆ ಹೊಂದಿರುವವರ್, (ಅಥವಾ ಅವುಗಳಿಗೆ ಸಂಬಂಧಿಸಿದ ಸಹಭಾಗಿಗಳು, ಏಜೆಂಟ್‌ಗಳು, ನಿರ್ದೇಶಕರು, ಮತ್ತು ಉದ್ಯೋಗಿಗಳ್) ಯಾವುದೇ ನೇರ, ಅಪರೋಕ್ಷ, ಶಿಕ್ಷಾರ್ಹ, ಆಕಸ್ಮಿಕ, ವಿಶೇಷ, ಪರಿಣಾಮಾತ್ಮಕ, ಅಥವಾ ಅತಿಶಯವಾದ ಹಾನಿಗಳಿಗೆ, ಲಾಭಾಂಶ ನಷ್ಟವನ್ನೊಳಗೊಂಡಂತೆ ಆದರೆ ಅದಕ್ಕಷ್ಟೇ ಸೀಮಿತವಾಗಿರದ, ಗುಡ್‌ವಿಲ್ (ಸದ್ಭಾವನೆ), ಉಪಯೋಗ, ಡ್ಯಾಟಾ ಅಥವಾ ಇತರ ಭಾವನಾತ್ಮಕ ನಷ್ಟಗಳು, ಬ್ಯಾಂಕ್‌ಅನ್ನು ಬಳಸುವುದರಿಂದ, ಅಥವಾ ಬಳಸಲಾಗದ್ದರಿಂದ, ಅಥವಾ ಬ್ಯಾಂಕು ಇಲ್ಲದಿರುವುದರಿಂದಾಗುವ ಯಾವುದೇ ಪರಿಣಾಮ ಅಥವಾ ದುಷ್ಪರಿಣಾಮಗಳಿಗೆ ಬ್ಯಾಂಕ್ ಬಾಧ್ಯರಾಗುವುದಿಲ್ಲ. ಯಾವುದೇ ಸಂದರ್ಭದಲ್ಲೂ ಗ್ರಾಹಕರ ಪೇಜ್ಯಾಪ್ ಪಿಪಿಐನ, ಅಥವಾ ಅದರಲ್ಲಿರುವ ಮಾಹಿತಿಗಳ ಹ್ಯಾಕ್ ಆದುದರ ಪರಿಣಾಮವಾಗಿ, ತಿದ್ದುವುದರಿಂದ, ಅಥವಾ ಅನಧಿಕೃತವಾಗಿ ಪ್ರವೇಶ ಪಡೆದ ಅಥವಾ ಬಳಸಿದ್ದರಿಂದ ಗ್ರಾಹಕರಿಗಾಗಬಹುದಾದ/ಆಗಿರುವ ಹಾನಿ, ನಷ್ಟ, ಮುಂತಾದವುಗಳಿಗೆ ಬ್ಯಾಂಕು ಯಾವುದೇ ರೀತಿಯ ಬಾಧ್ಯರಾಗುವುದಿಲ್ಲ.

23 ಬಾಧ್ಯತೆ ಮತ್ತು ಹಾನಿಗಳ ಇತಿಮಿತಿ

23.1 ಎಷ್ಟು ಸಾಧ್ಯವೋ ಅಷ್ಟುರಮಟ್ಟಿಗೆ ಕಾನೂನಾತ್ಮಕವಾಗಿ ಅನುಮತಿಯಿರುವ, ಯಾವುದೇ ಕಾರಣದಿಂದ ಬ್ಯಾಂಕು, ನೀಡುವವರು, ಅದರ ಸಂಸ್ಕಾರಮಾಡುವವರು, ಪೂರೈಕೆದಾರರು, ಅಥವಾ ಅದರ ಪರವಾನಿಗೆ ಹೊಂದಿರುವವರ ಬಾಧ್ಯತೆಗಳನ್ನು ಈ ಮುಂದೆ ತಿಳಿಸುವ ಸಂದರ್ಭಗಳಲ್ಲಿ ಊಹಿಸಿಕೊಳ್ಳುವುದಿಲ್ಲ ಅಥವಾ ಜವಾಬ್ದಾರಿಗಳನ್ನುತೆಗೆದುಕೊಳ್ಳುವುದಿಲ್ಲ: (i) ವಿಷಯ ನಿರೂಪಣೆಯಲ್ಲಿರುವ /ಇರಬಹುದಾದ ತಪ್ಪುಗಳು, ದೋಷಗಳು, ಅಥವಾ ಅಸಮರ್ಪಕತೆ; (ii) ಪೇಜ್ಯಾಪ್ ಬಳಕೆಗೆ ದೊರೆತ ಅವಕಾಶ ಅಥವಾ ಅದರ ಬಳಕೆಯಿಂದ ಗ್ರಾಹಕರಿಗಾಗುವ ಯಾವುದೇ ರೀತಿಯ ಅಥವಾ ಗಾತ್ರದ ವೈಯುಕ್ತಿಕ ಗಾಯಗಳು ಅಥವಾ ಆಸ್ತಿ ಹಾನಿ (iii) ಪೇಜ್ಯಾಪ್ ಸುರಕ್ಷಿತ ಸೇವೆಗಳು ಮತ್ತು/ಅಥವಾ ಯಾವುದೇ ಅಥವಾ ಅಲ್ಲಿ ಶೇಖರಿಸಲಾಗಿರುವ ಎಲ್ಲ ಮಾಹಿತಿಗಳ ದುರ್ಬಳಕೆ; (iv) ಪೇಜ್ಯಾಪ್ ಅಪ್ಲಿಕೇಷನ್ ಮತ್ತು ಪೇಜ್ಯಾಪ್ ಪಿಪಿಐಗಳಿಗೆ ಅಥವಾ ಅವುಗಳಿಂದ ಉದ್ಭವಿಸುವ ಯಾವುದೇ ಅಡಚಣೆಗಳು ಅಥವಾ ಪ್ರಸರಣ ಸ್ಥಗಿತಗೊಳ್ಳುವುದು (v) ಮೂರನೇ ಪಕ್ಷದವರಿಂದ ಪೇಜ್ಯಾಪ್ ಅಪ್ಲಿಕೇಷನ್ನಿಗೆ ಅಥವಾ ಅದರ ಮೂಲಕ ಪ್ರಸರಣವಾಗುವ ಯಾವುದೇ ಕ್ರಿಮಿಗಳು (ಬಗ್ಸ್), ವೈರಸ್‌ಗಳು, ಟ್ರೋಜನ್ ಕುದುರೆಗಳು, ಅಥವಾ ಅದರಂತಿರುವ ಕಂಟಕಳು ಉತ್ಪನ್ನವಾದಾಗ; (vi) ಪೇಜ್ಯಾಪ್ ಅಪ್ಲಿಕೇಷನ್‌ನಲ್ಲಿ ಹಾಕಲಾದ, ಈಮೈಲ್ ಮೂಲಕ ಕಳುಹಿಸಲಾದ, ಪ್ರಸರಣ ಮಾಡಿದ, ಅಥವಾ ಗ್ರಾಹಕರಿ ಇತರ ಯಾವುದೇ ರೀತಿಯಲ್ಲಿ ದೊರೆಯುವಂತೆ ಮಾಡಲಾದ ವಿಷಯ, ನಿರೂಪಣೆಯಲ್ಲಾದ ಯಾವುದೇ ತಪ್ಪುಗಳು, ಅಥವಾ ಲೋಪಗಳಿಂದ ಉಂಟಾಗುವ ಯಾವುದೇ ನಷ್ಟ ಅಥವಾ ಅನುಭವಿಸಬೇಕಾಗುವ ಹಾನಿಗಳು, ಮತ್ತು/ಅಥವಾ (vii) ಯಾವುದೇ ಮೂರನೆ ಪಕ್ಷದವರ ಬಳಕೆದಾರರ ನಿರೂಪಣೆ (ಕಂಟೆಂಟ್) ಅಥವಾ ಮಾನಹಾನಿಕರ, ಆಪಾದಿಸುವ, ಅಥವಾ ಅನ್ಯೆತಿಕ ನಡವಳಿಕೆ.

23.2 ಗ್ರಾಹಕರ ಯಾವುದೇ ಹೇಳಿಕೆಗಳಿಗೆ (ಕ್ಲೈಮ್ಸ್), ಪ್ರಕ್ರಿಯೆಗಳು, ಬಾಧ್ಯತೆಗಳು, ಕಟ್ಟುಪಾಡುಗಳು, ಹಾನಿಗಳು, ನಷ್ಟಗಳು ಅಥವಾ ಐಎನ್‌ಆರ್ (ಭಾರತೀಯ ರುಪಾಯಿ) 500/- (ಐನೂರು ರೂಪಾಯಿಗಳು ಮಾತ್ರ) ಮೇಲ್ಪಟ್ಟ ವೆಚ್ಚಗಳಿಗೆ ಯಾವುದೇ ಕಾರಣಕ್ಕೂ, ಪೇಜ್ಯಾಪ್, ನೀಡುವವರು, ಪ್ರತಿನಿಧಿಗಳು, ಪೂರೈಕೆದಾರರು, ಅಥವಾ ಪರವಾನಿಗೆ ಹೊಂದಿರುವ ಅವರು (ಅಥವಾ ಅವರಿಗೆ ಸಂಬಂಧಿಸಿದ ಸಹಭಾಗಿಗಳು, ಏಜೆಂಟ್‌ಗಳು, ನಿರ್ದೇಶಕರು, ಮತ್ತು ಉದ್ಯೋಗಿಗಳು/ಸಿಬ್ಬಂದಿಗಳು) ಬಾಧ್ಯರಾಗುವುದಿಲ್ಲ.

23.3 ಆಪಾದಿಸಲಾದ ಬಾಧ್ಯತೆಯು ಒಪ್ಪಂದ, ಟಾರ್ಟ್, ಅಜಾಗರೂಕತೆ, ಅನಿವಾರ್ಯ ಬಾಧ್ಯತೆ, ಅಥವಾ ಇನ್ನಿತರ ಯಾವುದೇ ಆಧಾರದ ಮೇಲೆ, ಪೂರ್ವಭಾವಿಯಾಗಿ ಬ್ಯಾಂಕಿಗೆ ಹಾನಿಯಾಗುವ ಸಾಧ್ಯತೆಯ ಬಗ್ಗೆ ಸೂಚನೆ ದೊರೆತಿದ್ದ ಪಕ್ಷದಲ್ಲೂ, ಈ ಬಾಧ್ಯತೆಮೇಲಿರುವ ಇತಿಮಿತಿಗಳ ಅಂಶಗಳು ಅನ್ವಯವಾಗುತ್ತವೆ.

23.4 ಪೇಜ್ಯಾಪ್‌ನ ನಿಯಂತ್ರಣ ಮತ್ತು ಚಾಲನೆಗಳನ್ನು ಭಾರತದಲ್ಲಿ ದೊರೆಯುವ ಸೌಲಭ್ಯಗಳಿಂದ ಕಾರ್ಯಗತಗೊಳಿಸಲಾಗುತ್ತಿದೆ. ಪೇಜ್ಯಾಪ್ ಇತರ ಸ್ಥಳಗಳಲ್ಲಿಯೂ ಸೂಕ್ತವೆಂದು ಅಥವಾ ಲಭ್ಯವಿದೆ ಎಂದಾಗಲೀ ಬ್ಯಾಂಕು ಹೇಳಿಕೆಗಳನ್ನು ನೀಡಿರುವುದಿಲ್ಲ. ಇತರ ವ್ಯಾಪ್ತಿಪ್ರದೇಶಗಳಲ್ಲಿ ಪೇಜ್ಯಾಪ್‌ಅನ್ನು ಬಳಸಲು ಪ್ರಯತ್ನಿಸಿ ಸಫಲರಾಗಿದ್ದಲ್ಲಿ, ಅದು ಅವರದೇ ಸ್ವ-ಇಚ್ಛೆಯಂತೆ. ಅಲ್ಲದೇ,ಹಾಗೆ ಬಳಸುತ್ತಿದ್ದಲ್ಲಿ, ಆಯಾ ಪ್ರದೇಶದಲ್ಲಿ ಭಾರತ ಗಣರಾಜ್ಯದಲ್ಲಿ ಅನ್ವಯವಾಗುವ ಕಾನೂನುಗಳನ್ನು, ಪ್ರಾದೇಶಿಕ ಕಾನೂನುಗಳು, ನಿಯಮಗಳನ್ನು, ಆಯಾತ, ನಿರ್ಯಾತ ಕ್ರಮಗಳನ್ನೊಳಗೊಂಡಂತೆ ಆದರೆ ಅಷ್ಟಕ್ಕೆ ಸೀಮಿತವಾಗಿರದೆ, ಪಾಲಿಸತಕ್ಕದ್ದು. ಪೆಜ್ಯಾಪ್‌ನಲ್ಲಿ ಕಾಣಿಸಿದ ಎಲ್ಲ ಉತ್ಪನ್ನಗಳೂ, ವ್ಯತಿರಿಕ್ತವಾಗಿ ಹೇಳಿರದ ಸಂದರ್ಭವನ್ನು ಹೊರತುಪಡಿಸಿ, ವ್ಯಕ್ತಿಗಳಿಗೆ, ಸಂಸ್ಥೆಗಳಿಗೆ, ಅಥವಾ ಭಾರತದಲ್ಲಿರುವ ಇತರ ಸಂಸ್ಥಾನಗಳಿಗೆ ಮಾತ್ರ ನಿರ್ದೇಶಿಸಲ್ಪಟ್ಟವಾಗಿರುತ್ತವೆ. ಮೇಲೆ ನಮೂದಿಸಲಾಗಿರುವ ಯಾವುದೇ ಅಂಶಗಳ ವಿರೋಧಾರ್ಥ ನುಡಿ/ವಾಕ್ಯಗಳು ಎಲ್ಲಾದರೂ ಇರುವುದನ್ನು ಕಡೆಗಣಿಸಿ, ಗ್ರಾಹಕರು ಪೇಜ್ಯಾಪ್ ಪಿಪಿಐಅನ್ನು ಗಡಿ ದಾಟಿದ ವ್ಯವಹಾರಗಳನ್ನು ನಡೆಸುವಂತಿಲ್ಲವೆಂದು ಒಪ್ಪಿರುತ್ತಾರೆ.

24 ದೂರು ಪರಿಹಾರದ ಚೌಕಟ್ಟು ಮತ್ತು ಗ್ರಾಹಕರ ಸುರಕ್ಷೆ.

24.1 ಗ್ರಾಹಕರು ಮತ್ತು ಬ್ಯಾಂಕಿನ ನಡುವೆ ಉದ್ಭವಿಸುವ **"ವಿವಾದ"** ವನ್ನು ಈ ನಿಯಮ ಮತ್ತು ಷರತ್ತುಗಳ ದಾಖಲೆಯ ಸಲುವಾಗಿ, ಯಾವುದೇ ಕೇಳಿಕೆಗಳು (ಕ್ಲೈಮ್ಸ್), ವಿವಾದಾತ್ಮಕ ಚರ್ಚೆ, ಅಥವಾ ಭಿನ್ನಾಭಿಪ್ರಾಯಗಳು (ಒಪ್ಪಂದಕ್ಕೆ, ಹಿಂಸೆ, ಸಮಾನತೆ, ಶಾಸನಬದ್ಧತೆ, ಅಥವಾ ಇತರೆ – ಈ ನಿಯಮ ಮತ್ತು ಷರತ್ತುಗಳ ದಾಖಲೆಯಲ್ಲಿರುವ ಅಂಶಗಳಿಗೆ ಸಂಬಂಧಿಸಿದಂತೆ ಆದರೆ ಅದಕ್ಕೇ ಸೀಮಿತವಾಗಿರದೆ) {ಅವುಗಳ ಉಲ್ಲಂಘನೆ, ಮುಕ್ತಾಯ/ಅಂತ್ಯ, ವ್ಯಾಖ್ಯೆಗಳನ್ನೊಳಗೊಂಡಂತೆ}, ನಮ್ಮಿಬ್ಬರ ನಡುವಿನ ಸಂಬಂಧದಲ್ಲಿರುವ ಇತರ ವಿಷಯಗಳಿಗೆ ಸೇರಿದಂತೆ, ಪ್ಯೇಜ್ಯಾಪ್ ಜಾಹೀರಾತು, ಮತ್ತು ಪ್ಯೇಜ್ಯಾಪ್ ಸಾಫ್ಟ್‌ವೇರ್ ಅಥವಾ ಸೇವೆಗಳ ಬಳಕೆಯಲ್ಲಿ ಉದ್ಭವಿಸುವ "ವಿವಾದ"ಗಳನ್ನು ಪರಿಹರಿಸುವ ಉದ್ದೇಶದಿಂದ ಈ ವಿವರಣೆಯನ್ನೆ ನೀಡಲಾಗಿದೆ. ವಿವಾದಗಳು ಎಂದಾಕ್ಷಣ ಈ ನಿಯಮ ಮತ್ತು ಷರತ್ತುಗಳ ದಾಖಲೆ ಪ್ರಕಟಣೆಗೂ ಮುಂಚೆ ಉದ್ಭವವಾಗಿರುವ ಮತ್ತು ಈ ನಿಯಮ ಮತ್ತು ಷರತ್ತುಗಳ ದಾಖಲೆ ಮುಕ್ತಾಯಗೊಂಡ ಬಳಿಕ ಉದ್ಭವಿಸಬಹುದಾದ ಕೇಳಿಕೆಗಳಿಗೂ ಅನ್ವಯವಾಗುತ್ತದೆ.

24.2 ಗ್ರಾಹಕರಿಗೆ ತಲೆದೋರುವ ಯಾವುದೇ ವಿವಾದವನ್ನೂ ಬ್ಯಾಂಕು ಸಕಾರಾತ್ಮಕವಾಗಿ, ಪರಿಣಾಮಕಾರಿಯಾಗಿ, ಸಮಯೋಚಿತವಾಗಿ ಪರಿಹರಿಸಲು ಸದಾ ಪ್ರಯತ್ನಶೀಲವಾಗಿರುತ್ತದೆ. ಈ ಕೆಳಗೆ ನಮೂದಿಸಿರುವ ಕುಂದುಕೊರತೆ ಪರಿಹಾರ ವ್ಯವಸ್ಥೆಯನ್ನು ತಮಗೆ ಸಮಸ್ಯೆ ಕಂಡುಬಂದ ಕೂಡಲೇ, ಅಥವಾ ಕಂಡುಬಂದ ವ್ಯವಹಾರದ 60 ದಿನಗಳೊಳಗೆ ಸಂಪರ್ಕಿಸಬೇಕೆಂದು ಗ್ರಾಹಕರಲ್ಲಿ ಬ್ಯಾಂಕು ವಿನಂತಿಸಿಕೊಳ್ಳುತ್ತದೆ. ಒಂದು ವೇಳೆ ತೃಪ್ತಿಕರ ಸಮಯದೊಳಗೆ ಅಸಮಾಧಾನಗೊಂಡಿರುವ ಗ್ರಾಹಕರ ಸಮಸ್ಯೆಗೆ ಪರಿಹಾರ ದೊರೆಯದೆ ಇದ್ದಲ್ಲಿ, ಬ್ಯಾಂಕು ಯಾವುದಾದರು ಅನೌಪಚಾರಿಕ, ಅತ್ಯಲ್ಪ ಖರ್ಚಿನ ವಿವಾದ ಪರಿಹಾರ ಪ್ರಕ್ರಿಯೆಯನ್ನು ಒಪ್ಪಿಕೊಳ್ಳಲು ಸಿದ್ಧವಿರುತ್ತದೆ.

24.3 ಪೇಜ್ಯಾಪ್ ಆಪ್‌ನಲ್ಲಿ ಅದಕ್ಕೆ ಅನ್ವಯವಾಗುವ ಕುಂದುಕೊರತೆ ಪರಿಹಾರ ವ್ಯವಸ್ಥೆ ಮತ್ತು ಉಲ್ಬಣ/ಏರಿಕೆ ಲೆಕ್ಕಾಚಾರ (ಎಸ್ಕಲೇಷನ್ ಮ್ಯಾಟ್ರಿಕ್ಸ್), ಸಂಬಂಧಪಟ್ಟ ವಿವರಣೆಗಳೊಂದಿಗೆ, ನೀಡಲಾಗಿದ್ದು ಗ್ರಾಹಕರು ಪೇಜ್ಯಾಪ್ ಆಪ್‌ಗೆ ಹೋಗಿ, ಆಪ್ ಮೆನು – ಪ್ರೊಫೈಲ್ – ಗ್ರಿವನ್ಸ್-ರಿಡ್ರೆಸಲ್ ಮೇಲೆ ಕ್ಲಿಕ್ ಮಾಡುವ ಮೂಲಕ ಈ ಸೌಲಭ್ಯದ ಸದುಪಯೋಗ ಪಡೆದುಕೊಳ್ಳಬಹುದು.

24.4 ಗ್ರಾಹಕರು ಈ ಸೇವಾಸೌಲಭ್ಯವನ್ನು, ಕಾಲಕಾಲಕ್ಕೆ ಮಾಡಬಹುದಾದ ಬದಲಾವಣೆಗಳನ್ನೂ ಒಳಗೊಂಡಂತೆ, ಅಪ್‌ಡೇಟ್ ಮಾಡಿಕೊಂಡು ಇದರಲ್ಲಿರುವ ಅಂಶಗಳನ್ನು ಮನದಟ್ಟುಮಾಡಿಕೊಂಡಿರುವುದಾಗಿ ಈ ಮೂಲಕ ಪ್ರತಿಜ್ಞಾಪೂರ್ವಕವಾಗಿ ಒಪ್ಪಿಕೊಂಡಿರುತ್ತಾರೆ.

24.5 ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದ ನಿರ್ದೇಶನದಂತೆ, ತಮ್ಮ ಕುಂದುಕೊರತೆ ಪರಿಹಾರಕ್ಕಾಗಿ ಬ್ಯಾಂಕಿಂಗ್ ಓಂಬಡ್ಸ್‌ಮನ್ ಯೋಜನೆಯ ಲಾಭವನ್ನು ಪಡೆದುಕೊಳ್ಳುವುದು ಸಾಧುವೆಂದು ಒಪ್ಪಿರುತ್ತಾರೆ.

24.6 "ಬ್ಯಾಂಕಿನ ಸಮಗ್ರ ಗ್ರಾಹಕ ಸುರಕ್ಷತಾ ಸಿದ್ಧಾಂತ (ಬ್ಯಾಂಕ್ಸ್ ಓವರಾಲ್ ಕಸ್ಟಮರ್ ಪ್ರೊಟೆಕ್ಷನ್ ಪಾಲಿಸಿ)", ಕಾರ್ಡ್ ನಷ್ಟವಾದಾಗ ಅಥವಾ ಕಳುವಾದಾಗ ಅಥವಾ ಅಧಿಕಾರತ್ವ ಅಂಕಿಅಂಶಗಳು (ಅಥೆಂಟಿಕೇಷನ್ ಡ್ಯಾಟಾ) ಅಥವಾ ಯಾವುದೆ ವಂಚನೆ ಕಂಡುಬಂದಲ್ಲಿ, ಹಣದ ಮೊತ್ತ ಮತ್ತು ಪಿಪಿಐ ಹೊಂದಿಕೊಂಡಿರುವಂತೆ ಅದರ ಅನಧಿಕೃತ/ವಂಚನೆ ಪ್ರಕರಣವನ್ನು ಒಳಗೊಂಡಂತೆ, ಅವುಗಳಿಗೆ ಸಂಬಂಧಿಸಿದ ಗ್ರಾಹಕರ ಹಕ್ಕು-ಬಾಧ್ಯತೆಗಳೇನು ಎಂಬುದರ ಸಂಪೂರ್ಣ ಜ್ಞಾನ (ಇವುಗಳೆಲ್ಲ ಬ್ಯಾಂಕಿನ ವೆಬ್ ಸೈಟ್ [●] ನಲ್ಲಿವೆ), ತಮಗಿದೆ ಎಂದು ಗ್ರಾಹಕರು ಒಪ್ಪಿರುತ್ತಾರೆ. ಈ ಮೇಲಣ ವಿವರಣೆಗಳು (ಫ್ರೇಮ್‌ವರ್ಕ್), ಮೂಲಾಂಶಕ್ಕೆ ಲೋಪವಿಲ್ಲದಂತೆ ಎಲ್ಲ ಬದಲಾವಣೆ ಗಳನ್ನೊಳಗೊಂಡಂತೆ [ಮ್ಯುಟಾಟಿಸ್ ಮ್ಯುಟಾಂಡಿಸ್ ಲ್ಯಾಟಿನ್ ಮೂಲದ ಶಬ್ದಗುಚ್ಛ] ಇಲ್ಲಿ ನಮೂದಿಸಲಾಗಿರುವ ಎಲ್ಲ ವ್ಯವಹಾರಗಳು ಮತ್ತು ಸೇವೆಗಳಿಗೆ ಅನ್ವಯವಾಗುತ್ತವೆ.

<u>ಮಾರ್ಗಸೂಚನೆಗಳು (ರೆಕಮೆಂಡೇಷನ್ಸ್):</u> ಅನಧಿಕೃತ ವ್ಯವಹಾರ ತೋರಿಬಂದಾಗ, ತಕ್ಷಣದಲ್ಲಿ, ಗ್ರಾಹಕರು ಪೇಜ್ಯಾಪ್ ಆಪ್‌ಗೆ ಹೋಗಿ, ಆಪ್ ಮೆನುವಿನಲ್ಲಿ ಹೆಲ್ಪ್‌ಗಳ ಸೆಂಟರ್ (ಸಹಾಯ ಕೇಂದ್ರ) ಮೇಲೆ ಕ್ಲಿಕ್ ಮಾಡಿ ನಂತರ ಟ್ಯಾನ್ಸ್ಯಾಕ್ಷನ್ ಟ್ಯಾಬ್ ಮೇಲೆ ಒತ್ತಿ, ಟ್ಯಾನ್ಸ್ಯಾಕ್ಷನ್ ಮೇಲೆ ಒತ್ತಿ, ಟಿಕೆಟ್ ಪಡೆದುಕೊಳ್ಳುವ ಮೂಲಕ ವರದಿ ಸಲ್ಲಿಸತಕ್ಕದ್ದು.

ಅನಧಿಕೃತ ವ್ಯವಹಾರಗಳಿಗಾಗಿ ಅಪ್‌ಡೇಟ್ ಆಗಿರುವ ಈ ಮುಂದಿರುವ ವೆಬ್‌ಸೈಟನ್ನು ಸಂಪರ್ಕಿಸಿ: https://leads.hdfcbank.com/applications/webforms/apply/grievance_redressal_form.asp

24.7 ಗ್ರಾಹಕರು ಈ ಸೇವಾಸೌಲಭ್ಯವನ್ನು, ಕಾಲಕಾಲಕ್ಕೆ ಮಾಡಬಹುದಾದ ಬದಲಾವಣೆಗಳನ್ನೂ ಒಳಗೊಂಡಂತೆ, ಅಪ್‌ಡೇಟ್ ಮಾಡಿಕೊಂಡು ಇದರಲ್ಲಿರುವ ಅಂಶಗಳನ್ನು ಮನದಟ್ಟುಮಾಡಿಕೊಂಡಿರುವುದಾಗಿ ಈ ಮೂಲಕ ಪ್ರತಿಜ್ಞಾ ಪೂರ್ವಕವಾಗಿ ಒಪ್ಪಿಕೊಂಡಿರುತ್ತಾರೆ.

**25 ಆಡಳಿತಾತ್ಮಕ(ವಾಗಿ ಅನ್ವಯವಾಗುವ) ಕಾನೂನು ಮತ್ತು ವಿವಾದ ಇತ್ಯರ್ಥ**

25.1 ಈ ನಿಯಮ ಮತ್ತು ಷರತ್ತುಗಳ ದಾಖಲೆ ಹಾಗೂ ಯಾವುದೇ ವಿವಾದಗಳು ಭಾರತೀಯ ಕಾನೂನು (ನ್ಯಾಯ ಸಂಹಿತೆ) ಪ್ರಕಾರ ಇತ್ಯರ್ಥಮಾಡಲ್ಪಡುತ್ತವೆ. ಎಲ್ಲ ವಿವಾದಗಳೂ ಆರ್ಬಿಟ್ರೇಷನ್ ಅಂಡ್ ಕನ್ಸಿಲಿಯೇಷನ್ ಆಕ್ಟ್, 1996ರಂತೆ, ಅದರ ತಿದ್ದುಪಡಿಯಂತೆ, ಅಥವಾ ಅದರ ಪುನರ್ಜಾರಿಯಂತೆ, ಅದರಲ್ಲಿರುವ ನಿಬಂಧನೆಗಳಿಗೆ ಅನ್ವಯವಾಗಿ, ಗ್ರಾಹಕರು ಮತ್ತು ಬ್ಯಾಂಕು, ಎರಡೂ ಪಕ್ಷದವರು ಒಪ್ಪಿ ನೇಮಿಸಲ್ಪಟ್ಟ, ಮಧ್ಯಸ್ಥಗಾರರ ಸಮಕ್ಷಮದಲ್ಲಿ, ಇತ್ಯರ್ಥವಾಗತಕ್ಕದ್ದೆಂದು ಗ್ರಾಹಕರು ಮತ್ತು ಬ್ಯಾಂಕು ಒಪ್ಪಿರುತ್ತೇವೆ. ಮಧ್ಯಸ್ತಿಕೆ ಪೀಠವು ಭಾರತದ ಮುಂಬೈ ನಗರವಾಗಿರುತ್ತದೆ ಮತ್ತು ಮಧ್ಯಸ್ತಿಕೆ ಕ್ರಮಗಳನ್ನು ಆಂಗ್ಲ (ಇಂಗ್ಲೀಷ್) ಭಾಷೆಯಲ್ಲಿ ನಡೆಸಲಾಗುತ್ತದೆ. ನ್ಯಾಯಾಲಯದಲ್ಲಿ ಇತ್ಯರ್ಥವಾಗಬೇಕಾದಲ್ಲಿ, ಭಾರತದ ಮುಂಬೈ ನಗರ ವ್ಯಾಪ್ತಿಯಲ್ಲಿರುವ ನ್ಯಾಯಾಲಯಗಳು ಮತ್ತು ನ್ಯಾಯಮಂಡಳಿಗಳು ಏಕಮಾತ್ರ ಆಯ್ಕೆಗಳಾಗಿರುತ್ತವೆ ಮತ್ತು ಈ ಷರತ್ತಿಗೆ ಗ್ರಾಹಕರು ನಿರ್ವ್ಯಾಜವಾಗಿ/ಅಭ್ಯಂತರವಿಲ್ಲದೆ ಸಮ್ಮತಿಸಿರುತ್ತಾರೆ. ಈ ಮಧ್ಯಸ್ತಿಕೆ ಒಪ್ಪಂದದಲ್ಲಿರುವ ಯಾವುದೇ ನಿಬಂಧನೆಗಳು ಜಾರಿಗೊಳಿಸಲಾಗದೆಂದು ತೋರಿದರೆ, ಅಂತಹ ಜಾರಿಗೊಳಿಸಲಸಾಧ್ಯವಾದ ನಿಬಂಧನೆಯನ್ನು ತೆಗೆದುಹಾಕಲಾಗುವುದು, ಮತ್ತು ಉಳಿದಿರುವ ಮಧ್ಯಸ್ತಿಕೆ ಷರತ್ತುಗಳನ್ನು ಜಾರಿಗೊಳಿಸಲಾಗುವುದು (ಯಾವುದೇ ಸಂದರ್ಭದಲ್ಲೂ ವರ್ಗೀಕೃತ(ಕ್ಲಾಸ್) ಮಧ್ಯಸ್ತಿಕೆ ಇರುವುದಿಲ್ಲ). ಮಧ್ಯಸ್ತಿಕೆಗಾರರ ತೀರ್ಮಾನಕ್ಕೆ ಎರಡೂ ಪಕ್ಷಗಳು ಪ್ರಶ್ನಾತೀತವಾಗಿ ಬದ್ಧರಾಗಿರಬೇಕಾಗುತ್ತದೆ ಮತ್ತು ಯಾವುದೇ ಸಮರ್ಥ ವ್ಯಾಪ್ತಿಯಲ್ಲಿರುವ ನ್ಯಾಯಾಲಯದ ತೀರ್ಪು ಎಂಬುದಾಗಿ ನಮೂದಿಸಲಾಗುತ್ತದೆ. ಈ ಮಧ್ಯಸ್ತಿಕೆ ನಿಬಂಧನೆ ಅನುಷ್ಠಾನಗೊಳಿಸುವ ಉದ್ದೇಶಕ್ಕಾಗಿ, ಗ್ರಾಹಕರು ಮತ್ತು ಬ್ಯಾಂಕು ಎಂಬುದಾಗಿ ಉಲ್ಲೇಖಿಸಲಾಗಿರುವ ಸಂದರ್ಭಗಳಲ್ಲೆಲ್ಲ, ತತ್ಸಂಬಂಧಿತ ಅಂಗಸಂಸ್ಥೆಗಳು, ಸಹಭಾಗಿಗಳು, ಏಜೆಂಟ್‌ಗಳು, ನೌಕರರು, ಪೂರ್ವಜರು, ಉತ್ತರಾಧಿಕಾರಿಗಳು ಮತ್ತು ನಿಯೋಜಿತರು ಹಾಗೂ ಪೇಜ್ಯಾಪ್ ಸೇವೆಗಳ ಅಧಿಕೃತ ಬಳಕೆದಾರರು ಅಥವಾ ಫಲಾನುಭವಿಗಳಿಗೆಲ್ಲ ಅನ್ವಯವಾಗುತ್ತದೆ.

**26 ತಿದ್ದುಪಡಿ ಮಾಡುವ ಹಕ್ಕು**

26.1 ಈ ನಿಯಮ ಮತ್ತು ಷರತ್ತುಗಳ ದಾಖಲೆಯನ್ನು ಯಾವುದೇ ಸಮಯದಲ್ಲಾದರೂ ಬದಲಾಯಿಸುವ ಅಥವಾ ಹೊಸದಾದುದನ್ನು ಸೇರಿಸುವ, ಮತ್ತು ಬದಲಿಸುವ, ಅಳಿಸುವ, ವರ್ಜಿಸುವ, ಅಥವಾ ಪೇಜ್ಯಾಪ್ ಪಿಪಿಐ ಅಥವಾ ಪೇಜ್ಯಾಪ್ ಸೇವೆಗಳಲ್ಲಿರುವ ಯಾವುದೇ ವಿಶೇಷ ಅಂಶವನ್ನು, ಬ್ಯಾಂಕು, ತನ್ನ ಸ್ವಂತ ವಿವೇಚನೆಗೆ ತೋಚಿದಂತೆ, ಯಾವುದೇ ಸಂದರ್ಭವನ್ನು ಸಮಂಜಸವೆಂದು ಅಭಿಪ್ರಾಯಪಟ್ಟು, ಸೂಚನೆ ನೀಡಿ, ಅಂದರೆ ಪೇಜ್ಯಾಪ್ ವೆಬ್‌ಸೈಟ್ ಅಥವಾ ಹೆಚ್‌ಡಿಎಫ್‌ಸಿ ವೆಬ್‌ಸೈಟ್ ಅಥವಾ ಈ ನಿಯಮ ಮತ್ತು ಷರತ್ತುಗಳ ದಾಖಲೆಯಲ್ಲಿರುವ ಸೇವೆಗಳನ್ನು ಸಕ್ರಿಯಗೊಳಿಸುವ ಉದ್ದೇಶದಿಂದ, ಬ್ಯಾಂಕು ನಿರ್ವಹಿಸುತ್ತಿರುವ ಅಥವಾ ಮಾಲೀಕತ್ವ ಹೊಂದಿರುವ ತಾಣವನ್ನು ಒಳಗೊಂಡಂತೆ, ತನಗೆ ಸೂಕ್ತವೆನ್ನಿಸುವ ಮಾಧ್ಯಮದಲ್ಲಿ ಸೂಚನೆ ನೀಡಿ, ಬಾಧ್ಯತೆ ವಿಧಿಸುವ ಹಕ್ಕನ್ನು ಹೊಂದಿರುತ್ತದೆ. ಹಾಗೆ ಮಾಡಲಾದ ಬದಲಾವಣೆಯನ್ನು ಪ್ರಕಟಿಸಿದ ನಂತರ ಪೇಜ್ಯಾಪ್ ಪಿಪಿಐನ ಯಾವುದೇ ಬಳಕೆಯು, ಗ್ರಾಹಕರು ಮಾರ್ಪಾಡು ಮಾಡಲ್ಪಟ್ಟ ಈ ನಿಯಮ ಮತ್ತು ಷರತ್ತುಗಳ ದಾಖಲೆಯನ್ನು ಒಪ್ಪಿಕೊಂಡಿರುವರೆಂದು ಪರಿಗಣಿಸಲಾಗುವುದು. ಹಾಗಿದ್ದಾಗ್ಯೂ, ಮಾರ್ಪಾಡಿಗೆ ಮುನ್ನ ತಲೆದೋರಬಹುದಾದ ಯಾವುದೇ ವಿವಾದವಿದ್ದರೂ ಅದು, ವಿವಾದ ಏರ್ಪಡುವ ಮುಂಚೆ ಜಾರಿಯಲ್ಲಿದ್ದ, ಈ ನಿಯಮ ಮತ್ತು ಷರತ್ತುಗಳ ದಾಖಲೆಯಲ್ಲಿರುವಂತೆ (ಪ್ರತ್ಯೇಕ ಮಧ್ಯಸ್ತಿಕೆ ನಿಬಂಧನೆಯ ಬದ್ಧತೆಯನ್ನು ಒಳಗೊಂಡಂತೆ) ಅನುಷ್ಠಾನಗೊಳ್ಳುತ್ತದೆ.

Classification - Public



Classification - Public

26.2 ನಿಯಮ ಮತ್ತು ಷರತ್ತುಗಳ ದಾಖಲೆಯ ಇತ್ತೀಚಿನ ಆವೃತ್ತಿಯನ್ನು ಸದಾ ಗಮನಿಸುತ್ತಿರುವುದು ಪ್ರತಿಯೊಬ್ಬ ಗ್ರಾಹಕನ/ಗ್ರಾಹಕಳ ವೈಯುಕ್ತಿಕ ಜವಾಬ್ದಾರಿಯಾಗಿರುತ್ತದೆ ಮತ್ತು ಈ ನಿಯಮ ಮತ್ತು ಷರತ್ತುಗಳ ದಾಖಲೆಯಲ್ಲಾಗಿರುವ/ಆಗಿರಬಹುದಾದ ಬದಲಾವಣೆಗಳು, ವಿಸರ್ಜನೆಗಳು ಅಥವಾ ಹೊಸದಾಗಿ ಸೇರಿಸಲ್ಪಟ್ಟಿರುವ ಅಂಶಗಳನ್ನು ಗ್ರಾಹಕರ ಗಮನಕ್ಕೆ ತರುವಂತಹ ಜವಾಬ್ದಾರಿ ಬ್ಯಾಂಕಿಗಿರುವುದಿಲ್ಲ.

**27. ನಿಯೋಜನೆ (ಅಸೈನ್ಮೆಂಟ್)**

27.1 ಈ ನಿಯಮ ಮತ್ತು ಷರತ್ತುಗಳ ದಾಖಲೆಯನ್ನು, ಮತ್ತು ಈ ದಿಸೆಯಲ್ಲಿ ನೀಡಲ್ಪಟ್ಟಿರುವ ಯಾವುದೇ ಹಕ್ಕುಗಳು ಮತ್ತು ಪರವಾನಿಗೆಗಳು, ಗ್ರಾಹಕರಿಂದ ಯಾವಿದೇ ರೀತಿಯಲ್ಲಿ ವರ್ಗಾಯಿಸುವಂತಿಲ್ಲ ಅಥವಾ ನಿಯೋಜಿಸಲಾಗುವುದಿಲ್ಲ; ಆದರೆ, ಯಾವುದೇ ನಿರ್ಬಂಧನೆಗಳಿಲ್ಲದೆ, ಬ್ಯಾಂಕು ನಿಯೋಜಿಸಬಹುದಾಗಿರುತ್ತದೆ.

27.2 ಬ್ಯಾಂಕು ಬೇರೊಬ್ಬ ಹೊಸ ಸೇವಾಕರ್ತರಿಗೆ ಅಥವಾ ಉಪ-ಗುತ್ತಿಗೆದಾರನಿಗೆ, ಪೇಜ್ಯಾಪ್ ಸೇವೆಗಳೆಲ್ಲಕ್ಕೂ ಅಥವಾ ಯಾವುದಾದರು ಸೇವೆಗೆಂದು ವಲಸೆಹೋಗಲು ನಿರ್ಧರಿಸಿದರೆ, ಗ್ರಾಹಕರಿಂದ ಅದಕ್ಕೆ ಯಾವುದೇ ಆಕ್ಷೇಪಣೆ ಅವಕಾಶವಿಲ್ಲ. ಗ್ರಾಹಕರ ಯಾವುದೇ ರುಜುವಾತುಗಳನ್ನು, ಡ್ಯಾಟಾಗಳನ್ನು ಯಾವುದೇ ಹೊಸ ಸೇವೆ ನೀಡುವವರೊಂದಿಗೆ ಹಂಚಿಕೊಳ್ಳಲು ಮತ್ತು ವಲಸೆಗೊಳಿಸಲು ಬ್ಯಾಂಕಿಗೆ ಈ ಮೂಲಕ ಸುವ್ಯಕ್ತ ಸಮ್ಮತಿಯನ್ನು ನೀಡಿರುತ್ತಾರೆ.

**28 ಮೂರನೇ ಪಕ್ಷದವರ ಸೇವೆಗಳು ಮತ್ತು ಇತರ ವೆಬ್‌ಸೈಟ್ ಹಾಗೂ ಮೊಬೈಲ್ ಆಪ್‌ಗಳಿಗೆ ಸೇರೊಸುವ ಕೊಂಡಿಗಳು (ಲಿಂಕ್‌ಗಳು).**

28.1 ಗ್ರಾಹಕರಿಗೆ ಮೂರನೇ ಪಕ್ಷದವರಿಂದ ಸೇವೆಗಳು, ಉತ್ಪನ್ನಗಳು ಮತ್ತು ಪ್ರಚಾರದ ಮೂಲಕ ಪ್ರಚೋದನೆಗಳನ್ನು ನೀಡಲ್ಪಡಬಹುದು (ಮೂರನೇ ಪಕ್ಷದವರ ಸೇವೆಗಳು-ಥರ್ಡ್ ಪಾರ್ಟಿ ಸರ್ವಿಸಸ್). ಬ್ಯಾಂಕಿನಿಂದ ಅಲ್ಲ.ಗ್ರಾಹಕರು ಈ ಮೂರನೇ ಪಕ್ಷದವರ ಸೇವೆಗಳನ್ನುಬಳಸಲು ಬಯಸಿದರೆ, ಆ ಮೂರನೇ ಪಕ್ಷದವರು ನೀಡುವ ಸೇವೆಗಳಿಗೆ ಸಂಬಂಧಿಸಿದ ನಿಯಮ ಮತ್ತು ಷರತ್ತುಗಳನ್ನು ಪರಾಮರ್ಶಿಸಿ, ಅರ್ಥಮಾಡಿಕೊಂಡು ವ್ಯವಹರಿಸುವುದು ಗ್ರಾಹಕರದ್ದೇ ಜವಾಬ್ದಾರಿಯಾಗಿದೆ. ಈ ಸೇವೆಗಳ ಸಾಮರ್ಥ್ಯ, ಸಮರ್ಪಕತೆ, ಗುಣಮಟ್ಟಗಳಿಗೆ ಬ್ಯಾಂಕು ಜವಾಬ್ದಾರರಲ್ಲ ಎಂಬುದನ್ನು ಗ್ರಾಹಕರು ಒಪ್ಪಿರುತ್ತಾರೆ. ಪೇಜ್ಯಾಪ್ ಸೇವೆಗಳಲ್ಲಿ, ಗ್ರಾಹಕರ ಅನುಕೂಲತೆಗಾಗಿ, ಮೂರನೆ ಪಕ್ಷದವರ ವೆಬ್‌ಸೈಟ್‌ಗಳಿಗೆ ಮತ್ತು ಮೊಬೈಲ್ ಆಪ್‌ಗಳಿಗೆ ಸಂಪರ್ಕಕೊಂಡಿ (ಲಿಂಕ್) ನೀಡಬಹುದು.ಯಾವುದೇ ವೆಬ್‌ಸೈಟ್‌ನ ಸಂಪರ್ಕಸೇತುವನ್ನು(ಲಿಂಕ್) ಸೇರಿಸಿದ ಮಾತ್ರಕ್ಕೆ ಬ್ಯಾಂಕು ಅದನ್ನು ಅನುಮತಿಸಿದೆ, ಅನುಮೋದಿಸಿದೆ ಅಥವಾ ಶಿಫಾರಸು ಮಾಡುತ್ತಿದೆ ಎಂದು ಅರ್ಥವಲ್ಲ. ಗ್ರಾಹಕರು ಅಂತಹ ಲಿಂಕ್ ಮೂಲಕ ಸಂಪರ್ಕ ಪಡೆದು, ತನ್ಮೂಲಕ ಅಲ್ಲಿ ದೊರೆಯುವ ಸೇವೆಗಳ ಲಾಭವನ್ನು ಪಡೆಯುವುದು ಅಥವಾ ಪಡೆಯದಿರುವುದು ಗ್ರಾಹಕರ ವಿವೇಚನೆಗೆ ಸಂಬಂಧಪಟ್ಟ ವಿಷಯವಾಗಿರುತ್ತದೆ, ಮತ್ತು ಈ (ಬ್ಯಾಂಕಿನ) ನಿಯಮ ಮತ್ತು ಷರತ್ತುಗಳ ದಾಖಲೆಯ ವ್ಯಾಪ್ತಿಯಲ್ಲಿ ಮೂರನೇ ಪಕ್ಷದ ಸೇವೆಗಳು ಸೇರಿರುವುದಿಲ್ಲ ಎಂಬುದನ್ನು ಗ್ರಾಹಕರು ಒಪ್ಪಿರುತ್ತಾರೆ. ಬ್ಯಾಂಕು ಮೂರನೇ ಪಕ್ಷದ ಸೇವೆಗಳಿಗೆ ಸಂಬಂಧಿಸಿದಂತೆ ಯಾವುದೇ ಬಾಧ್ಯತೆ ಅಥವಾ ಜವಾಬ್ದಾರಿಯನ್ನು ಒಪ್ಪಿಕೊಳ್ಳುವುದಿಲ್ಲವೆಂದು ಸ್ಪಷ್ಟಪಡಿಸುತ್ತದೆ. ಯಾವಾಗಲಾದರೂ ಗ್ರಾಹಕರು ಇತರ ಲಿಂಕನ್ನು ಬಳಸಿ ಪೇಜ್ಯಾಪ್‌ನಿಂದ ಬೇರೊಂದು ಸೇವಾಕ್ಷೇತ್ರಕ್ಕೆ ವಲಸೆಯಾದ ಕೂಡಲೆ, ಪೇಜ್ಯಾಪ್‌ನ ಖಾಸಗೀ ಸಿದ್ಧಾಂತ (ಪ್ರೈವೇಟ್ ಪಾಲಿಸಿ)ವು ನಿಷ್ಕ್ರಿಯಗೊಳ್ಳುತ್ತದೆ ಎಂಬುದನ್ನು ದಯವಿಟ್ಟು ನೆನಪಿನಲ್ಲಿಡಿ. ಗ್ರಾಹಕರು ಬೇರೊಂದು ಸೇವಾಕ್ಷೇತ್ರವನ್ನು ಬ್ರೌಸ್ ಮಾಡುವ ಮತ್ತು ಪರಸ್ಪರ ಕ್ರಿಯಾಶೀಲರಾದರೆ, ಪೇಜ್ಯಾಪ್‌ನಲ್ಲಿಯೇ ದೊರೆಯುವ ಲಿಂಕ್‌ಗಳಲ್ಲಿ ಒಂದಾಗಿದ್ದರೂ ಸಹ, ಆ ಸೇವಾದಾರರ ಸ್ವಂತ ನಿಯಮ ಮತ್ತು ಸಿದ್ಧಾಂತಗಳಿಗೆ ಮಾತ್ರ ಸೀಮಿತವಾಗಿರುತ್ತದೆ.

**29 ಕುಕೀಗಳು**

https://www.hdfcbank.com/personal/useful-links/privacy ನಲ್ಲಿ ಲಭ್ಯವಿರುವ ಬ್ಯಾಂಕ್‌ನ ಕುಕೀಸ್ ಸಿದ್ಧಾಂತವನ್ನು ಗ್ರಾಹಕರು ಒಪ್ಪಿರುತ್ತಾರೆ.

**30 ಇತರ ನಿಬಂಧನೆಗಳು**

30.1 ಈ ನಿಯಮ ಮತ್ತು ಷರತ್ತುಗಳ ದಾಖಲೆಯಲ್ಲಿ ಸ್ಪಷ್ಟವಾಗಿ ನಿರ್ಬಂಧಗೊಳಿಸಿರುವುದನ್ನು ಹೊರತುಪಡಿಸಿ, ಈ ಷರತ್ತುಗಳು ಗ್ರಾಹಕರು ಮತ್ತು ಬ್ಯಾಂಕಿನ ನಡುವೆ ಇರುವ ನಿಯಮ ಮತ್ತು ಷರತ್ತುಗಳ ಸಮಗ್ರ ಹೇಳಿಕೆಯಾಗಿರುತ್ತದೆ, ಮತ್ತು ಗ್ರಾಹಕರು ಬ್ಯಾಂಕಿನೊಂದಿಗೆ ಹೊಂದಿರುವ ಸಂಬಂಧ, ಸಂಪರ್ಕ, ಮತ್ತು ಬ್ಯಾಂಕಿನ ಸೇವೆಗಳ ಬಳಕೆಯಲ್ಲಿ ಉದ್ಭವವಾಗಬಹುದಾದ ಎಲ್ಲ ಸಮಸ್ಯೆಗಳಿಗೆ ಗ್ರಾಹಕರಿಗಿರುವ ಪರಿಹಾರೋಪಾಯಗಳ, ಬ್ಯಾಂಕಿನ, ಮಾರಾಟಗಾರರು ಮತ್ತು ಸರಬರಾಜು ಮಾಡುವವರ ಗ್ರಾಹಕರ ವಿಷಯದಲ್ಲಿರುವ ಬಾಧ್ಯತೆಗಳ ನಿರೂಪಣೆ ಮತ್ತು ವಿವರಣೆಯಾಗಿದೆ. ಈ ನಿಯಮ ಮತ್ತು ಷರತ್ತುಗಳ ದಾಖಲೆಯಲ್ಲಿರುವ ಯಾವುದೇ ನಿಬಂಧನೆಯು ಆ ನಿಬಂಧನೆಗೆ ಸಂಬಂಧಿಸಿದಂತೆ ಬೆಲೆಇಲ್ಲದಿರುವುದು/ಅಮಾನ್ಯವಾದುದು ಅಥವಾ ಜಾರಿಗೊಳಿಸಲು ಸಾಧ್ಯವಿಲ್ಲವೆಂದಾದರೆ, ಅದನ್ನು ಬದಲಾಯಿಸಲಾಗುವುದು, ಆ ನಿಬಂಧನೆಯ ಮೂಲೋದ್ದೇಶವನ್ನು, ಅನ್ವಯವಾಗುವ ಕಾನೂನು ಪ್ರಕಾರ ಸಾಧ್ಯವಿರುವಷ್ಟು ಮಟ್ಟಿಗೆ ವ್ಯಾಖ್ಯಾನಿಸಲಾಗುವುದು, ಮತ್ತು ಉಳಿದಿರುವ ನಿಬಂಧನೆಗಳು ಯಥಾಪ್ರಕಾರ ಸಂಪೂರ್ಣ ಸಾಮರ್ಥ್ಯದಿಂದ, ಅಷ್ಟೇ ಪರಿಣಾಮಕಾರಿಯಾಗಿ ಮುಂದುವರಿಯುವುದು. ಅನುಕೂಲಕ್ಕಾಗಿ ಮಾತ್ರ ಶೀರ್ಷಿಕೆಗಳನ್ನು ಅಳವಡಿಸಲಾಗಿದೆ. ಆದರೆ ಈ ನಿಯಮ ಮತ್ತು ಷರತ್ತುಗಳ ದಾಖಲೆಯನ್ನು ವ್ಯಾಖ್ಯಾನಿಸುವಾಗ ಅವುಗಳನ್ನು ಪರಿಗಣಿಸುವಂತಿಲ್ಲ. ನಿಯಮ ಮತ್ತು ಷರತ್ತುಗಳ ದಾಖಲೆಯು ವ್ಯಾವಹಾರಿಕ ಗೌಪ್ಯತೆ, ಕಾಪಿರೈಟ್, ಪೇಟೆಂಟ್, ಅಥವಾ ಇತರ ಕಾನೂನುಗಳನ್ವಯ ಬ್ಯಾಂಕಿಗಿರುವ ಹಕ್ಕುಗಳನ್ನು ಯಾವುದೇ ರೀತಿಯಲ್ಲಿ ಕ್ಷೀಣಗೊಳಿಸುವುದಿಲ್ಲ. ಈ ನಿಯಮ ಮತ್ತು ಷರತ್ತುಗಳ ದಾಖಲೆಯಲ್ಲಿರುವ ಹಕ್ಕು ಮತ್ತು ನಿಬಂಧನೆಗಳನ್ನುಬ್ಯಾಂಕ್ ವಿಫಲವಾದಲ್ಲಿ, ಅದು ಅಂತಹ ಹಕ್ಕು ಮತ್ತು ನಿಬಂಧನೆಗಳನ್ನು ಮನ್ನಾ ಮಾಡಿರುವುದಾಗಿ ಪರಿಗಣಿಸುವಂತಿಲ್ಲ.ನಿಯಮ ಮತ್ತು ಷರತ್ತುಗಳ ದಾಖಲೆಯಲ್ಲಿರುವ ಯಾವುದೇ ಷರತ್ತನ್ನು ಮನ್ನಾ ಮಾಡಿದ್ದಲ್ಲಿ, ಆ ಷರತ್ತನ್ನು ಮುಂದೆಂದೂ ಮನ್ನಾ ಮಾಡಲಾಗಿದ್ದ ಷರತ್ತನ್ನು ಪುನಃ ಪ್ರಸ್ತಾಪಿಸುವಂತಿಲ್ಲ ಅಥವಾ ಮುಂದುವರಿಸುವಂತಿಲ್ಲ ಎಂದು ತಿಳಿಯುವಂತಿಲ್ಲ ಅಥವಾ ವ್ಯಾಖ್ಯಾನಿಸುವಂತಿಲ್ಲ.

30.2 ಆಂಗ್ಲಭಾಷೆಯಲ್ಲಿರುವ ಪೇಜ್ಯಾಪ್ ನಿಯಮ ಮತ್ತು ಷರತ್ತುಗಳು, ಆಂಗ್ಲಭಾಷೆಯಿಂದ ತರ್ಜಿಮೆಯಾದ ಇತರ ಯಾವುದೇ ಭಾಷೆಯಲ್ಲಿ ಕಂಡುಬರಬಹುದಾದ ವ್ಯತ್ಯಯ, ಅಸಮಂಜಸವಾದ ಹೇಳಿಕೆಗಳನ್ನು ಪರಿಗಣಿಸದೆ ಪ್ರಾತಿನಿಧ್ಯವನ್ನು/ ಮೇಲುಗಾರಿಕೆಯನ್ನು ಹೊಂದಿರುತ್ತದೆ.

**ವರ್ಗ – ಆಂತರಿಕ**

**ಷೆಡ್ಯೂಲ್ 1**

**(3.2ನೇ ಷರತ್ತನ್ನು ಸಂದರ್ಶಿಸಿ)**

**ಪೇಜ್ಯಾಪ್ ಪಿಪಿಐಗೆ ಅನ್ವಯಿಸುವ ಹೆಚ್ಚುವರಿ ನಿಯಮ ಮತ್ತು ಷರತ್ತುಗಳು**

1. ಈ ಮುಂದಿನ ನಿಯಮ ಮತ್ತು ಷರತ್ತುಗಳು ಎಲ್ಲ ನೊಂದಣಿ ಮತ್ತು ಪೇಜ್ಯಾಪ್ ಪಿಪಿಐ ಬಳಕೆಗೆ ಅನ್ವಯವಾಗುತ್ತವೆ (ಇನ್ನು ಮುಂದೆ ವ್ಯಾಖ್ಯಾನಿಸಲಾಗಿರುವುದು). ಗ್ರಾಹಕರಿಂದ ಪೇಜ್ಯಾಪ್ ಪಿಪಿಐಅನ್ನು ಬಳಸುವುದು ಮತ್ತು ಅದನ್ನು ಪಡೆದುಕೊಳ್ಳುವುದರಿಂದ ಈ ಕೆಳಗೆ ಪ್ರಸ್ತುತಪಡಿಸುವ ನಿಯಮ ಮತ್ತು ಷರತ್ತುಗಳನ್ನು ಆಯಾ ಗ್ರಾಹಕರು ಒಪ್ಪಿರುವರೆಂದು ಭಾವಿಸಲಾಗುವುದು, ಪೇಜ್ಯಾಪ್ ಪಿಪಿಐಅನ್ನು ನೊಂದಾಯಿಸಿಕೊಳ್ಳಲು ಮತ್ತು ಬಳಸಲು ಸಮ್ಮತಿಸಿರುವರೆಂಬ ನಂಬಿಕೆಯನ್ನೊಳಗೊಂಡಂತೆ.

**2. ವ್ಯಾಖ್ಯಾನಗಳು**

ಈ ಷೆಡ್ಯೂಲ್ 1ರ ಸಲುವಾಗಿ, ಕೆಳಗೆ <u>ಅಂಡರ್‌ಲೈನ್</u> ಮಾಡಲಾದ ಪದಗಳನ್ನು ಹೇಗೆ ಅರ್ಥೈಸಬೇಕೆಂದು ವಿವರಿಸಲಾಗಿದ್ದು ಆ ಪದಗಳನ್ನು ಹಾಗೆಯೇ ಅರ್ಥ ಮಾಡಿಕೊಳ್ಳಬೇಕು.

**<u>"ವಿಸರ್ಜನೆ(ಕ್ಲೋಷರ್)ಯ ಪರಿಣಾಮಗಳು"</u>** ಎಂದರೆ ಪೇಜ್ಯಾಪ್ ಪಿಪಿಐಅನ್ನು ಅಂತ್ಯಗೊಳಿಸಲಾಗುವುದು ಮತ್ತು ಅಂತಹ ಪಿಪಿಐಗಳಿಗೆ ಯಾವುದೇ ಗಣ್ಯತೆ (ಕ್ರೆಡಿಟ್ಸ್)ಯನ್ನು ಅನುಮತಿಸಲಾಗುವುದಿಲ್ಲ; ಆದಾಗ್ಯೂ, ಉಳಿಕೆ ಹಣವನ್ನು, ಉಳಿದಿದ್ದಲ್ಲಿ, ಗ್ರಾಹಕರು ವ್ಯಾಪಾರಿಗಳಿಂದ ಕೊಳ್ಳುವ ಸರಕುಗಳು ಮತ್ತು ಸೇವೆಗಳಿಗೆ ಗ್ರಾಹಕರು ಬಳಸಿಕೊಳ್ಳಬಹುದು. ಆದಾಗ್ಯೂ, ಅಂತಹ ಪಿಪಿಐಗಳಿಂದ ಬ್ಯಾಂಕ್ ಖಾತೆಗೆ ಅಥವಾ ಮೂಲ ಧನ ಖಾತೆಗೆ (ಸೋರ್ಸ್ ಫಂಡಿಂಗ್ ಖಾತೆ) ಹಣ ವರ್ಗಾವಣೆ ಮಾಡಬೇಕಾದಲ್ಲಿ, ಕೆವೈಸಿ ಪ್ರಕ್ರಿಯೆಯನ್ನು ಸಂಪೂರ್ಣಗೊಳಿಸಿದ್ದರೆ ಮಾತ್ರ ಗ್ರಾಹಕರಿಗೆ ಅನುಮತಿ ನೀಡಲಾಗುವುದು. ಅಲ್ಲದೇ, ಅಂತಹ ಪಿಪಿಐಗಳಿಂದ ಇತರ ಪಿಪಿಐಗಳಿಗೆ, ಬ್ಯಾಂಕಿನ ಅಥವಾ ಇತರ ಪಿಪಿಐ ನೀಡುವವರ, ಹಣ ವರ್ಗಾವಣೆ ಮಾಡಲು ಅನುಮತಿಸಲಾಗುವುದಿಲ್ಲ. ಮುಂದುವರೆದು, ಅನ್ವಯವಾಗುವ ವಿವಿಧ ಕಾಲಮಾನಗಳಲ್ಲಿ ಕಾನೂನು ಪ್ರಕಾರ/ಬಧವಾದ ಬೇರೆ ರೀತಿಯ ವಿಸರ್ಜನೆ (ಕ್ಲೋಶರ್) ಅಥವಾ ಯಾವುದೇ ಇತರ ಮೂಲಕ್ಕೆ/ಗಮ್ಯಸ್ಥಾನಕ್ಕೆ/ಖಾತೆಗೆ ವರ್ಗಾವಣೆಯು ಅನುಮತಿಸಲ್ಪಟ್ಟಿದ್ದರೆ, ಅದೇ ಪ್ರಕಾರ ಬ್ಯಾಂಕು ಕ್ಲೋಶರ್/ವರ್ಗಾವಣೆಗೆ ಅನುಮತಿ ನೀಡಬಹುದು.

**<u>"ಸಂಪೂರ್ಣ ಕೆವೈಸಿ ಪಿಪಿಐ"</u>** ಎಂದರೆ ಆರ್‌ಬಿಐ ಪಿಪಿಐ ನಿರ್ದೇಶನಗಳ ಅರ್ಥದೊಳಗೆ ಪರಿಗಣಿಸಬಹುದಾದ ಅಂತಹ ಮುಂಗಡವಾಗಿ ಹಣ ಪಾವತಿಸಿರುವ ಉಪಕರಣವಾಗಿದ್ದು ಕೆವೈಸಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಿದ ನಂತರ ನೀಡಬಹುದಾದ ಮತ್ತು ಬಾಕಿ ಉಳಿದಿರುವ ಮೊತ್ತವು, ಯಾವುದೇ ಸಮಯದಲ್ಲೂ ರೂ. 2,00,000/-ವನ್ನು ಮೀರುವುದಿಲ್ಲವೋ ಮತ್ತು ಆರ್‌ಬಿಐ ಪಿಪಿಐ ನಿರ್ದೇಶನಗಳಡಿಯಲ್ಲಿ ಮತ್ತು ಈ ರೀತಿಯಲ್ಲಿ ಹಾಗೂ ಇಲ್ಲಿ ನೀಡಲಾಗಿರುವ ನಿಯಮ ಮತ್ತು ಷರತ್ತುಗಳಿಗೆ ಬದ್ಧವಾಗಿ, ಗ್ರಾಹಕರು ಪೇಜ್ಯಾಪ್ ಸೇವೆಗಳನ್ನು ಇಲ್ಲಿ ನಮೂದಿಸಿರುವ ನಿಯಮ ಮತ್ತು ಷರತ್ತುಗಳ ಮೇರೆಗೆ, ಕ್ಲಾಸ್ 4 ರಲ್ಲಿ ಹೇಳಿರುವ ನಿರ್ದಿಷ್ಟ ರೀತಿಯಲ್ಲಿ, ಗ್ರಾಹಕರು ಪೇಜ್ಯಾಪ್ ಸೇವೆಗಳನ್ನು ಪಡೆದುಕೊಳ್ಳಲು ಅನುಮತಿ ನೀಡಲಾಗುವುದು.

**<u>"ಪರಿಪೂರ್ಣ ಕೆವೈಸಿ ಸಂಸ್ಕರಣ"</u>** ಎಂದರೆ, "ನೋ ಯುವರ್ ಕಸ್ಟಮರ್(ನಿಮ್ಮ ಗ್ರಾಹಕರನ್ನುಅರಿತುಕೊಳ್ಳಿ)" ಎಂಬುದರಲ್ಲಿರುವ, ಆರ್‌ಬಿಐ ಕೆವೈಸಿ ನಿರ್ದೇಶನಗಳು, ಆರ್‌ಬಿಐ ಪಿಪಿಐ ನಿರ್ದೇಶನಗಳು, ದಿ ಪ್ರಿವೆನ್ಷನ್ ಆಫ್ ಮನಿ ಲಾಂಡರಿಂಗ್ ಆಕ್ಟ್, 2002 (ಅಕ್ರಮ ಹಣ ವರ್ಗಾವಣೆ ತಡೆ ಕಾಯ್ದೆ. 2002), ಕಾನೂನುಗಳು, ನಿಯಮಗಳು, ಮತ್ತು ಅವುಗಳಡಿಯಲ್ಲಿರುವ, ಕಾಲಾನುಕಾಲಕ್ಕೆ ಹೊರಡಿಸಿರುವ ಸುತ್ತೋಲೆಗಳು, ಮತ್ತು ಮಾಡಿರುಬಹುದಾದ ತಿದ್ದುಪಡಿ, ಬದಲಾಯಿಸಿರುವುದು, ಕಾಲಕ್ರಮದಲ್ಲಿ ಮಾರ್ಪಡಿಸಿರುವುದವುಗಳನ್ನು ಗ್ರಾಹಕರು ಮತ್ತು ಬ್ಯಾಂಕಿನ ನಡುವೆ ಇರುವ ಸಂಬಂಧದ ವಿಷಯದಲ್ಲಿ ಸೂಚಿಸಿರುವ ಎಲ್ಲ ಅವಶ್ಯಕತೆಗಳನ್ನು, ಬ್ಯಾಂಕಿಗೆ ತೃಪ್ತಿಕರವಾಗಿ ಒದಗಿಸಿ, ಅದರ ಸಂಸ್ಕರಣೆಯನ್ನು ಬ್ಯಾಂಕು ತೃಪ್ತಿಕರವಾಗಿ ಪೂರ್ಣಗೊಳಿಸಿರುವುದು ಅಲ್ಲದೆ ಈ ಸಂಬಂಧದಲ್ಲಿ ಬ್ಯಾಂಕಿನ ಸ್ವಂತ ಆಂತರಿಕ ನಿಯಮಾವಳಿಗಳಿಗೆ ಅನ್ವಯಿಸಿಕೊಂಡು, ಎಂದರ್ಥ.

**<u>"ಇಶ್ಯೂ(ನೀಡಿಕೆ) ದಿನಾಂಕ"</u>,** ಪೇಜ್ಯಾಪ್ ಪಿಪಿಐಗೆ ಸಂಬಂಧಿಸಿದಂತೆ, ಎಂದರೆ, ಪೇಜ್ಯಾಪ್ ಪಿಪಿಐಅನ್ನು ನಿರ್ದಿಷ್ಟ ಗ್ರಾಹಕರಿಗೆ ಬ್ಯಾಂಕು ನೀಡಿರುವ/ಸಕ್ರಿಯಗೊಳಿ-ಸಿರುವ ದಿನಾಂಕ ಎಂದರ್ಥ.

**<u>"ಮಿತಿ(ಲಿಮಿಟ್)"</u>** ಎಂದರೆ ಮೌಲ್ಯ ತುಂಬುವ (ಲೋಡಿಂಗ್ ವ್ಯಾಲ್ಯು), ಮಿತಿಮೀರಿದ ಬಾಕಿ (ಔಟ್‌ಸ್ಟ್ಯಾಂಡಿಂಗ್ ಬ್ಯಾಲೆನ್ಸ್), ವರ್ಗಾವಣೆ, ಪಾವತಿ ಮುಂತಾದ ವ್ಯವಹಾರಗಳಿಗೆ ಸೂಚಿಸಿರುವ ಗರಿಷ್ಠ ಮೊತ್ತದ ಮಿತಿ. ಇವುವಳನ್ನು ನಿಯಮ ಮತ್ತು ಷರತ್ತುಗಳ ದಾಖಲೆಯಲ್ಲಿ, ಹೆಚ್ಚು ನಿರ್ದಿಷ್ಟವಾಗಿ ಕನಿಷ್ಟ-ವಿವರಣೆ ಪಿಪಿಐ ಮತ್ತು ಪರಿಪೂರ್ಣ ಕೆವೈಸಿ ಪಿಪಿಐ ಎಂಬಲ್ಲಿ, ಅನುಕ್ರಮವಾಗಿ ಷರತ್ತು 4 ಮತ್ತು 5ರಲ್ಲಿರುವಂತೆ ಅನ್ವಯಿಸಿಕೊಳ್ಳಬೇಕು.

**<u>"ಮಿನಿಮಂ-ಡಿಟೈಲ್ ಪಿಪಿಐ (ಕನಿಷ್ಟ-ವಿವರಣೆ ಪಿಪಿಐ) ಅಥವಾ "ಸಣ್ಣ ಪಿಪಿಐ (ಸ್ಮಾಲ್ ಪಿಪಿಐ)</u>** ಎಂದರೆ ಆರ್‌ಬಿಐ ಪಿಪಿಐ ನಿರ್ದೇಶಿಸಿರುವಂತೆ ಬಾಕಿ ಉಳಿದಿರುವ ಮೊತ್ತವು ರೂ. 10,000/-ವನ್ನು, ಯಾವುದೇ ಸಮಯದಲ್ಲೂ ಮೀರುವುದಿಲ್ಲವೋ, ಮತ್ತು ಆರ್‌ಬಿಐ ನಿರ್ದೇಶನಗಳಲ್ಲಿರುವ ಇತರ ನಿಯಮ ಮತ್ತು ಷರತ್ತುಗಳಿಗೆ ಅನ್ವಯವಾಗುವಂತೆ, ಮತ್ತು ಪೇಜ್ಯಾಪ್ ಸೇವೆಗಳನ್ನು ಯಾವ ರೀತಿಯಲ್ಲಿ ಗ್ರಾಹಕರು ಬಳಸಿಕೊಳ್ಳಬಹುದೋ ಮತ್ತು ಈ ಷರತ್ತಿನ ಅನುಕ್ರಮ ಸಂಖೆ 3ರಲ್ಲಿರುವ ಮಿನಿಮಂ-ಡಿಟೈಲ್ ಪಿಪಿಐ ಅಡಿಯಲ್ಲಿ ನಮೂದಿಸಿರುವ ನಿಯಮ ಮತ್ತು ಷರತ್ತುಗಳಿಗೆ ಬದ್ಧವಾಗಿ, ಅವುಗಳು ಅನ್ವಯವಾಗುವಂತೆ, ಎಂಬ ಸೂಚ್ಯಾರ್ಥದೊಳಗೆ ಬರುವಂತಹ/ಇರುವಂತಹ ಪ್ರೀಪೈಡ್ ಇನ್‌ಸ್ಟ್ರುಮೆಂಟ್-ಗಳನ್ನು "ಕನಿಷ್ಠ ವಿವರಣೆ"ಗೂ ನೀಡಬಹುದಾದಂತಹವು ಎಂದು.

**<u>"ಮಿನಿಮಂ (ಕನಿಷ್ಟ) ಕೆವೈಸಿ ಸಂಸ್ಕರಣ (ಪ್ರೋಸೆಸ್)"</u>** ಎಂದರೆ ಕಾಲಕ್ರಮದಲ್ಲಿ ಬ್ಯಾಂಕು, ಕಾಲಕ್ರಮದಲ್ಲಿ ಆರ್‌ಬಿಐ ಪಿಪಿಐ ನಿರ್ದೇಶನಗಳನ್ನಳವಡಿಸಿಕೊಂಡು, ಎಂದರೆ ಸಧ್ಯಕ್ಕೆ (i) (ಓಟಿಪಿ) ಅರ್ಥಾತ್ ಒನ್ ಟೈಮ್ ಪಾಸ್‌ವರ್ಡ್ (ಒಮ್ಮೆಗೆ ಮಾತ್ರ ನೀಡಲಾಗುವ ಅಧಿಕೃತ ಸಂಖ್ಯೆ)ನಿಂದ ಪರಿಶೀಲಿಸಲ್ಪಟ್ಟ ಮೊಬೈಲ್ ಸಂಖ್ಯೆ; (ii) ಗ್ರಾಹಕರು ತಮ್ಮ ಹೆಸರನ್ನು ಸ್ವ-ಪ್ರಮಾಣೀಕರಿಸಿದುದು, ಮತ್ತು (iii) ಯಾವುದೇ 'ಕಡ್ಡಾಯವಾದ ದಾಖಲೆ' (ಮ್ಯಾಂಡೇಟರಿ ಡಾಕ್ಯುಮೆಂಟ್ ಅಥವಾ 'ಅಧಿಕೃತವಾಗಿ ಮೌಲೀಕೃತ ದಾಖಲೆ' (ಅಫಿಶಿಯಲಿ ವ್ಯಾಲಿಡ್ ಡಾಕ್ಯುಮೆಂಟ್)ಯ ಅನನ್ಯ ಗುರುತಿನ ಸಂಖ್ಯೆ (ಯೂನಿಕ್ ಐಡೆಂಟಿಫಿಕೇಷನ್ ನಂಬರ್) ಎಂದು ದಿ ಪ್ರಿವೆನ್ಷನ್ ಆಫ್ ಮನಿ ಲಾಂಡರಿಂಗ್ (ಮೈಂಟೆನೆನ್ಸ್ ಆಫ್ ರೆಕಾರ್ಡ್ಸ್) ಕಾನೂನುಗಳು, 2005 **("ಪಿಎಂಎಲ್ಎ ರೂಲ್ಸ್")** ನಲ್ಲಿ 2(ಡಿ) ವಿಭಾಗದಲ್ಲಿ ವ್ಯಾಖ್ಯಾನಿಸಿರುವಂತೆ, ಕಾಲಾನುಕಾಲಕ್ಕೆ ತಿದ್ದುಪಡಿಯಾಗಿರುವಂತೆ, ಕೆವೈಸಿ ಸಂಸ್ಕರಣವನ್ನು ರೂಪಿಸಿರುವಂತೆ ಎಂದರ್ಥ.

Classification - Public



Classification - Public

**"ಪಿಪಿಐ"** ಎಂಬುದರ ವಿಸ್ತೃತ ರೂಪ ಹೀಗಿದೆ: "ಪ್ರೀಪೈಡ್ ಪೇಮೆಂಟ್ ಇನ್ಸ್ಟ್ರುಮೆಂಟ್"; ಮತ್ತು, ಆರ್‌ಬಿಐ ಪಿಪಿಐ ನಿರ್ದೇಶನಗಳಲ್ಲಿ ಈ ಪದಗಳಿಗೆ ಅಥವಾ ಪದಕ್ಕೆ ನೀಡಿರುವ ಅರ್ಥವನ್ನು ಎಲ್ಲೆಡೆಯಲ್ಲೂ ಅನ್ವಯಿಸಬೇಕು.

**"ಪೇಜ್ಯಾಪ್ ಪಿಪಿಐ"** ಎಂದರೆ ಬ್ಯಾಂಕು ಈ ದಾಖಲೆಯಲ್ಲಿ ನೀಡಿರುವ ನಿಯಮ ಮತ್ತು ಷರತ್ತುಗಳ ಮೇರೆಗೆ, ಎಲೆಕ್ಟ್ರಾನಿಕ್ ಸಾಧನೆಯ ರೀತಿಯಲ್ಲಿ, ಆರ್‌ಬಿಐ ಪಿಪಿಐ ನಿರ್ದೇಶನಗಳಿಗೆ ಒಳಪಟ್ಟು, ವ್ಯಾಖ್ಯಾನಿಸಿರುವಂತೆ, ಮಿನಿಮಂ-ಡೀಟೈಲ್ ಪಿಪಿಐ ಅಥವಾ ಫುಲ್ ಕೆವೈಸಿ ಪಿಪಿಐ ಆಗಿರುವ ವರ್ಚುಯಲ್ ಪ್ರೀಪೈಡ್ ಪೇಮೆಂಟ್ ಇನ್ಸ್ಟ್ರುಮೆಂಟ್.

**"ಆರ್‌ಬಿಐ ಪಿಪಿಐ ನಿರ್ದೇಶನಗಳು"** ಎಂದರೆ "ಮಾಸ್ಟರ್ ಡೈರೆಕ್ಷನ್ಸ್ ಆನ್ ಪ್ರೀಪೈಡ್ ಪೇಮೆಂಟ್ ಇನ್ಸ್ಟ್ರುಮೆಂಟ್ಸ್ (ಪಿಪಿಐಗಳು)" ಎಂಬ ಶೀರ್ಷಿಕೆಯಡಿಯಲ್ಲಿರುವ ಆಗಸ್ಟ್ 27, 2021ರಂದು ಪ್ರಕಟವಾಗಿರುವ ಮಾಸ್ಟರ್ ಡೈರೆಕ್ಷನ್ ಕೋ.ಡಿಪಿಎಸ್ಎಸ್.ಪಿಒಎಲ್ಸಿ.ನಂ.ಎಸ್-479/02.14.006/2021-22 (ನವೆಂಬರ್ 12, 2021ರಂದು ನವೀಕರಿಸಿರುವಂತೆ (ಅಪ್‌ಡೇಟೆಡ್)), ಆರ್‌ಬಿಐ ಅವರಿಂದ ನೀಡಲಾಗಿರುವ, ಕಾಲಾನುಕಾಲಕ್ಕೆ ಅದರ ತಿದ್ದುಪಡಿಗಳೂ, ಸೇರಿಸಲಾಗಿರುವಂತೆ (ಸಪ್ಲಿಮೆಂಟೆಡ್), ಬದಲಾಯಿಸಿರುವಂತೆ (ಸಬ್ಸ್ಟಿಟ್ಯೂಟೆಡ್) ಅನ್ವಯಿಸುವಂತೆ, ಇರುವ ನಿರ್ದೇಶನಗಳು.

3. ಬ್ಯಾಂಕು ಗ್ರಾಹಕರಿಗೆ ಒಂದು ಪೇಜ್ಯಾಪ್ ಪಿಪಿಐಅನ್ನು ಈ ಕೆಳಗೆ ನೀಡಿರುವ ಮಾದರಿಯಲ್ಲಿ ರಚಿಸಿ ನಿಯೋಜಿಸುತ್ತದೆ:

3.1 ಯಾವ ಗ್ರಾಹಕರು ಪರಿಪೂರ್ಣ ಕೆವೈಸಿ ಪ್ರೋಸೆಸ್ಸನ್ನು ಪೂರ್ಣಗೊಳಿಸುತ್ತಾರೋ, ಅಂತಹವರಿಗೆ, ಪಿಪಿಐಅನ್ನು ನೀಡುವವರ ನಿರ್ಧಾರದಂತೆ, ಜೀವಮಾನಪರ್ಯಂತ ಮಾನ್ಯತೆ ಹೊಂದಿರುವ ಪರಿಪೂರ್ಣ ಕೆವೈಸಿ ಪಿಪಿಐಅನ್ನು ನೀಡುವರು, ಮತ್ತು ಸದರಿ ಗ್ರಾಹಕರು ಪೇಜ್ಯಾಪ್‌ನ ಎಲ್ಲ ಸೇವೆಗಳನ್ನು, ಬ್ಯಾಂಕಿನ ವಿವೇಚನೆಗೆ ಬಿಟ್ಟಂತೆ, ಮತ್ತು ಈ ಮುಂದೆ ವಿವರಿಸುವ ನಿಯಮಗಳು ಮತ್ತು ಷರತ್ತುಗಳ ಅನುಸಾರವಾಗಿ ಬಳಸಿಕೊಳ್ಳಬಹುದಾಗಿರುತ್ತದೆ. ಪರಿಪೂರ್ಣ ಕೆವೈಸಿ ಪಿಪಿಐ ಈಗ ಅಸ್ತಿತ್ವದಲ್ಲಿರುವ ಗ್ರಾಹಕರಿಗೆ ಮಾತ್ರ ಲಭ್ಯವಿದೆ.

3.2 ಯಾವ ಗ್ರಾಹಕರು ಮಿನಿಮಂ ಕೆವೈಸಿ ಪ್ರಕ್ರಿಯೆಯನ್ನು ಪೂರ್ಣಗೊಳಿಸುತ್ತಾ-ರೆಯೋ, ಅವರಿಗೆ, ಪಿಪಿಐಅನ್ನು ನೀಡುವವರ ನಿರ್ಧಾರದಂತೆ, ಜೀವಮಾನಪರ್ಯಂತ ಮಾನ್ಯತೆ ಹೊಂದಿರುವ, ಹಣವನ್ನು ಭರ್ತಿಮಾಡುವ ಆಯ್ಕೆಯಿಲ್ಲದಿರುವ, ಚಿಕ್ಕ ಪಿಪಿಐ ಅಥವಾ ಮಿನಿಮಂ-ಡೀಟೈಲ್ ಪಿಪಿಐಅನ್ನು, ನೀಡುವರು, ಮತ್ತು ಬ್ಯಾಂಕಿನ ವಿವೇಚನೆಗೆ ತಕ್ಕಂತೆ ಮತ್ತು ಈ ನಿಯಮ ಮತ್ತು ಷರತ್ತುಗಳಿಗೆ ಅನ್ವಯವಾಗಿ, ಸೀಮಿತವಾದ ಪೇಜ್ಯಾಪ್ ಸೇವೆಗಳನ್ನು ಉಪಯೋಗಿಸಬಹುದು.

3.3 ಗ್ರಾಹಕರು ಮಿನಿಮಂ-ಡೀಟೈಲ್ ಪಿಪಿಐಗಳನ್ನು ಪರಿಪೂರ್ಣ ಕೆವೈಸಿ ಪ್ರಕ್ರಿಯೆಯನ್ನು ಉಪಯೋಗಿಸಿಕೊಂಡಿ ಪರಿಪೂರ್ಣ ಕೆವೈಸಿ ಪಿಪಿಐಗೆ ಪರಿವರ್ತನೆ ಮಾಡಿಕೊಳ್ಳಬಹುದು.

**4. ಮಿನಿಮಂ-ಡೀಟೈಲ್ ಪಿಪಿಐನ ನಿರ್ದಿಷ್ಟ ವೈಶಿಷ್ಟ್ಯಗಳು:**

4.1 ಈ ನಿಯಮ ಮತ್ತು ಷರತ್ತುಗಳ ದಾಖಲೆಯಲ್ಲಿರುವ ಇತರ ನಿಯಮ ಮತ್ತು ಷರತ್ತುಗಳ ಅನ್ವಯದ ಜೊತೆಗೆ, ಮಿನಿಮಂ-ಡೀಟೈಲ್ ಪಿಪಿಐಗಳಿಗೆ ಈ ಮುಂದೆ ತಿಳಿಸಲಾಗುವ ನಿಯಮ ಮತ್ತು ಷರತ್ತುಗಳು ಅನ್ವಯವಾಗುತ್ತವೆ (ಅನ್ವಯವಾಗುವ ಕಾನೂನುಗಳಲ್ಲಾಗುವ ಯಾವುದೇ ಬದಲಾವಣೆಗೆ ಬದ್ಧವಾಗಿ ಮತ್ತು/ಅಥವಾ ಯಾವುದೇ ಇತರ ಅಥವಾ ಬ್ಯಾಂಕಿನಿಂದ, ಆಗಿಂದಾಗ್ಗೆ ತಿಳಿಸಲ್ಪಡುವ ಅಥವಾ ವಿಧಿಸಲಾಗುವ ವಿವಿಧ ಅಥವಾ ಮಾರ್ಪಡಿಸಲಾದ, ನಿಯಮ ಮತ್ತು ಷರತ್ತುಗಳಿಗೆ ಅನುಗುಣವಾಗಿ, ಮಿನಿಮಂ-ಡೀಟೈಲ್ ಪಿಪಿಐಗಳಿಗೆ ಅನ್ವಯವಾಗುತ್ತವೆ.

(ಅ) ಈ ಪಿಪಿಐಯು ಪುನಃ ಭರ್ತಿಮಾಡುವ ಗುಣವನ್ನು ಹೊಂದಿರುತ್ತದೆ, ಮತ್ತು ಕೇವಲ ಎಲೆಕ್ಟ್ರಾನಿಕ್ ರೂಪದಲ್ಲಿ, ಕಾರ್ಡುಗಳ ರೂಪವನ್ನು ಸೇರಿದಂತೆ, ಕ್ಯಾಶ್ ಭರ್ತಿಮಾಡುವ ಸೌಲಭ್ಯವಿಲ್ಲದ, ಬ್ಯಾಂಕಿನ ವಿವೇಚನೆಗೆ ಒಳಪಟ್ಟಿರುತ್ತದೆ.

(ಬ) ಯಾವುದೇ ತಿಂಗಳಲ್ಲಿ ಈ ಪಿಪಿಐನಲ್ಲಿ ಭರ್ತಿಮಾಡುವ ಮೊತ್ತವು ರೂ. 10,000/-ವನ್ನು ಮೀರುವಂತಿಲ್ಲ ಮತ್ತು ಈ ಪಿಪಿಐನಲ್ಲಿ ಒಂದು ಆರ್ಥಿಕ ವರ್ಷದಲ್ಲಿ ಭರ್ತಿಮಾಡುವ ಒಟ್ಟು ಮೊತ್ತವು ರೂ. 1,20,000/-ವನ್ನು ಮೀರುವಂತಿಲ್ಲ.

(ಕ) ಈ ಪಿಪಿಐನಲ್ಲಿ ಯಾವುದೇ ಸಂದರ್ಭದಲ್ಲಿರಬಹುದಾದ ಬಾಕಿ ಉಳಿದಿರುವ ಮೊತ್ತವು ರೂ. 10,000/-ವನ್ನು ಮೀರಬಾರದು.

(ಡ) ಯಾವುದೇ ತಿಂಗಳಿನಲ್ಲಿ ಈ ಪಿಪಿಐನಿಂದ ಡೆಬಿಟ್‌ಆಗುವ ಒಟ್ಟು ಮೊತ್ತವು ರೂ. 10,000/-ವನ್ನು ಮೀರುವಂತಿಲ್ಲ.

(ಈ) ಈ ಪಿಪಿಐಅನ್ನು ಸಾಮಾನು ಹಾಗೂ ಸೇವೆಗಳನ್ನು, ಈ ನಿಯಮ ಮತ್ತು ಷರತ್ತುಗಳ ದಾಖಲೆಯಲ್ಲಿರುವ ನಿಯಮಗಳಿಗೆ ಅನ್ವಯವಾಗುವಂತೆ, ಕೊಂಡುಕೊಳ್ಳಲು ಮಾತ್ರ ಉಪಯೋಗಿಸತಕ್ಕದ್ದು. ಬ್ಯಾಂಕು, ಕಾಲಕಾಲಕ್ಕೆ ಈ ಪಿಪಿಐನಲ್ಲಿ ಸಾಮಾನು ಮತ್ತು ಸೇವೆಗಳನ್ನು ಕೊಳ್ಳಲು ಅನ್ವಯವಾಗುವ ಮಿತಿಯನ್ನು, ಸಮಗ್ರ ಪಿಪಿಐ ಮಿತಿಯೊಳಗಿರುವಂತೆ ತೀರ್ಮಾನಿಸಬಹುದು ಮತ್ತು ಗ್ರಾಹಕರು ಅದನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

(ಫ) ಈ ಕೆಳಗಿನ (i)ರಲ್ಲಿರುವಂತೆ, ಈ ಪಿಪಿಐನಿಂದ ಬ್ಯಾಂಕ್ ಖಾತೆಗಳಿಗೆ ಹಣ ವರ್ಗಾವಣೆ ಮತ್ತು ಇತರ ಪಿಪಿಐಗಳಿಗೆ, ಬ್ಯಾಂಕ್ ಅಥವಾ ಇತರ ಪಿಪಿಐ ವಿತರಕರಿರಬಹುದು, ವರ್ಗಾವಣೆ ಮಾಡಲು ಅನುಮತಿಸಲಾಗುವುದಿಲ್ಲ.

(ಗ) ಈ ಪಿಪಿಐನಿಂದ ಹಣ ವಾಪಸ್ ಪಡೆಯಲು (ವಿತ್‌ಡ್ರಾಯಲ್) ಸಾಧ್ಯವಿಲ್ಲ.

(ಹ) ಈ ವಿಷಯಕ್ಕೆ ಸಂಬಂಧಿಸಿದಂತೆ ಆರ್‌ಬಿಐ ಪಿಪಿಐ ನಿರ್ದೇಶನಗಳಿಗೆ ಒಳಪಟ್ಟಂತೆ, ಈ ಪಿಪಿಐಗೆಂದು ಮಿನಿಮಂ ಕೆವೈಸಿ ಪ್ರಕ್ರಿಯೆಯಲ್ಲಿ ನೀಡಲಾಗಿದ್ದ "ಕನಿಷ್ಠ ವಿವರಗಳನ್ನು" ಅದೇ ಮೊಬೈಲ್ ಸಂಖ್ಯೆಗೆಂದು ಮುಂದೊಮ್ಮೆ ಮತ್ತೊಂದು ಮಿನಿಮಂ-ವಿವರಣೆ ಪಿಪಿಐಅನ್ನು ನೀಡಲಾಗುವುದಿಲ್ಲ.

(ಐ) ಗ್ರಾಹಕರು ಈ ಪಿಪಿಐಅನ್ನು ಯಾವುದೇ ಸಮಯದಲ್ಲಾದರೂ, ಸಂಬಂಧಪಟ್ಟ ಆರ್‌ಬಿಐ ನಿಯಮಾವಳಿಗೆ ಅನುಸಾರವಾಗಿ, ಮತ್ತು ಬ್ಯಾಂಕಿಗೆ ತೃಪ್ತಿಕರವಾಗಿ ಅನ್ವಯವಾಗುವ ಇತರ ಕಾನೂನುಗಳಿಗೆ ಒಳಪಟ್ಟು, ಅನ್ವಯವಾಗುವ ಕೆವೈಸಿ ಅವಶ್ಯಕತೆಗಳನ್ನು,ಪೂರ್ಣಗೊಳಿಸಿದ್ದರೆ, ಮತ್ತು ಪೂರ್ಣಗೊಳಿಸಿದ ನಂತರ, ಶಾಶ್ವತವಾಗಿ ಮುಚ್ಚುವ/ಅಂತ್ಯಗೊಳಿಸುವ ಆಯ್ಕೆ ಗ್ರಾಹಕರಿಗೆ ಇರುತ್ತದೆ. ಈ ರೀತಿ ಶಾಶ್ವತವಾಗಿ ಸದರಿ ಪಿಪಿಐಅನ್ನು ಮುಚ್ಚುವ ಆಯ್ಕೆಯನ್ನು ಗ್ರಾಹಕರು ಪೇಜ್ಯಾಪ್ ಅಪ್ಲಿಕೇಷನ್ ಬಳಸಿಕೊಂಡು ಸಕ್ರಿಯಗೊಳಿಸಬಹುದು. ಒಮ್ಮೆ ಶಾಶ್ವತವಾಗಿ ಮುತಾಯಗೊಳಿಸಿದ ಪಿಪಿಐಅನ್ನಾಗಲಿ, ಅಥವಾ ಅದರಲ್ಲಿರುವ ಯಾವುದೇ ಡ್ಯಾಟಾವನ್ನಾಗಲಿ, ಗ್ರಾಹಕರು ಪುನಃ ದೊರಕಿಸಿಕೊಳ್ಳಲು ಆಸ್ಪದವಿರುವುದಿಲ್ಲ. ಮುಂದುವರಿದು, ಅದರಲ್ಲಿ ಅಂತ್ಯಗೊಳಿಸುವ ಕಾಲದಲ್ಲಿ ಬಾಕಿ ಉಳಿದಿರಬಹುದಾದ ಹಣವನ್ನು, ಗ್ರಾಹಕರ ಕೋರಿಕೆ/ಪ್ರಾರ್ಥನೆಯ ಮೇರೆಗೆ, "ಮೂಲ ಖಾತೆಗೆ ವಾಪಸ್" (ಅಂದರೆ, ಈ ಪಿಪಿಐಅನ್ನು ಯಾವ ಮೂಲದಿಂದ ತುಂಬಲಾಗಿತ್ತೋ ಅದಕ್ಕೆ) ವರ್ಗಾವಣೆ ಮಾಡಿಕೊಳ್ಳಬಹುದು. ಬದಲಾಗಿ, ಹಾಗೆ ಅಂತ್ಯಗೊಳಿಸುವ ಸಮಯದಲ್ಲಿ, ಬಾಕಿ ಉಳಿದಿರುವ ಹಣವನ್ನುಗ್ರಾಹಕರು ಅವರ 'ಸ್ವಂತ' ಖಾತೆಗೂ ವರ್ಗಾವಣೆ ಮಾಡಿಕೊಳ್ಳಬಹುದು.

(ಬ್ಯಾಂಕಿನಿಂದ ಸೂಕ್ತ ಪರಿಶೀಲನೆಗೆ ಒಳಪಟ್ಟು, ಪಿಪಿಐ ನೀಡುವವರು ನಿಗದಿ ಪಡಿಸುವ ರೀತಿಯಲ್ಲಿ) ಮತ್ತು ಸಂಬಂಧಪಟ್ಟ ಆರ್‌ಬಿಐ ನಿಯಮಾವಳಿಗೆ ಅನುಸಾರವಾಗಿ, ಮತ್ತು ಬ್ಯಾಂಕಿಗೆ ತೃಪ್ತಿಕರವಾಗಿ ಅನ್ವಯವಾಗುವ ಇತರ ಕಾನೂನುಗಳಿಗೆ ಒಳಪಟ್ಟು, ಅನ್ವಯವಾಗುವ ಕೆವೈಸಿ ಅವಶ್ಯಕತೆಗಳನ್ನು, ಪೂರ್ಣಗೊಳಿಸಿದ್ದರೆ, ಮತ್ತು ಪೂರ್ಣಗೊಳಿಸಿದ ನಂತರ, ಈ ವರ್ಗಾವಣೆ ಸಾಧ್ಯವಾಗುತ್ತದೆ. ಮಿನಿಮಂ-ಡೀಟೈಲ್ ಪಿಪಿಐಅನ್ನು ಮುಕ್ತಾಯಗೊಳಿಸಿದ ನಂತರವೂ ಸಹ, ಗ್ರಾಹಕರ ಬ್ಯಾಂಕ್ ಖಾತೆ ಮತ್ತು/ ಅಥವಾ 'ಪಾವತಿ ಮೂಲಕ್ಕೆ ವಾಪಸ್' (ಬ್ಯಾಕ್ ಟು ಪೇಮೆಂಟ್ ಸೋರ್ಸ್)ಗೆ, ಅಂದರೆ ಯಾವ ಮೂಲ ಖಾತೆಗೆ ಹಣವನ್ನು ವರ್ಗಾವಣೆ ಮಾಡಲು ಸೂಚಿಲಾಗಿರುತ್ತದೋ ಅದಕ್ಕೆ ಸಂಬಂಧಿಸಿರುವ ಮಾಹಿತಿ/ದಾಖಲಾತಿಗಳನ್ನು ಸಲ್ಲಿಸುವಂತೆ ಗ್ರಾಹಕರಿಗೆ ಕರೆ ನೀಡುವ ಹಕ್ಕನ್ನುಬ್ಯಾಂಕ್ ಹೊಂದಿದೆ ಎಂಬುದನ್ನು ಗ್ರಾಹಕರು ಒಪ್ಪಿರುತ್ತಾರೆ.

4.2. ಈ ಪಿಪಿಐನ (ಮಿನಿಮಂ-ಡೀಟೈಲ್ ಪಿಪಿಐ) ವೈಶಿಷ್ಟ್ಯಗಳನ್ನು, ಮೇಲೆ ಕಾಣಿಸಿರುವ ವಿಶೇಷತೆಗಳನ್ನೂ ಒಳಗೊಂಡು, ಬ್ಯಾಂಕು ಸ್ಪಷ್ಟವಾಗಿ ಅಥವಾ ಪೇಜ್ಯಾಪ್ ಅಪ್ಲಿಕೇಷ- ನ್ನಿನಲ್ಲಿ ನಿಗದಿಯಾದ ರೀತಿಯಲ್ಲಿ ಮತ್ತು/ಅಥವಾ ಎಸ್‌ಎಂಎಸ್ ಮೂಲಕ ಅಥವಾ ಈ-ಮೈಲ್/ಅಂಚೆ ಮೂಲಕ ಅಥವಾ ಪಿಪಿಐಅನ್ನು ನೀಡುವ ಸಂದರ್ಭದಲ್ಲಿ ಸಾಧ್ಯವಾದ ಇತರ ಯಾವುದೇ ಮಾಧ್ಯಮದ ಮೂಲಕ ಗ್ರಾಹಕರ ಗಮನಕ್ಕೆ ತಂದಿರುವುದನ್ನು ಗ್ರಾಹಕರು ಸ್ವೀಕರಿಸಿರುತ್ತಾರೆ ಮತ್ತು ಗ್ರಾಹಕರು ಅವೆಲ್ಲವುಗಳನ್ನೂ ಸಂ0ಪೂರ್ಣವಾಗೆ ಅರ್ಥಮಾಡಿಕೊಂಡು, ಅವುಗಳಿಗೆ ಬದ್ಧರಾಗಿರುವುದಾಗೆ ಮತ್ತು ಎಲ್ಲ ತುಂಬುವ (ಲೋಡಿಂಗ್) ಹಾಗೂ ಈ ಕೆಳಗಿನ ಇನ್ನಿತರ ವ್ಯವಹಾರಗಳನ್ನು, ಪಿಪಿಐಗೆ ಹಣವನ್ನು ಪ್ರಥಮ ಬಾರಿಗೆ ತುಂಬುವುದನ್ನೂ ಸೇರಿದಂತೆ, ಇಲ್ಲಿ ತಿಳಿಸಿರುವಂತೆಯೇ ಮಾಡುವುದಾಗಿ ಒಪ್ಪಿರುತ್ತಾರೆ.

**5. ಪರಿಪೂರ್ಣ ಕೆವೈಸಿ ಪಿಪಿಐನ ನಿರ್ದಿಷ್ಟ ವೈಶಿಷ್ಟ್ಯಗಳು:**

5.1 ಈ ನಿಯಮ ಮತ್ತು ಷರತ್ತುಗಳ ದಾಖಲೆಯಲ್ಲಿ ನಮೂದಿಸಲಾಗಿರುವ ನಿಯಮ ಮತ್ತು ಷರತ್ತುಗಳಲ್ಲದೇ, ಹೆಚ್ಚುವರಿಯಾಗಿ, ಈ ಕೆಳಗಿನ ನಿಯಮ ಮತ್ತು ಷರತ್ತುಗಳು ಪರಿಪೂರ್ಣ ಕೆವೈಸಿ ಪಿಪಿಐಗಳಿಗೆ (ಅನ್ವಯವಾಗುವ ಕಾನೂನುಗಳಲ್ಲಾಗಬಹುದಾದ ಯಾವುದೇ ವ್ಯತ್ಯಯ/ಬದಲಾಣೆ ಮತ್ತು/ಅಥವಾ ಯಾವುದೇ ಇತರ ಅಥವಾ ವಿಧವಾದ ಅಥವಾ ಮಾರ್ಪಟ್ಟಿರುವ, ಬ್ಯಾಂಕಿನಿಂದ ಕಾಲಕಾಲಕ್ಕೆ ತಿಳಿಸಲಾದ ಅಥವಾ ನಿಗದಿಪಡಿಸಲಾದ ನಿಯಮ ಮತ್ತು ಷರತ್ತುಗಳನ್ನು ಒಳಗೊಂಡು ಒಳಪಟ್ಟಂತೆ) ಅನ್ವಯವಾಗುವುವು.

(ಅ) ಪಿಪಿಐಯು ಪುನಃ ತುಂಬಬಹುದಾದ (ರೀ-ಲೋಡಬಲ್) ಗುಣವುಳ್ಳದ್ದಾಗಿದೆ ಮತ್ತು ಎಲೆಕ್ಟ್ರಾನಿಕ ರೂಪದಲ್ಲಿ ಮಾತ್ರ, ಕಾರ್ಡ್ ರೂಪವನ್ನೊಳಗೊಂಡಂತೆ, ಬ್ಯಾಂಕಿನ ವಿವೇಚನೆಗೆ ತಕ್ಕಂತೆ ನೀಡಬಹುದಾಗಿರುತ್ತೆ.

(ಬ) ಈ ಪಿಪಿಐನಲ್ಲಿ ಇರಬಹುದಾದ ಮೊತ್ತವು, ಯಾವುದೇ ಸಮಯದಲ್ಲೂ ರೂ.2,00,000/-ವನ್ನು ಮೀರುವಂತಿಲ್ಲ.

(ಕ) ಈ ಪಿಪಿಐನಲ್ಲಿರುವ ಹಣವನ್ನು, 'ಮೂಲಖಾತೆಗೆ ವಾಪಸ್' (ಅಂದರೆ ಈ ಪಿಪಿಐಗೆ ಯಾವ ಖಾತೆಯಿಂದ ಹಣವನ್ನು ಪಾವತಿಸಲಾಯಿತೋ ಆ ಮೂಲ ಖಾತೆಯಿಂದ) ಅಥವಾ 'ಗ್ರಾಹಕರ ಸ್ವಂತ ಖಾತೆಯಿಂದ' (ಬ್ಯಾಂಕಿನ ಸೂಕ್ತ ಪರಿಶೀಲನೆಗೆ ಒಳಪಟ್ಟು) ಮತ್ತು ಈ ಸಂಬಂಧದಲ್ಲಿ ಕಾಲಾನುಕಾಲಕ್ಕೆ ಬ್ಯಾಂಕು ತನ್ನ ವಿವೇಚನೆಗೆ ಸೂಕ್ತವೆಂದು ಕಂಡಂತೆ ಇತಿಮಿತಿಯನ್ನು ವಿಧಿಸಿದಂತೆ, ಗ್ರಾಹಕರ ಅಪಾಯನಿರ್ವಹಣೆ ಸೂಚನಾ ಚಿತ್ರಣವನ್ನು (ರಿಸ್ಕ್ ಪ್ರೊಫೈಲ್) ಗಮನದಲ್ಲಿಟ್ಟುಕೊಳ್ಳುವುದು, ನಿರ್ವಹಣೆಯಲ್ಲಿ ಎದುರಾಗಬಹುದಾದ ಇತರ ಅಪಾಯಗಳು ಮುಂತಾದವುಗಳನ್ನು ಒಳಗೊಂಡಂತೆ, ವಿಧಿಸಲಾಗುವ ಮಿತಿಯನ್ನು ಮೀರದಂತೆ ಗ್ರಾಹಕರು ಎಚ್ಚರ ವಹಿಸಬೇಕು.

(ಡ) ನಿಯಮ ಮತ್ತು ಷರತ್ತುಗಳ ದಾಖಲೆಯಲ್ಲಿ ಅನ್ವಯವಾಗುವ ನಿಬಂಧನೆಗಳಿಗೆ ಹಾಗೂ ಕಾಲಾನುಕಾಲಕ್ಕೆ ಬ್ಯಾಂಕು ವಿಧಿಸಬಹುದಾದ ಷರತ್ತುಗಳಿಗೆ ಒಳಪಟ್ಟು, ಬ್ಯಾಂಕು 'ನೊಂದಾವಣೆ-ಪೂರ್ವ ಫಲಾನುಭವಿಗಳು' (ಪ್ರೀ-ರಿಜಿಸ್ಟರ್ಡ್ ಬೆನಿಫಿಷಿಯರೀಸ್) ಸೌಲಭ್ಯವನ್ನು ಒದಗಿಸಬಹುದಾಗಿದ್ದು ಅದರಡಿಯಲ್ಲಿ, ಗ್ರಾಹಕರು ತಮ್ಮ ಇಚ್ಛಾನುಸಾರ ಈ ಪೇಜ್ಯಾಪ್ ಪಿಪಿಐನಲ್ಲಿ ಫಲಾನುಭವಿಗಳ ಬ್ಯಾಂಕ್ ಖಾತೆ ವಿವರಗಳನ್ನು ಅಥವಾ ಬ್ಯಾಂಕಿನಿಂದ ಅಂತಹ ಫಲಾನುಭವಿಗಳಿಗೆ ನೀಡಲಾಗಿರುವ ಪಿಪಿಐಗಳ ವಿವರಗಳನ್ನು (ಅಥವಾ ಬೇರೆ ಪಿಪಿಐ ನೀಡುವವರು ಅಂತಹ ಫಲಾನುಭವಿಗಳಿಗೆ ನೀಡಿರುವ ಪಿಪಿಐ ವಿವರಗಳನ್ನು, ಈ ಉದ್ದೇಶಕ್ಕಾಗಿ ಆರ್‌ಬಿಐ ಮತ್ತು ಬ್ಯಾಂಕು ಯಾವಾಗ ಅನುಮತಿ ನೀಡುವುದೋ ಆಗ, ನೀಡುವ ಮೂಲಕ)ಸಲ್ಲಿಸುವ ಮೂಲಕ ಫಲಾನುಭವಿಗಳನ್ನು ನೊಂದಾಯಿಸಬಹುದು. ಆದರೆ, ಅಂತಹ ಸನ್ನಿವೇಶದಲ್ಲಿ, ಗ್ರಾಹಕರೂ ಕೂಡ ಮೇಲೆ ತಿಳಿಸಿರುವ ಹೆಚ್ಚುವರಿ ವಿವರಗಳನ್ನು, ಬ್ಯಾಂಕು ಈ ದಿಸೆಯಲ್ಲಿ ನಿರ್ದೇಶಿಸುವ ರೀತಿಯಲ್ಲಿ, ಅವರ ಸಂಬಂಧ ಪಟ್ಟ ವಿವರಗಳನ್ನು ಸಲ್ಲಿಸಬೇಕಾಗುತ್ತದೆ.

(ಈ) ಮೇಲೆ ತಿಳಿಸಿರುವಂತಹ ನೊಂದಾವಣೆ-ಪೂರ್ವ ಫಲಾನುಭವಿಗಳ ವಿಷಯಕ್ಕೆ ಸಂಬಂಧಿಸಿದಂತೆ, ಹಣ ವರ್ಗಾವಣೆ ಮೊತ್ತವು ಪ್ರತಿ ಮಾಸದಲ್ಲಿ ಪ್ರತಿ ಫಲಾನುಭವಿಗೆ ರೂ. 2,00,000/- ವನ್ನು, ಅಥವಾ ಕಾಲಾನುಕಾಲಕ್ಕೆ ಬ್ಯಾಂಕು ತನ್ನ ವಿವೇಚನೆಗೆ ತೋಚಿದಂತೆ, ಗ್ರಾಹಕರ ಅಪಾಯ ನಿರ್ವಹಣಾ ಚಾತುರ್ಯ (ರಿಸ್ಕ್ ಪ್ರೊಫೈಲ್), ನಿರ್ವಹಣೆಗೆ ಸಂಬಂಧಿಸಿದ ಇತರ ಅಪಾಯಗಳನ್ನು ಗಮನದಲ್ಲಿಟ್ಟುಕೊಂಡು, ವಿಧಿಸಬಹುದಾದ ಅದಕ್ಕಿಂತ ಕಡಿಮೆ ಮೊತ್ತದ ಮಿತಿಯನ್ನು, ಮೀರುವಂತಿಲ್ಲ. ಇನ್ನಿತರ ಎಲ್ಲ ಸನ್ನಿವೇಶಗಳಿಗೂ ಹಣ ವರ್ಗಾವಣೆ ಮಿತಿಯು ಪ್ರತಿ ತಿಂಗಳಿಗೆ ರೂ. 10,000/- ಆಗಿರುತ್ತದೆ.

(ಫ) ಮೇಲೆ ತಿಳಿಸಿರುವಂತಹ ಪರಿಪೂರ್ಣ ಕೆವೈಸಿ ಪಿಪಿಐನಿಂದ ಇತರ ಪಿಪಿಐಗಳಿಗೆ ಮತ್ತು ಗ್ರಾಹಕರ ಬ್ಯಾಂಕ್ ಖಾತೆಗೆ, ಈ ಮೇಲೆ ನಿಗದಿಪಡಿಸಿರುವ ಮಿತಿಯೊಳಗೆ ಹಣ ವರ್ಗಾವಣೆಯನ್ನು ಅನುಮತಿಸಬಹುದಾಗಿದೆ.

(ಗ) ಈ ಪಿಪಿಐಅನ್ನು ಬಳಸಿಕೊಂಡು ಸರಕು ಮತ್ತು ಸೇವೆಗಳನ್ನು ಕೊಳ್ಳುವುದಕ್ಕೆ ಯಾವುದೇ ಪ್ರತ್ಯೇಕ ಮಿತಿಗಳಿಲ್ಲವಾದರೂ, ಬ್ಯಾಂಕು, ತನ್ನ ವಿವೇಚನೆಗೆ ತೋರಿದಂತೆ, ಪಿಪಿಐನ ಒಟ್ಟಾರೆ ಮಿತಿಯೊಳಗೆ ಈ ಉದ್ದೇಶಕ್ಕಾಗಿ, ಕಾಲಾನುಕಾಲಕ್ಕೆ, ಮಿತಿಗಳನ್ನು ವಿಧಿಸಬಹುದಾಗಿದ್ದು, ಆ ಮಿತಿಗಳು ಗ್ರಾಹಕರಿಗೆ ಕಡ್ಡಾಯ ನಿರ್ಬಂಧಗಳಾಗುತ್ತವೆ.

(ಹ) ಬ್ಯಾಂಕು, ತನ್ನ ವಿವೇಚನೆಗೆ ತೋರಿದಂತೆ, ಈ ಪಿಪಿಐ ಅಡಿಯಲ್ಲಿ ಗ್ರಾಹಕರು ತಮಗೆ ಅನುಕೂಲಕರವಾದ ಮಿತಿಗಳನ್ನು ತಾವೇ ನಿರ್ಧರಿಸಿ ಪಾಲನೆ ಮಾಡಬಹುದಾದ ಆಯ್ಕೆ ಮಾಡಿಕೊಳ್ಳುವ ಸೌಲಭ್ಯವನ್ನು ನೀಡಬಹುದಾಗಿದೆ.

(ಐ) ಈ ಪಿಪಿಐಅನ್ನು ಶಾಶ್ವತವಾಗಿ ಮುಕ್ತಾಯಮಾಡುವ ಆಯ್ಕೆಯನ್ನು ಗ್ರಾಹಕರು ಹೊಂದಿರುತ್ತಾರೆ. ಗ್ರಾಹಕರು ತಮ್ಮ ಪೇಜ್ಯಾಪ್ ಅಪ್ಲಿಕೇಷನ್‌ನಲ್ಲೇ ಈ ಪಿಪಿಐಅನ್ನು ಶಾಶ್ವತವಾಗಿ ಮುಚ್ಚುವ ಆಯ್ಕೆ ಸೌಲಭ್ಯವನ್ನುಸಂಪನ್ನಗೊಳಿಸಬಹುದಾಗಿದೆ. ಆದರೆ, ಒಮ್ಮೆ ಶಾಶ್ವತವಾಗಿ ಮುಕ್ತಾಯಗೊಳಿಸಿದ ಪಿಪಿಐಅನ್ನು, ಅಥವಾ ಅದರಲ್ಲಿರುವ ಯಾವುದೇ ಡ್ಯಾಟಾವನ್ನು, ಮತ್ತು ಅಂತ್ಯಗೊಳಿಸಿದ ಸಮಯದಲ್ಲಿ ಅದರಲ್ಲಿರುವ ಉಳಿದಿರುವ ಬಾಕಿ ಹಣವನ್ನು ಗ್ರಾಹಕರ ಕೋರಿಕೆ/ಪ್ರಾರ್ಥನೆಯ ಮೇರೆಗೆ, ಈ ಪಿಪಿಐಗೆ ಅನ್ವಯವಾಗುವ ಮಿತಿಗಳೊಳಗೆ, ವರ್ಗಾಯಿಸಿಕೊಳ್ಳಬಹುದು. ಹಣವನ್ನು ಮೂಲ ಖಾತೆಗೆ ವಾಪಸ್ ಕಳುಹಿಸಲಾಗುವುದು. ಬದಲಾಗಿ, ಹಾಗೆ ಅಂತ್ಯಗೊಳಿ ಸುವ ಸಮಯದಲ್ಲಿ, ಬಾಕಿ ಉಳಿದಿರುವ ಹಣವನ್ನುಗ್ರಾಹಕರು ಬ್ಯಾಂಕ್‌ನ ತಮ್ಮ 'ಸ್ವಂತ' ಖಾತೆಗೂ ವರ್ಗಾಯಿಸಿಕೊಳ್ಳಬಹುದು (ಆದರೆ, ಹಣ ವರ್ಗಾವಣೆಯು ಬ್ಯಾಂಕ್‌ನ ಪರಿಶೀಲನೆ, ಪಿಪಿಐ ನೀಡುವವರು ನಿಗದಿಪಡಿಸಬಹುದಾದ ವಿಧದಲ್ಲಿ ನಡೆಯಬೇಕು) ಮತ್ತು ಗ್ರಾಹಕರು ಕೆವೈಸಿ ಅವಶ್ಯಕತೆಗಳನ್ನು, ಸಂಬಂಧಿಸಿರುವ ಆರ್‌ಬಿಐ ನಿಯಮಾವಳಿಗಳು ಮತ್ತು ಇತರ ಅನ್ವಯವಾಗುವ ಕಾನೂನುಗಳನ್ನು ಬ್ಯಾಂಕಿಗೆ ತೃಪ್ತಿಯಾಗುವಂತೆ ಪಾಲನೆ ಮಾಡುವ ಮತ್ತು ಗ್ರಾಹಕರು ಕೆವೈಸಿ ಅವಶ್ಯಕತೆಗಳನ್ನು ಪೂರೈಸಿದ ನಂತರ ಅನ್ವಯವಾಗುವ ನಿಬಂಧನೆಗೆ ಒಳಪಟ್ಟಿರುತ್ತದೆ.

Classification - Public



Classification - Public

5.2 ಈ ಪಿಪಿಐನ (ಪರಿಪೂರ್ಣ ಕೆವೈಸಿ ಪಿಪಿಐ) ವೈಶಿಷ್ಟ್ಯಗಳು, ಮೇಲೆ ಹೇಳಿರುವ ವೈಶಿಷ್ಟ್ಯಗಳನ್ನೂ ಒಳಗೊಂಡು, ತಮಗೆ ಸ್ಪಷ್ಟವಾಗಿ ತಿಳಿಸಲಾಗಿದೆ ಅಥವಾ ಬ್ಯಾಂಕಿನಿಂದ ಗ್ರಾಹಕರಿಗೆ, ಪೇಜ್ಯಾಪ್ ಅಪ್ಲಿಕೇಷನ್ ಮತ್ತು/ಅಥವಾ ಎಸ್‌ಎಂಎಸ್, ಅಥವಾ ಈ-ಮೈಲ್/ಅಂಚೆ ಮೂಲಕ, ಅಥವಾ ಪಿಪಿಐಅನ್ನು ನೀಡಿದ ಸಂದರ್ಭದಲ್ಲಿ ನಿಗದಿಗೊಳಿಸಲ್ಪಟ್ಟಿದೆ ಎಂಬುದನ್ನು ಗ್ರಾಹಕರು ಒಪ್ಪಿರುತ್ತಾರೆ ಮತ್ತು ಗ್ರಾಹಕರು ಅವೆಲ್ಲವನ್ನೂ ಸಂಪೂರ್ಣವಾಗಿ ಅರ್ಥಮಾಡಿಕೊಂಡಿರುತ್ತಾರೆ ಮತ್ತು ಅವುಗಳನ್ನು ಪಾಲಿಸಲು ಬದ್ಧರಾಗಿದ್ದಾರೆ ಎಂದು, ಮತ್ತು ಎಲ್ಲ ಲೋಡಿಂಗ್‌ಗಳು ಹಾಗೂ ಈ ಕೆಳಗಿರುವ ವ್ಯವಹಾರಗಳನ್ನು ನಡೆಸುವಾಗ, ಈ ಪಿಪಿಐಗೆ ಪ್ರಥಮ ಬಾರಿ ಹಣ ತುಂಬುವುದೂ ಸೇರಿದಂತೆ, ಒಳಪಟ್ಟಿರುತ್ತವೆ ಎಂಬುದನ್ನು ಅಂಗೀಕರಿಸಿರುತ್ತಾರೆ.

**6. ಪೇಜ್ಯಾಪ್ ಪಿಪಿಐಗಳ ಸಾಮಾನ್ಯ ವಿಶೇಷತೆಗಳು**

(ಅ) ಈ ನಿಯಮ ಮತ್ತು ಷರತ್ತುಗಳ ದಾಖಲೆಯಲ್ಲಿ ನಮೂದಿಸಲಾಗಿರುವ ನಿಯಮ ಮತ್ತು ಷರತ್ತುಗಳಲ್ಲದೇ, ಹೆಚ್ಚುವರಿಯಾಗಿ, ಈ ಕೆಳಗಿನ ನಿಯಮ ಮತ್ತು ಷರತ್ತುಗಳು ಪಿಪಿಐಗಳು ಮತ್ತು ಪರಿಪೂರ್ಣ ಕೆವೈಸಿ ಪಿಪಿಐಗಳಿಗೆ (ಅನ್ವಯವಾಗುವ ಕಾನೂನುಗಳಲ್ಲಾಗಬಹುದಾದ ಯಾವುದೇ ವ್ಯತ್ಯಯ/ಬದಲಾಣೆ ಮತ್ತು/ಅಥವಾ ಯಾವುದೇ ಇತರ ಅಥವಾ ವಿಧವಾದ ಅಥವಾ ಮಾರ್ಪಟ್ಟಿರುವ, ಬ್ಯಾಂಕಿನಿಂದ ಕಾಲಕಾಲಕ್ಕೆ ತಿಳಿಸಲಾದ ಅಥವಾ ನಿಗದಿಪಡಿಸಲಾದ ನಿಯಮ ಮತ್ತು ಷರತ್ತುಗಳನ್ನು ಒಳಗೊಂಡು ಒಳಪಟ್ಟಂತೆ) ಅನ್ವಯವಾಗುವುವು.

(ಬ) ಪೇಜ್ಯಾಪ್ ಪಿಪಿಐನಲ್ಲಿ ಉಳಿದಿರುವ ಬಾಕಿ ಹಣಕ್ಕೆ ಯಾವುದೇ ಬಡ್ಡಿಯನ್ನು ಕೊಡುವುದಿಲ್ಲ.

(ಕ) ಪೇಜ್ಯಾಪ್ ಪಿಪಿಐಅನ್ನು ಐಎನ್‌ಆರ್ **(ಭಾರತದ ರೂಪಾಯಿ)** ನಲ್ಲಿ ಮಾತ್ರ ಲೋಡ್/ರೀಲೋಡ್ ಮಾಡಲು, ಬ್ಯಾಂಕ್ ಖಾತೆಗೆ ಡೆಬಿಟ್ ಮೂಲಕ, ಲಿಂಕ್ ಆಗಿರುವಕಾರ್ಡ್ ಮೂಲಕ, ಇತರ ಕ್ರೆಡಿಟ್ ಮತ್ತು ಡೆಬಿಟ್ ಕಾರ್ಡ್‌ಗಳು, ಯುಪಿಐ, ಮತ್ತು ಇತರ ಪಿಪಿಐಗಳು (ಕಾಲಕಾಲಕ್ಕೆ ಆರ್‌ಬಿಐನಿಂದ ಮತ್ತು ಬ್ಯಾಂಕಿನಿಂದ ಸಂಬಂಧಿತ ಆರ್‌ಬಿಐ ನಿಯಮಗಳಿಗೆ ಒಳಪಟ್ಟು, ಪಿಪಿಐಗಳ ಎಲೆಕ್ಟ್ರಾನಿಕ್ ಲೋಡಿಂಗ್/ರೀಲೋಡಿಂಗ್/ಮೇಲೆ ತಿಳಿಸಿರುವ, ಭಾರತದ ಸಂಸ್ಥೆಗಳಿಂದ ನಿಯಂತ್ರಣಕ್ಕೊಳಪಟ್ಟಿರುವ ಪಾವತಿಸುವ ಸಾಧನಗಳ ಮೂಲಕ ಸಕ್ರಿಯಗೊಳಿಸಲು ಅನುಮತಿಯಿರುತ್ತದೆ.

(ಡ) ಗ್ರಾಹಕರು ತಮ್ಮ ಪೇಜ್ಯಾಪ್ ಪಿಪಿಐ ವ್ಯವಹಾರಗಳನ್ನು ಅಥವಾ ಸ್ಟೇಟ್‌ಮೆಂಟ್‌ಗಳನ್ನು ಪಾಸ್‌ಬುಕ್ ಅಥವಾ ವ್ಯಾಲೆಟ್ ಸ್ಟೇಟ್‌ಮೆಂಟ್ ಮೂಲಕ, ಪೇಜ್ಯಾಪ್ ಅಪ್ಲಿಕೇಷನ್ ಒಳಗೆ ನೋಡಿಕೊಳ್ಳುವ ಆಯ್ಕೆ ಇರುತ್ತದೆ. ಗ್ರಾಹಕರು ತಮ್ಮ ಲಿಂಕ್ ಆಗಿರುವ ಕಾರ್ಡ್‌ಗಳಲ್ಲಿ ನೋಡಿಕೊಳ್ಳಬಹುದು.

(ಈ) ಸಂಬಂಧಿಸಿದ ಆರ್‌ಬಿಐ ನಿಯಮಾವಳಿಗಳು ಮತ್ತು ಅನ್ವಯವಾಗುವ ಕಾನೂನುಗಳಡಿಯಲ್ಲಿ ಕೆವೈಸಿ ಅವಶ್ಯಕತೆಗಳನ್ನು ಅನುಸರಿಸದೆ ಇದ್ದಲ್ಲಿ, ಯಾವುದೇ ರೆಮಿಟ್ಟನ್ಸ್ ಪಾವತಿಗಳಿಗೆ ಅವಕಾಶವಿರುವುದಿಲ್ಲ.

(ಫ) ಒಂದುವರ್ಷ ಕಾಲ ಯಾವುದೇ ಹಣಕಾಸಿನ ವ್ಯವಹಾರಗಳಿಲ್ಲದ ಪಿಪಿಐಅನ್ನು, ಗ್ರಾಹಕರಿಗೆ ಸೂಕ್ತ ತಿಳುವಳಿಕೆ ನೀಡಿ, ಬ್ಯಾಂಕು ಅಚೇತನ(ಸ್ಥಗಿತ) ಗೊಳಿಸು - ತ್ತದೆ. ಅದನ್ನು, ಮೌಲೀಕೃತಗೊಳಿಸಿದ ನಂತರ, ಬ್ಯಾಂಕು ಸೂಕ್ತವಾಗಿ ಶ್ರದ್ಧೆ ವಹಿಸಿ ಪುನರ್ಮೌಲೀಕರಣಗೊಳಿಸಲಾಗುವುದು.

(ಗ) ಯಾವುದೇ ಕಾರಣದಿಂದ, ಆರ್‌ಬಿಐ ನಿರ್ದೇಶನಗಳ ಅಡಿಯಲ್ಲಿ, ಯೋಜನೆಯನ್ನು ಕೈಬಿಡಬೇಕಾಗಿದ್ದಲ್ಲಿ ಅಥವಾ ಆರ್‌ಬಿಐ ಯೋಜನೆಯನ್ನು ಸ್ಥಗಿತಗೊಳಿಸಲು ನಿರೇಶಿಸಿದಲ್ಲಿ, ಗ್ರಾಹಕರ ಪಿಪಿಐ (ಪೇಜ್ಯಾಪ್ ಪಿಪಿಐ) ನಲ್ಲಿ ಉಳಿದಿರುವ ಬಾಕಿ ಹಣವನ್ನು ಪಡೆದುಕೊಳ್ಳಲು ಬ್ಯಾಂಕು ಅನುಮತಿಸಬಹುದು.

**7 ಪಿಪಿಐನ ಇತರ ಷರತ್ತುಗಳು:**

7.1 ಅನ್ವಯವಾಗುವ ಕಾನೂನಿನಂತೆ ಪೇಜ್ಯಾಪ್ ಪಿಪಿಐಅನ್ನು ಬಳಸಲು ಗ್ರಾಹಕರು ಜವಾಬ್ದಾರರಾಗಿರುತ್ತಾರೆ.

7.2 ಗ್ರಾಹಕರಿಗೆ ನೀಡಲಾಗಿರುವ ಪೇಜ್ಯಾಪ್ ಪಿಪಿಐ ಒಂದು ಪ್ರೀಪೈಡ್ ಪೇಮೆಂಟ್ ಸಾಧನ; ಮತ್ತು, ಅದೇ ಕಾರಣದಿಂದ ಪೇಜ್ಯಾಪ್ ಪಿಪಿಐ ಗ್ರಾಹಕರಿಂದ ಬಳಸಲ್ಪಟ್ಟಾಗ ಆ ಬಳಕೆಯು ಪ್ರೀಪೈಡ್ ಪೇಮೆಂಟ್ ಸಾಧನಗಳಿಗೆ ಸಂಬಂಧಿಸಿದಂತೆ ಆರ್‌ಬಿಐನವರು ಕಡ್ಡಾಯಗೊಳಿಸಬಹುದಾದ ರೀತಿಯಲ್ಲಿ, ಯಾವುದೇ ಮಿತಿ ಇಲ್ಲದಿರುವ ಆರ್‌ಬಿಐನವರ ನಿರ್ದೇಶನಗಳನ್ನೊಳಗೊಂಡಂತೆ, ಎಲ್ಲ ನಿಯಮ ಮತ್ತು ಷರತ್ತುಗಳಿಗೆ ಒಳಪಟ್ಟಿರುತ್ತದೆ.

7.3 ಗ್ರಾಹಕರಿಂದ ಪೇಜ್ಯಾಪ್ ಆಪ್ಗೆ ಕೊಡಲ್ಪಟ್ಟಿದ್ದ ಲಾಗ್‌ಇನ್ ಮತ್ತು ರುಜುವಾತುಗಳನ್ನೇ (ಕ್ರೆಡೆನ್‌ಷಿಯಲ್ಸ್), ಸುರಕ್ಷಿತ(ಸೆಕ್ಯೂರ್) ಪಿನ್ ಒಳಗೊಂಡಂತೆ, ಪಿಪಿಐ ಮತ್ತು ಇತರ ಸೇವೆಗಳಿಗೆ ಬ್ಯಾಂಕಿನಿಂದ ನಿಯೋಜಿಸಲ್ಪಡುತ್ತದೆ, ಮತ್ತು ಈ ವಿಚಾರವು ಬ್ಯಾಂಕಿನಿಂದ ಗ್ರಾಹಕರಿಗೆ ತಿಳಿಸಲ್ಪಟ್ಟಿದೆ ಎಂದು ಗ್ರಾಹಕರು ಒಪ್ಪಿರುತ್ತಾರೆ.

7.4 ಇಟಿಬಿ ಗ್ರಾಹಕರ ವಿಚಾರದಲ್ಲಿ, ನೊಂದಾವಣೆ ಸಂದರ್ಭದಲ್ಲಿ, ಮತ್ತು ಗ್ರಾಹಕರ ದೃಢೀಕರಣವು ಯಶಸ್ವಿಯಾಗಿ ಪೂರ್ಣಗೊಂಡಿದ್ದ ಪಕ್ಷದಲ್ಲಿ, ಬ್ಯಾಂಕಿನಿಂದ ನೀಡಲ್ಪಟ್ಟ ಯಾವುದೇ ಕಾರ್ಡ್, ಅವರ ಖಾತೆ ಅಥವಾ ಗ್ರಾಹಕರ ಐಡಿಗೆ ಲಿಂಕ್ ಆಗಿದ್ದಲ್ಲಿ, ಪೇಜ್ಯಾಪ್ ಪಿಪಿಐಗೂ ಯಾಂತ್ರಿಕವಾಗಿ ಲಿಂಕ್ ಆಗಿಬಿಡುತ್ತದೆ.

7.5 ಪೇಜ್ಯಾಪ್ ಪಿಪಿಐನ ಬಳಕೆ ಮತ್ತು ಲೋಡಿಂಗ್‌ಗೆ ಸಂಬಂಧಿಸಿದಂತೆ, ಈ ಕೆಳಗಿನ ಅಂಶಗಳನ್ನು ಗ್ರಾಹಕರು ಒಪ್ಪಿರುತ್ತಾರೆ ಮತ್ತು ಸ್ವೀಕರಿಸಿರುತ್ತಾರೆ:

(ಅ) ಪೇಜ್ಯಾಪ್ ಪಿಪಿಐಅನ್ನು ಪೇಜ್ಯಾಪ್ ಅಪ್ಲಿಕೇಷನ್ ನೊಂದಾವಣೆ ಸಂದರ್ಭದಲ್ಲಿ ಬಳಸಲಾಗಿದ್ದ ಮೊಬೈಲ್ ಸಾಧನದ ಮೂಲಕ ಮಾತ್ರ ದೊರಕಿಸಿಕೊಳ್ಳಬಹುದು. ಪೇಜ್ಯಾಪ್ ಪಿಪಿಐಅನ್ನು ಯಾವುದೇ ಸಂದರ್ಭದಲ್ಲೂ ಬೇರೆ ಯಾವ ಸಾಧನದಿಂದಲೂ ಉಪಯೋಗಿಸಲ್ ಪ್ರಯತ್ನಿಸುವುದಿಲ್ಲ ಎಂದು ಗ್ರಾಹಕರು ಒಪ್ಪಿಕೊಳ್ಳುತ್ತಾರೆ ಮತ್ತು ದೃಢೀಕರಿಸುತ್ತಾರೆ.

(ಬ) ಪೇಜ್ಯಾಪ್ ಪಿಪಿಐಅನ್ನು ಯಾವುದೇ ಏಟಿಎಂ ಅಥವಾ ಅದೇ ತರಹದ ಬೇರಾವ ಸಾಧನದ ಮೂಲಕವೂ ದೊರಕಿಸಿಕೊಳ್ಳಲಾಗದು.

(ಕ) ಪೇಜ್ಯಾಪ್ ಪಿಪಿಐನಲ್ಲಿ ಬಾಕಿ ಉಳಿಕೆ ಹಣವು, ಯಾವುದೇ ಸಂದರ್ಭದಲ್ಲೂ, ಮಿನಿಮಂ-ಡೀಟೈಲ್ ಪಿಪಿಐಗೆ ಸಂಬಂಧಿಸಿದಂತೆ ರೂ. 10,000/-ವನ್ನುಮೀರುವಂತಿಲ್ಲ, ಮತ್ತು ಪರಿಪೂರ್ಣ ಕೆವೈಸಿ ಪಿಪಿಐಗೆ ಸಂಬಂಧಿಸಿದಂತೆ ರೂ. 2,00,000/-ವನ್ನು ಮೀರುವಂತಿಲ್ಲ, ಅಥವಾ ಬ್ಯಾಂಕ್ ನಿಗದಿಪಡಿಸಬಹುದಾದ ಇತರ ಮಿತಿಯನ್ನು ಮೀರಬಾರದು.

Classification - Public



Classification - Public

(ಡ) ಗ್ರಾಹಕರಿಗೆ ನೀಡಲಾಗುವ ಯಾವುದೇ ಪೇಜ್ಯಾಪ್ ಪಿಪಿಐ, ಗ್ರಾಹಕರಿಂದ ಅಥವಾ ತನ್ನ ವಿವೇಚನೆ ತೋಚಿದಂತೆ ಬ್ಯಾಂಕಿನಿಂದ ಅಮಾನ್ಯ - ಗೊಳಿಸಲ್ಪಟ್ಟಿರುವ ಸಂದರ್ಭಗಳನ್ನು ಹೊರತುಪಡಿಸಿ, ಜೀವನಪರ್ಯಂತ ಸಿಂಧುತ್ವ ಅಥವಾ ಮಾನ್ಯತೆ ಹೊಂದಿರುತ್ತದೆ.

7.6 ಪ್ರತಿಯೊಂದು ವಿಧದ/ವರ್ಗದ ಪಿಪಿಐಗೆ (ಪೇಜ್ಯಾಪ್ ಪಿಪಿಐ) ನಿಗದಿಪಡಿಸಿರುವ ಆರ್ಥಿಕ ಮಿತಿಗಳಿಗೆ ಗ್ರಾಹಕರು ಬದ್ಧರಾಗಿರಬೇಕು.

7.7 ಬ್ಯಾಂಕು ಕಾಲಾನುಕಾಲಕ್ಕೆ ತಾನೇ ನಿರ್ಧರಿಸಿ, ಈ ಮುಂದೆ ನಮೂದಿಸಿದಂತೆ ಮಾಡಬಹುದು: (i) ಪ್ರತಿ ಪಿಪಿಐ (ಪೇಜ್ಯಾಪ್ ಪಿಪಿಐ) ಗೆ ಒಂದು ದಿನದಲ್ಲಿ ಎಷ್ಟು ಫಲಾನುಭವಿಗಳನ್ನು ಸೇರಿಸಬಹುದೆಂಬುದಕ್ಕೆ ಮಿತಿಯನ್ನು ನಿಗದಿ ಮಾಡಬಹುದು, (ii) ಹಣ ವರ್ಗಾವಣೆಗೆ ಸೂಕ್ತ ತಂಪು ಅವಧಿ (ಕೂಲಿಂಗ್ ಪೀರಿಯಡ್) ಯನ್ನು ನಿಗದಿಪಡಿಸುವುದು, ಪಿಪಿಐಅನ್ನು ತೆರೆದ ಕೂಡಲೆ ಅಥವಾ ಹಣವನ್ನು ಪಿಪಿಐಗಳಿಗೆ ಲೋಡಿಂಗ್/ರೀಲೋಡಿಂಗ್ ಮಾಡುವಾಗ ಅಥವಾ ಫಲಾನುಭವಿಯನ್ನು ಸೇರಿಸಿದ ನಂತರ ಪಿಪಿಐಅನ್ನು ವಂಚನೆಗೆ ಬಳಸಿದ್ದರಿಂದಾದ ತಪ್ಪಿನ ತೀವ್ರತೆಯನ್ನು ತಗ್ಗಿಸುವ ಉದ್ದೇಶದಿಂದ, ಮತ್ತು ಅದನ್ನೇ ಗ್ರಾಹಕರನ್ನು ಸ್ಥಿರಗೊಳಿಸುವುದು.

7.8 ಷರತ್ತು ಸಂಖ್ಯೆ 3 ಮತ್ತು 4ರಲ್ಲಿ ತಿಳಿಸಿರುವ ವಿಷಯಕ್ಕೆ ವಿರೋಧಭಾವವು ಏನೇ ಇದ್ದರೂ, ಪ್ರತಿ ವಿಧದ ಪಿಪಿಐ (ಪೇಜ್ಯಾಪ್ ಪಿಪಿಐ) ಗೆ ವಿಧಿಸಿರುವ ಮಿತಿಗಳು, ಕಾಲಾನುಕ್ರಮದಲ್ಲಿ ಬ್ಯಾಂಕು ವಿಧಿಸಬಹುದಾದ ನಿಮ್ನ(ಕೆಳ)ಮಟ್ಟದ ಮಿತಿಗಳು, ಗ್ರಾಹಕರ ಅಪಾಯ ನಿರ್ವಹಣೆ ಸಾಮರ್ಥ್ಯ, ಬ್ಯಾಂಕಿನ ಆಂತರಿಕ ಅಪಾಯ ನಿರ್ವಹಣೆ ಸಿದ್ಧಾಂತದಂತೆ, ಬ್ಯಾಂಕಿನ ಸ್ವಂತ ನಿರ್ಧಾರದಂತೆ, ಮತ್ತು ಆ ಎಲ್ಲ ಕೆಳಮಟ್ಟದ ಮಿತಿಗಳು, ಗ್ರಾಹಕರಿಗೆ ಅನಿವಾರ್ಯ ನಿರ್ಬಂಧಗಳಾಗಿರುತ್ತವೆ.

7.9 ಗ್ರಾಹಕರು ಬ್ಯಾಂಕಿಗೆ ಭರವಸೆಪೂರ್ವಕ ದೃಢೀಕರಿಸುವುದೇನೆಂದರೆ ತಾವು (ಗ್ರಾಹಕರು) ಒಂದಕ್ಕಿಂತ ಹೆಚ್ಚು ಪೇಜ್ಯಾಪ್ ಪಿಪಿಐಅನ್ನು ತಮ್ಮ ಹೆಸರಲ್ಲಿ ನೊಂದಾಯಿಸಿಕೊಳ್ಳು -ವುದಿಲ್ಲ ಎಂದು. ಯಾವುದೇ ಸಮಯದಲ್ಲಾದರೂ ಒಬ್ಬ ಗ್ರಾಹಕರು ಗರಿಷ್ಠ ಒಂದು ಪೇಜ್ಯಾಪ್ ಪಿಪಿಐ ಖಾತೆಯನ್ನು ಹೊಂದಿರಬಹುದು. ಈ ನಿಬಂಧನೆಯನ್ನು ಖಾತರಿಪಡಿಸುವ ಸಲುವಾಗಿ, ಬ್ಯಾಂಕು (ಬ್ಯಾಂಕಿನ ಬಾಧ್ಯತೆ ಇರುವುದಿಲ್ಲವಾದರೂ), ಆಗಾಗ್ಗೆ, ಪ್ಯಾನ್ (ಪಿಎಎನ್) ಆಧರಿಸಿ, ನಕಲು-ತೆರವು (ಡಿ-ಡ್ಯೂಪ್ಲಿಕೇಷನ್) ವ್ಯಾಯಾಮವನ್ನು ಕೈಗೊಳ್ಳಬಹುದು. ಒಂದು ಪ್ಯಾನ್‌ಗೆ ಒಂದಕ್ಕಿಂತ ಹೆಚ್ಚು ಪೇಜ್ಯಾಪ್ ಪಿಪಿಐ ಖಾತೆಗಳು ಲಿಂಕ್ ಆಗಿರುವುದು ಕಂಡುಬಂದಲ್ಲಿ ಅಥವಾ ಒಬ್ಬ ಗ್ರಾಹಕರು ಒಂದಕ್ಕಿಂತ ಹೆಚ್ಚು ಪೇಜ್ಯಾಪ್ ಪಿಪಿಐಗಳನ್ನು ಹೊಂದಿದ್ದಲ್ಲಿ, ಬ್ಯಾಂಕು ಯಾವ ಪೇಜ್ಯಾಪ್ ಪಿಪಿಐ ಖಾತೆಯನ್ನು ಸಶಕ್ತವೆಂದು ತೀರ್ಮಾನಿಸುವುದೋ ಅದೊಂದನ್ನು ಉಳಿಸಿಕೊಂಡು ಉಳಿದೆಲ್ಲ ಪೇಜ್ಯಾಪ್ ಪಿಪಿಐ ಖಾತೆಗಳನ್ನು ನಿಷ್ಕ್ರಿಯಗೊಳಿಸಬಹುದು ಮತ್ತು ಬ್ಯಾಂಕಿನ ಆ ನಿರ್ಧಾರವು ಗ್ರಾಹಕರಿಗೆ ಕಟ್ಟಾಜ್ಞೆಯಾಗಿರುತ್ತದೆ. ಅಲ್ಲದೇ, ಹಾಗೆ ನಿಷ್ಕ್ರಿಯಗೊಂಡ ಖಾತೆಗಳಿಗೆ ಸಂಬಂಧಿಸಿದಂತೆ ಮುಚ್ಚುವ ಕಾರ್ಯವಿಧಾನಗಳು ತಕ್ಷಣದಲ್ಲಿ ಪ್ರವೃತ್ತವಾಗುತ್ತವೆ.

